ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಸಂಚಿಕೆ: 48

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಡಿಸೆಂಬರ್ 2021, 02 ಫತಹ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
26 ರಬೀಉಸ್ಸಾನಿ 1443 ಹಿಜರಿ ಖಮರಿ.


ಅಲ್ಲಾಹನ ಉಪದೇಶ

اَلْحَمْدُ لِلّٰهِ الَّذِىْ خَلَقَ السَّمٰوٰتِ وَالْاَرْضَ وَجَعَلَ الظُّلُمٰتِ وَالنُّوْرَ ؕ ثُمَّ الَّذِيْنَ كَفَرُوْا بِرَبِّهِمْ يَعْدِلُوْنَ

(ಅಲ್‌ಮಾಇದ: : 118)

ಅಂದರೆ: ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸಿರುವ ಹಾಗೂ (ಎಲ್ಲತರ) ಅಂಧಕಾರಗಳನ್ನೂ ಪ್ರಕಾಶವನ್ನೂ ಉಂಟುಮಾಡಿರುವ ಅಲ್ಲಾಹನಿಗೆ ಸರ್ವಸ್ತುತಿಗಳು. ಆದರೂ ಅವಿಶ್ವಾಸಿಗಳು ತಮ್ಮ ಪ್ರಭುವಿಗೆ ಸಮಾನರನ್ನು ಕಲ್ಪಿಸುತ್ತಾರೆ.

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

### ಶ್ರೇಷ್ಠವಾದ ಕರ್ಮ

(1519) ಹ'ಝ್ರ'ತ್ ಅಬೂಹುರೈ(ರ) ವರದಿ ಮಾಡುತ್ತಾರೆ. ನಬಿ(ಸ) ರೊಂದಿಗೆ ಕೇಳಳಾಯಿತು. ಯಾವ ಕರ್ಮ ಎಲ್ಲ ಕರ್ಮಗಳಲ್ಲಿ ಶ್ರೇಷ್ಠವಾಗಿದೆ? ಅವರು ಹೇಳಿದರು. ಅಲ್ಲಾಹ್ ಮತ್ತು ಅವನ ಸಂದೇಶವಾಹನ ಮೇಲೆ ವಿಶ್ವಾಸ ತರುವುದು. ಮತ್ತೆ ಅದಾದ ನಂತರ ಯಾವುದು? ಹೇಳಿದರು ಅಲ್ಲಾಹನ ಮಾರ್ಗದಲ್ಲಿ ಜಿಹಾದ್. ಮತ್ತೆ ಯಾವುದು ಕೇಳಲಾಯಿತು? ಹೇಳಿದರು. ಸಮರ್ಪಣೆ ಮತ್ತು ಪುಣ್ಯ ದೃಷ್ಟಿಯಿಂದ ಮಾಡಲಾದ ಹಜ್ಜ್ ಆಗಿದೆ.

### ಹಜ್ಜಿನ ಮಹತ್ವ

(1521) ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ. ನಬಿ(ಸ) ನುಡಿದರು. ಯಾರು ಅಲ್ಲಾಹನಿಗಾಗಿ ಹಜ್ಜ್ ಮಾಡುತ್ತಾರೆ ಮತ್ತು ಅಶ್ಲೀಲ ಮಾತನ್ನು ಆಡುವುದಿಲ್ಲ ಮತ್ತು ದೈವಿಕ ಆಜ್ಞೆಗಳನ್ನು ಉಲ್ಲಂಘಿಸದೆ ಮರಳುತ್ತಾರೆ. ಅವರು ತನ್ನ ತಾಯಿಯ ಉದರದಿಂದ ಹುಟ್ಟಿದ ದಿವಸ ಯಾವ ರೀತಿ ಪವಿತ್ರವಾಗಿದ್ದರೋ ಅದೇ ರೀತಿ ಪವಿತ್ರರಾಗುವರು.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

**ಸಹಾಬರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತೋರಿಸಿದಂತೆ, ಸದಾ ತಮ್ಮ ನಡೆ ನುಡಿಗಳಲ್ಲಿ ಹೊಂದಾಣಿಕೆ ಇರಲಿ ಮತ್ತು ಅದರಲ್ಲಿ ಸಮತೋಲನ ಕಾಪಾಡಿಕೊಳ್ಳಿರಿ**

**ಹಝ್‌ರತ್ ಅಬೂಬಕರ್(ರ) ಅವರ ನಡತೆ ಎಂದೆಂದಿಗೂ ಮಾದರಿಯಾಗಿ ತಮ್ಮ ಮುಂದೆ ಇರಿಸಿಕೊಳ್ಳಿ, ಅವರು ತೋರಿಸಿದಂತಹ ಗೆಳೆತನದ ಉದಾಹರಣೆಯನ್ನು ಲೋಕವು ದೊರಕಿಸಿಕೊಡಲು ಸಾಧ್ಯವಿಲ್ಲ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ನಡೆನುಡಿ ಒಂದಾಗಿರಬೇಕು.

ನಿಜವಾಗಿಯೂ ಹೇಳಬೇಕಾದರೆ ಮನುಷ್ಯನ ನಡೆ ನುಡಿ ಒಂದಾಗಬೇಕಾಗಿರುವುದು ತುಂಬಾ ಅವಶ್ಯಕ. ಅದರಲ್ಲಿ ಹೊಂದಾಣಿಕೆ ಇಲ್ಲದಿದ್ದರೆ ಏನು ಪ್ರಯೋಜನವಿಲ್ಲ. ಆದುದರಿಂದಲೇ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ. "ಅತಾಮುರೂನನ್ನಾಸ್ ಬಿಲ್‌ಬಿರ್ರಿ ವ ತನ್ಸಾನ ಅನ್‌ಫುಸಕುಂ" (ಅಲ್–ಬಖರ–45) ಅಂದರೆ ನೀವು ಅತ್ತ ಲಕ್ಷ್ಯವಹಿಸುವುದಿಲ್ಲ, ಮರೆತು ಬಿಡುತ್ತೀರಿ. ಇನ್ನೊಂದೆಡೆಯೂ ಹೀಗೆ ನುಡಿದನು. "ಲಿಮಾ ತಕೂಲೂನ ಮಾಲಾ ತಫ್‌ಅಲೂನ್" (ಅಸ್ಸಫ್–3) ಅಂದರೆ ಸತ್ಯವಿಶ್ವಾಸ ಹೊಂದಿದವನಿಗೆ ಇಬ್ಬಗೆಯ ನೀತಿ ಸರಿಯಲ್ಲ. ಅದು ಪುಕ್ಕಲುತನ ಮತ್ತು ಕಪಟ ವಿಶ್ವಾಸವಾಗಿರುತ್ತದೆ. ಸದಾ ತಮ್ಮ ನಡೆ ನುಡಿಯಲ್ಲಿ ಹೊಂದಣಿಕೆ ತೋರಬೇಕು. ಅದರಲ್ಲಿ ಸಮತೋಲನ ಕಾಪಾಡಿಕೊಂಡು ಹೋಗಬೇಕು. ಸಹಾಬರು ತಮ್ಮ ಜೀವನದಲ್ಲಿ ನಡೆದು ತೋರಿಸಿದಂತೆ. ಅದೇ ರೀತಿ ಅವರ ಹೆಜ್ಜೆ ಗುರುತಿನಲ್ಲಿ ನೀವು ನಡೆದುಕೊಳ್ಳಿರಿ. ಮತ್ತು ಸತ್ಯನಿಷ್ಠೆಯನ್ನು ತೋರಿಸಿರಿ.

### ಹಝ್‌ರತ್ ಅಬೂಬಕರ್(ರ) ಅವರ ಮಾದರಿ ಮುಂದಿರಿಸಿಕೊಳ್ಳಿ.

ಹಝ್‌ರತ್ ರಸೂಲುಲ್ಲಾಹ್(ಸ) ರವರ ಆ ಕಾಲಘಟ್ಟದ ಮೇಲೆ ಸರಿಯಾಗಿ ವಿಚಾರ ಮಾಡಿ, ಆ ಖುರೈಶರು ಎಲ್ಲ ರೀತಿಯಿಂದಲೂ ಪೀಡಿಸುತ್ತಿದ್ದರು, ಅವಿಶ್ವಾಸಿಗಳು ಹಝ್‌ರತ್ ರಸೂಲುಲ್ಲಾಹ್(ಸ) ರವರನ್ನು ಹತ್ಯೆ ಮಾಡಲು ಯೋಜನೆ ಹಾಕಿದರು, ಆ ಕಾಲ ಬಹಳ ಪರೀಕ್ಷೆಯ ಕಾಲವಾಗಿತ್ತು. ಇಂದು ನೀವು ಯಾವ ಸ್ಥಿತಿಯಲ್ಲಿದ್ದೀರಿ. ತಾವೇ ಯೋಚಿಸಿಕೊಳ್ಳಿ. ಆ ರೀತಿಯ ಪರೀಕ್ಷೆ ಎದುರಾಗುತ್ತಿದ್ದರೆ ಯಾರು ಅವರಿಗೆ ಸಹಕರಿಸುತ್ತಿದ್ದರು ಅಥವಾ ಸರಕಾರವೇ ಆ ವ್ಯಕ್ತಿಯ ಮೇಲೆ ಯಾರ್ಯಾರು ಬೈಅತ್ ಮಾಡಿದ್ದಾರೆ ಎಂದು ತನಿಖೆ ನಡೆಸಲು ಹೊರಟರೆ, ನಾವು ಬೈಅತ್ ಮಾಡಿದ್ದೇವೆ ಎಂದು ಧೈರ್ಯ ತೋರಿಸುವರು. ಎಷ್ಟು ಜನ ಸಿಗಬಹುದಾಗಿದೆ. ನನಗೆ ತಿಳಿದಿದೆ ಕೆಲವರ ಕೈಕಾಲು ನಡುಗಬಹುದು, ಅವರಿಗೆ ತಕ್ಷಣ ತಮ್ಮ ಆಸ್ತಿ ಮತ್ತು ಸಂಬಂಧದ ವಿಚಾರ ಕಾಡಬಹುದು, ನಮಗೆ ಏನೇನೋ ಕೈಬಿಡಬಹುದಾಗಬಹುದು ಎಂದು. ಅಂತಹ ಕಷ್ಟಕಾಲದ ಸಮಯದಲ್ಲಿ ಸಹಕರಿಸುವುದು ಪರಿಪೂರ್ಣ ವಿಶ್ವಾಸ ಹೊಂದಿದ ಜನರಿಂದ ಮಾತ್ರ ಸಾಧ್ಯವಾಗಬಹುದು. ಅಂದರೆ ಆ ಕಾಲದಲ್ಲಿ ಹಝ್‌ರತ್ ರಸೂಲುಲ್ಲಾಹ್(ಸ) ರವರ ಮೇಲೆ ಕಠಿಣ ಪರೀಕ್ಷೆ ಬಂದ ಕಾಲವಾಗಿತ್ತು. ಅವರ ಹತ್ಯೆಗಾಗಿ ಹೊಂಚುಹಾಕಿ ಕುಳಿತಿದ್ದರು. ಅಂತಹ ಸಮಯದಲ್ಲಿ ಹಝ್‌ರತ್ ಅಬೂಬಕರ್(ರ) ತೋರಿಸಿದಂತಹ ಸಾಹಸ, ಮಿತ್ರತ್ವದ ಮಾದರಿ ಲೋಕವು ಉದಾಹರಣೆಯಾಗಿಯೂ ತೋರಿಸಲಾರದು. ಇಂತಹ ಶಕ್ತಿ ಮತ್ತು ಬಲ ದೃಢ ವಿಶ್ವಾಸವಿಲ್ಲದೆ ಆಗದು. ಎಲ್ಲಿಯವರೆಗೆ ಮನುಷ್ಯನು ತಮ್ಮ ನಡತೆಯ ಮೂಲಕ ಸಾಧಿಸಿ ತೋರಿಸುವುದಿಲ್ಲ ಏನೂ ಆಗದು. ನೆಪ ಒಡ್ಡುವುದರಿಂದ ಏನೂ ಆಗುವುದಿಲ್ಲ. ನಿಜವಾದ ರೂಪದಲ್ಲಿ ಬೆಂಕಿ ಹತ್ತಿದಾಗ ನಿಂತು ಸಹಕರಿಸುವವರು ತೀರ ಕಡಿಮೆ. ಹಝ್‌ರತ್ ಮಸೀಹರ ಹವಾರಿ (ಅನುಯಾಯಿ) ಆಪತ್ತು ಕಾಲದಲ್ಲಿ ಅವರನ್ನು ಬಿಟ್ಟು ಪಲಾಯನ ಮಾಡಿದ್ದರು ಮತ್ತು ಅವರ ಮುಂದೆಯೇ ಅವರಿಗೆ ಶಾಪ ಹಾಕಿದರು. **(ಮಲ್ಫೂಝಾತ್ ಸಂಪುಟ–1, ಪುಟ–338 ಮುದ್ರಣ 2018 ಖಾದಿಯಾನ್)**

**ಜನರಲ್ಲಿ ಜಿನ್ನ್ ಬಗ್ಗೆ ಯಾವ ಧಾರಣೆ ಮನೆ ಮಾಡಿದೆಯೋ ಅದರ ಯಾವ ಅಸ್ತಿತ್ವವು ಇಲ್ಲ.**
**ರಸೂಲುಲ್ಲಾಹ್(ಸ) ರವರ ಮೇಲೆ ಯಾವ ಜಿನ್ನ್‌ಗಳು ವಿಶ್ವಾಸ ತಂದಿದ್ದರೋ ಅವರು ಮನುಷ್ಯರೇ ಆಗಿದ್ದರು.**

ಸೂರ: ಅಲ್–ಜಿನ್ನ್ ಮತ್ತು ಸೂರ; ಅಹಖಾಫ್‌ದಿಂದ ತಿಳಿದುಬರುತ್ತದೆ. ಜಿನ್ನುಗಳ ಒಂದು ಮಾರ್ಗ ಹಝ್‌ರತ್ ರಸೂಲುಲ್ಲಾಹ್(ಸ) ರವರ ಎಲೆ ವಿಶ್ವಾಸ ತಂದಿತ್ತು. ಹದೀಸುಗಳಿಂದಲೂ ತಿಳಿದುಬರುತ್ತದೆ. ಜಿನ್ನುಗಳು ಒಂದು ವರ್ಗ ರಸೂಲುಲ್ಲಾಹ್(ಸ) ರನ್ನು ಭೇಟಿಯಾಗಲು ಬಂದಿತ್ತು. ಸಯ್ಯದ್‌ನಾ ಹಜ್‌ರತ್ ಮುಸ್ಲಿಹ್ ಮೌಊದ್(ರ) ಈ ವಿಷಯದ ಪ್ರಯುಕ್ತ ಹೇಳುತ್ತಾರೆ.

ಈಗ ಪ್ರಶ್ನೆ ಇರುವುದು ರಸೂಲುಲ್ಲಾಹ್(ಸ) ರವರ ಕಾಲದಲ್ಲಿ ಅವರ ಮೇಲೆ ವಿಶ್ವಾಸ ತಂದವರು ಯಾವ ರೀತಿಯ ಸೃಷ್ಟಿಯಾಗಿದ್ದರು ಎಂಬುದು. ಆ ಬಗ್ಗೆ ಪವಿತ್ರ ಖುರ್‌ಆನ್‌ನಿಂದ ಸಾಬೀತಾಗಿದೆ. ಅವರು ಯಹೂದಿಯಾಗಿದ್ದರು. ಏಕೆಂದರೆ ಅವರು ಮೂಸಾರವರ ಗ್ರಂಥದ ವಿಶ್ವಾಸ ತಂದ ಬಗ್ಗೆ ಉಲ್ಲೇಖಿಸುತ್ತಾರೆ. ಅಂದಹಾಗೆ ಅದರಿಂದ ತಿಳಿದುಬಂತು. ಅವರು ಯಹೂದಿ ಜನರಾಗಿದ್ದರು ಎಂದು. ಅಲ್ಲಾಹನು ಅವರಿಗೆ ಜಿನ್ನ್ ಎನ್ನಲು ಕಾರಣ ಅವರ ಹೊರಗಿನ ಜನರಾಗಿದ್ದರು ಮತ್ತು ರಸೂಲುಲ್ಲಾಹ್(ಸ)

*(ಪುಟ ಸಂಖ್ಯೆ–10 ರಲ್ಲಿ ಮುಂದುವರಿಸಲಾಗಿದೆ)*

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

إِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಯಾರಾದರೂ ಸರಿ ಯೇಸು ಮಸೀಹರ ದೃಷ್ಟಾಂತಗಳು ನನ್ನ ದೃಷ್ಟಾಂತಗಳಿಂದ ಹೆಚ್ಚು ಸಾಕ್ಷ್ಯಗಳು ಮತ್ತು ಸಂಖ್ಯೆಯಲ್ಲೂ ನನಗಿಂತ ಹೆಚ್ಚಾಗಿದ್ದವು ಎಂದು ಸಾಬೀತು ಪಡಿಸಿದರೆ ನಾನು ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ನೀಡುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಉದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಸಿರಾಜೆ ಮುನೀರ್" ರೂಹಾನಿ ಖಝಾಯೀನ್ ಸಂಪುಟ 12 ರಿಂದ ಪ್ರಸ್ತುತಪಡಿಸುತ್ತಿದ್ದೆವೆ. ಪ್ರವಾದಿಗಳ ಆಗಮನ ಮುಖ್ಯ ಉದ್ದೇಶ ಏಕದೇವತ್ವದ ಪ್ರಚಾರವೇ ಆಗಿರುತ್ತದೆ. ಏಕದೇವನ ಆರಾಧನೆಯ ಶಿಕ್ಷಣ ನೀಡುವುದೇ ಆಗಿರುತ್ತದೆ. ಅಲ್ಲಾಹನಿಗೆ ತನ್ನ ಏಕತ್ವ ಎಲ್ಲದಕ್ಕಿಂತ ಪ್ರಿಯವಾಗಿರುತ್ತದೆ. ಅವನು ಎಲ್ಲ ಪಾಪಗಳನ್ನು ಕ್ಷಮಿಸಬಹುದಾಗಿದೆ. ಆದರೆ ಬಹುದೇವಾರಾಧನೆಯನ್ನು ಕ್ಷಮಿಸುವುದಿಲ್ಲ. ಪವಿತ್ರ ಖುರ್‌ಆನ್‌ನಲ್ಲಿ ಆ ಪೈಕಿ ಹೀಗೆ ಹೇಳಿದನು. ಅಂದ ಹಾಗೆ ಪ್ರವಾದಿಗಳಿಗೂ ಅಲ್ಲಾಹನ ಏಕತ್ವ ಎಲ್ಲದಕ್ಕಿಂತ ಪ್ರಿಯವಾಗಿರುತ್ತದೆ. ಅವರು ಬಹುದೇವಾರಾಧನೆಯಿಂದ ಬಹಳ ದು:ಖಿತರಾಗುತ್ತಾರೆ. ಹಝ್ರತ್ ರಸೂಲುಲ್ಲಾಹ್(ಸ) ಕಠಿಣವಾದ ಅನಾರೋಗ್ಯದ ಸ್ಥಿತಿಯಲ್ಲೂ ತನ್ನ ಜನಾಂಗಕ್ಕೆ ವಿಶೇಷವಾಗಿ ಈ ಸಂದೇಶ ನೀಡಿದರು. ಎಚ್ಚರ! ಬಹುದೇವಾರಾಧನೆಯಲ್ಲಿ ತೊಡಗಬಾರದು. ಪ್ರವಾದಿಗಳು ಏಕದೇವತ್ವ ಬಗ್ಗೆ ತುಂಬಾ ಸ್ವಾಭಿಮಾನಿಗಳಾಗಿರುತ್ತಾರೆ. ಅದೇ ಕಾರಣದಿಂದ ಹಝ್ರತ್ ರಸೂಲುಲ್ಲಾಹ್(ಸ) ಅಬೂಸಾಲಿಗೆ ಹೀಗೆ ಉತ್ತರ ನೀಡಿದರು.

ಅದರಿಂದ ನನಗೆ ಸಾವುಂಟಾದರೂ ನಾನು ಸಂತೋಷದಿಂದ ಆ ಮರಣವನ್ನು ಸ್ವೀಕರಿಸುವೆನು. ನನ್ನ ಜೀವಿತ ಅದೇ ಮಾರ್ಗದಲ್ಲಿ ಸಮರ್ಪಿತಗೊಂಡಿದೆ. ನಾನು ಮರಣದ ಭಯದಿಂದ ಸತ್ಯವನ್ನು ಇಡಲಾರೆ. ನನಗೆ ನನ್ನ ಪ್ರಭುವಿನ ಆಜ್ಞೆಗಳು ನನ್ನ ಜೀವಕ್ಕಿಂತಲು ಪ್ರಿಯವಾಗಿವೆ. ಈ ಮಾರ್ಗದಲ್ಲಿ ನನ್ನ ಮರಣ ಉಂಟಾದರೆ ನಾನು ಮತ್ತೆ ಮತ್ತೆ ಜೀವ ಹೊಂದಿ ಅದೇ ಮಾರ್ಗದಲ್ಲಿ ಮರಣ ಹೊಂದಬಯಸುವೆನು. ನನಗೆ ಅದರಲ್ಲಿಯೇ ಅಂದರೆ ಆ ಮಾರ್ಗದಲ್ಲಿ ದುಃಖಪಡುವುದರಲ್ಲಿಯೇ ನನಗೆ ಸಂತೋಷವಿದೆ. (ಇಝಾಲಾ ಅವ್‌ಹಾಮ್ ಭಾಗ–1, ರೂಹಾನಿ ಖಝಾಈನ್ ಸಂಪುಟ–3, ಪುಟ 111)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ನಿಯುಕ್ತಗೊಂಡ ನಂತರ ಭಾರತದಲ್ಲಿ ವಿಶೇಷವಾಗಿ ಎರಡು ಸಮುದಾಯಗಳು ಹೀಗಿದ್ದವು. ಅವು ಬಹುದೇವರಾಧನೆಯಲ್ಲಿ ಮುಳುಗಿ ಹೋಗಿದ್ದವು. ಒಂದನೆಯದಾಗಿ ಹಿಂದೂ ಸಮುದಾಯವು ಎಲ್ಲಾ ವಸ್ತುಗಳನ್ನು ದೇವರನ್ನಾಗಿ ಮಾಡಿಬಿಟ್ಟಿದೆ. ಎರಡನೆ ಸಮುದಾಯ ಕ್ರಿಸ್ತರು ದುರ್ಬಲ ಹಾಗೂ ವಿವಶ ಮನುಷ್ಯನೊಬ್ಬನನ್ನು ದೇವನ ಸ್ಥಾನ ನೀಡಿದೆ. ಆ ಕಾಲದಲ್ಲಿ ಆರ್ಯರು ಹಿಂದೂಗಳಲ್ಲಿ ಅಂದರೆ ಸನಾತನ ಧರ್ಮದಲ್ಲಿ ಒಂದು ಹೊಸ ಪಂಥ ರೂಪದಲ್ಲಿ ಮೂಡಿ ಬಂದಿತ್ತು. ಈ ಪಂಥ ಅತ್ಯಂತ ಉಪದ್ರವಿ, ಕ್ರೂರಿ ಹಾಗೂ ಇಸ್ಲಾಂ ಧರ್ಮದ ಮೇಲೆ ಕ್ರೈಸ್ತರ ರೀತಿ ಆಕ್ರಮಣಶೀಲರಾಗಿದ್ದರು. ಹೇಳಳೀಕ್ಕೇನು ಅವರು ಮೂರ್ತಿ ಪೂಜೆಯನ್ನು ವಿರೋಧಿಸುತ್ತಾರೆ. ಆದರೆ ದೇವನ ಪ್ರತಿ ಅವರ ವಿಶ್ವಾಸಗಳು ಅತ್ಯಂತ ಅಪಾಯಕರವಾಗಿದ್ದವು. ಅದೇ ಕಾರಣ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

"ನಾಸ್ತಿಕರ ನಂತರ ಇಡೀ ಲೋಕದಲ್ಲಿ ಆರ್ಯರಿಗಿಂತ ನಿಕೃಷ್ಟ ಧರ್ಮ ಇನ್ನೊಂದಿಲ್ಲ. ಏಕೆಂದರೆ ಅವರು ದೇವನನ್ನು ಅತ್ಯಂತ ಕೀಳು ರೀತಿಯಲ್ಲಿ ವರ್ತಿಸುತ್ತಾರೆ. ಅವನನ್ನು ಸೃಟಿಕರ್ತ ಮತ್ತು ಪರಿಪಾಲಕನೆಂದು ಭಾವಿಸುವುದಿಲ್ಲ ಮತ್ತು ಇಡೀ ಲೋಕವನ್ನು ಅಲ್ಲದೇ ಲೋಕದ ಅಣು ಅಣುವಿಗೂ ಅದರ ಭಾಗಿದಾರನಾಗಿ ಪರಿಗಣಿಸುತ್ತಾರೆ. (ಬರಾಹೀನೆ ಅಹ್ಮದಿಯಾ, ಭಾಗ–4, ರೂಹಾನಿ ಖಝಾಈನ್, ಸಂಪುಟ–19, ಪುಟ–479)

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು.

"ಭೇಷ್ ಓ ಸನಾತನ ಧರ್ಮೀಯರೇ, ನೀವು ಪ್ರತಿಯೊಂದು ಅಣುವಿಗೂ ಮತ್ತು ಪ್ರತಿಯೊಂದು ಜೀವಿಯನ್ನು ತನ್ನ ಅಸ್ತಿತ್ವವನ್ನು ಅದನ್ನೇ ಪರಮೇಶ್ವರ ಎಂದು ಭಾವಿಸಿದ್ದೀರಿ ಮತ್ತು ನ್ಯೂಗದಂತಹ ಅಪವಿತ್ರ ಪದ್ಧತಿಯನ್ನು ತನ್ನ ವಿಶ್ವಾಸದಲ್ಲಿ ಸೇರಿಸಿಕೊಂಡಿದ್ದೀರಿ. ಆದುದರಿಂದ ನಾನು ಸತ್ಯವಾಗಿ ಹೇಳುತ್ತೇನೆ. ನೀವು ಹಿಗೆ ಇನ್ನು ಮುಂದೆ ಹೆಜ್ಜೆ ಹಾಕಿದರೆ, ಪರಮೇಶ್ವರನ ಪ್ರೇಮದಲ್ಲಿ ಮಗ್ನರಾದ ಜೋಗಿಗಳಂತೆ ಆಗುವಿರಿ, ಮೂರ್ತಿ ಪೂಜೆಯನ್ನು ಬಿಟ್ಟು ಅವನ ಸಾಮೀಪ್ಯ ಹೊಂದುವಿರಿ. ಆರ್ಯರ ಮುಂದೆ ಎಲ್ಲ ಮೈದಾನಗಳಲಿಲ ನೀವು ವಿಜಯಿಯಾಗುವಿರಿ. ಒಂದು ಮಾರ್ಗದಿಂದ ನಿನ್ನ ಎದುರಿಗೆ ಬಂದರೆ ಏಳು ಮಾರ್ಗದಿಮದ ಓಡಿ ಹೋಗುವರು. ಇದೇನು ಹೊಸ ಮಾತಲ್ಲ, ಜೋಗಿಯರು ಪ್ರೇಮ ಅಗ್ನಿಯಲ್ಲಿ ಭಸ್ಮವಾಗುತ್ತಾರೆ. ಅದೇ ಧರ್ಮವಾಗಿದೆ. ಪರಮೇಶ್ವರನನ್ನು ಹೊರತು ಎಲ್ಲವೂ ನಿಕೃಷ್ಟವಾಗಿದೆ." (ಸನಾತನ್ ಧರ್ಮ, ರೂಹಾನಿ ಖಝಾಈನ್, ಸಂಪುಟ–19, ಪುಟ–479)

ಓರ್ವ ಮಹೋನ್ನತ ಪ್ರವಾದಿಯಾದ ಕಾರಣ ಮತ್ತು ಅಲ್ಲಾಹನ ಸಂದೇಶವಾಹಕರಾದ ನೆಲೆಯಲ್ಲಿ ಸನಾತನಿಯಕ, ಆರ್ಯರ ಮತ್ತು ಕ್ರೈಸ್ತರ ಬಹುದೇವಾರಾಧನೆಗಳ ವಿಶ್ವಾಸವನ್ನು ಕಂಡು ಅವರು (ಅ) ಬಹಲಷ್ಟು ದು:ಖ ಪಡುತ್ತಿದ್ದರು. ಕ್ರೈಸ್ತರು ಮತ್ತು ಆರ್ಯರು ತಮ್ಮ ಅಪವಿತ್ರ ವಿಶ್ವಾಸಗಳ ನಂತರ ಇಸ್ಲಾಮ್ ಧರ್ಮದ ಮೇಲು ಆಕ್ರಮಣ ಮಾಡುವ ದೃಷ್ಟಿಯಿಂದ ಸಯ್ಯದನಾ ಹಝ್ರತ್ ಮಸೀಹ್ ಮೌಊದ್ (ಅ) ಆ ಎರಡೂ ಸಮುದಾಯಗಳಿಗೆ ತಕ್ಕ ಶಾಸ್ತಿ ಮಾಡಿದರು. ಮತ್ತು ಅವರ ಬಹುದೇವರಾಧನೆಗಳ ವಿಶ್ವಾಸದ ಅಸಲಿಯಿತ್ತು. ನಗ್ನಗೊಳಿಸಿದರು. ಕ್ರೈಸ್ತರ ವಿಶ್ವಾಸಗಳನ್ನು ಬಯಲಿಗೆ ತರುವುದು ಅವರ ಗುರಿಯಾಗಿತ್ತು. ಅದನ್ನು ಹದೀಸುಗಳಲ್ಲಿ "ಯಕ್ಷರಸ್ವಲೇಖ" ಪದಗಳನ್ನು ಬಳಸಲಾಗಿದೆ. ಆ ಪೈಕಿಯೇ ಕ್ರೈಸ್ತ ಸಮುದಾಯವನ್ನು ಹಲವು ರೀತಿಯ ಪಂಥ್ವಾನ ನೀಡಿದರು ಅದರಲಿ ಈ ವಿಷಯಕ್ಕೆ ನಾವು ನೀಡಿದ ಶೀರ್ಷಿಕೆಯು ಒಮದಾಗಿದೆ. ಕ್ರೈಸ್ತರ ಹಝ್ರತ್ ಈಸಾರನ್ನು ದೇವನೆಂದು ನಂಬುತ್ತಾರೆ. ಸ್ಪಷ್ಟವಿದೆ. ದೇವನಲ್ಲಿ ಮನುಷ್ಯನಿಗಿಂತ ಹೆಚ್ಚು ಶಕ್ತಿ ಇರಬೇಕಾಗಿದೆ. ಮತ್ತು ದೇವನಾದ ನೆಲೆಯಲ್ಲಿ ಅವನಿಂದ ಹೆಚ್ಚು ಪವಾಡಗಳು ಮತ್ತು ದೃಷ್ಟಾಂತಗಳು ಜನರಿಗೆ ತೋರಿಸಬೇಕಾಗಿದೆ. ಈ ಬಗ್ಗೆ ಸೈಯದ್‌ನ ಹಝ್ರತ್ ಮಸೀಹ್ ಮೌಊದ್ (ಅ) ಅವರು ಕ್ರೈಸ್ತ ಸಮುದಾಯಕ್ಕೆ ಈ ಪಂಥ್ವಾನ ನೀಡಿದರು ಹಝ್ರತ್ ಈಸಾ(ಅ) ರ ಕೆಲ ಪವಾಡಗಳನ್ನು ದೃಷ್ಟಾಂತಗಳನ್ನು ಹಿಡಿದುಕೊಂಡು ಅವರಿಗೆ ಅಷ್ಟೊಂದು ಉನ್ನತ ದರ್ಜೆಗೆ ಏರಿಸಲಾಗುತ್ತದೆ. "ಮನುಷ್ಯನಿಂದ ದೇವನನ್ನಾಗಿ ಮಾಡಲಾಗುತ್ತದೆ. ಆದರೆ ವಾಸ್ತವದಲ್ಲಿ ಈಸ(ಅ) ರ ಪವಾಡಗಳು ಮತ್ತು ಪವಾಡಗಳ ದೃಷ್ಟಾಂತಗಳಿಗಿಂತ ಹೆಚ್ಚೇನೂ ಇಲ್ಲ. ಯಾರಾದರೂ ಈಸ (ಅ) ರ ಪವಾಡಗಳು ದೃಷ್ಟಾಂತಗಳು ನನ್ನ ಪವಾಡಗಳ ದೃಷ್ಟಾಂತಗಳಿಂದ ಹೆಚ್ಚಾಗಿದ್ದವು ಎಂದು ಸಾಬೀತು ಮಾಡಿದರೆ ನಾನು ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ನೀಡುವೆನು. ಅಂದಹಾಗೆ ಅವರು ಹಿಗೆ ಪಂಥಾಹ್ವಾನ ನೀಡಿದರು.

**ಒಂದು ಸಾವಿರ ರೂಪಾಯಿಗಳ ವೈಭವಪೂರಿತ ಬಹುಮಾನದ ಪಂತಹ್ವಾನ.**

ನಾನು ಈ ಸಮಯ ಒಂದು ದೃಢವಾದ ವಾಗ್ದಾನನೊಂದಿಗೆ ಈ ಪತ್ರಿಕೆ ಪ್ರಕಟಪಡಿಸುತ್ತಿದ್ದೇನೆ. ಯಾರಾದರೂ ಕ್ರೈಸ್ತ ಮಹಾನಿಯರು ಏಸುವಿನ ದೃಷ್ಟಾಂತಗಳನ್ನು ದೇವನಿಗೆ ಸಮಾನ ಎಂದು ಭಾವಿಸುತ್ತೀರಿ. ನನ್ನ ದೃಷ್ಟಾಂತಗಳ ಮತ್ತು ಪವಾಡಗಳನ್ನು ಸಾಕ್ಷ್ಯಗಳ ನೆಲೆಯಲ್ಲೂ ಮತ್ತು ಸಂಖ್ಯೆಗಳ ನೆಲೆಯಲ್ಲೂ ಹೆಚ್ಚಾಗಿದ್ದವು ಎಂದು ಸಾಬೀತುಪಡಿಸಿದರೆ ನಾನು ಅವರಿಗೆ ಒಂದು ಸಾವಿರ ರೂಪಾಯಿಗಳನ್ನು ಬಹುಮಾನ ರೂಪದಲ್ಲಿ ನೀಡುವೆನು. ನಾನು ಸತ್ಯವಾಗಿಯೂ ಮತ್ತು ಪ್ರಮಾಣ ಮಾಡಿ ಹೇಳುತ್ತೇನೆ. ಅದರಲ್ಲಿ ಲೋಪವಿರುವುದಿಲ್ಲ. ನಾನು ನಿಮ್ಮ ಭರವಸೆಯ ತೃತೀಯ ತೀರ್ಪುಗಾರನೊಬ್ಬನ ಬಳಿ ಆ ಮೊತ್ತ ಜಮಾ ಮಾಡುವೆನು. (ಸಿರಾಜೆ ಮಾನೀರ್, ರೂಹಾನಿ ಖಾಝಾಈನ್, ಸಂಪುಟ–12, ಕೊನೆಯ ಪುಟ)

ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮಲೌಊದ್(ಅ) ರವರ ಕೆಲ ರೋಚಕ ಮತ್ತು ಮಾರ್ಗದರ್ಶನ ಎಂಬುದಕ್ಕೆ ಪುರಾವೆಯಾಗಿ ನೀಡುತ್ತಿದ್ದೇವೆ. ಮತ್ತೆ ನಾವು ಅಸಲು ವಿಷಯದೆಡೆ ಮರಳುತ್ತೇವೆ. ಅವರು (ಅ) ಹೇಳುತ್ತಾರೆ.

**ಹಸಿವು ಮತ್ತು ಬಾಯಾರಿಕೆ, ಪೀಡನೆ ಮತ್ತು ರೋಗ, ಅವರು ಎಲ್ಲದರಲ್ಲೂ ವಿವಶರಾಗಿದ್ದರು.**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಇಂಜೀಲಿನ ವಿವರದಿಮದ ಸ್ಪಷ್ಟವಿದೆ. ಅವರು ಬಂಧಿಯಾಗುವ ಮುಂಚೆ ಹಲವು ಸಲ ರಾತ್ರಿಯ ಸಮಯದಲ್ಲಿ ತನ್ನ ರಕ್ಷಣೆಗೋಸ್ಕರ ಪ್ರಾರ್ಥಿಸುತ್ತಿದ್ದರು ಮತ್ತು ಆ ಪ್ರಾರ್ಥನೆಗಳು ಸ್ವೀಕಾರಬೇಕು ಎಂದು ಇಚ್ಛಿಸುತ್ತಿದ್ದರು. ಆದರೆ ಅವರ ಪ್ರಾರ್ಥನೆ ಸ್ವೀಕಾರಗೊಳ್ಳಲಿಲ್ಲ. ಅಲ್ಲದೇ ಸಾಧಾರಣ ದಾಸರಂತೆಯೇ ರಕ್ಷಿಸಲ್ಪಟ್ಟರು. ಅವರು ಶೈತಾನದಿಂದ ಪರೀಕ್ಷಿಸಲ್ಪಟ್ಟರು. ಅದರಿಂದ ಸ್ಪಷ್ಟವಿದೆ. ಅವರು ಎಲ್ಲದರಲ್ಲೂ ವಿವಶರಾಗಿಯೇ ಉಳಿದರು. ಎಲ್ಲರಂತೆಯೇ ಉದರಿಂದ ಅಪವಿತ್ರ ಸ್ಥಾನದಿಂದಲೇ ಜನನ ಪಡೆದು ದೀರ್ಘ ಅವಧಿಯವರೆಗೆ ಹಸಿವು, ಬಾಯಾರಿಕೆ, ಪೀಡನೆ ಮತ್ತು ರೋಗಗಳ ಕಷ್ಟಗಳನ್ನು ಅನುಭವಿಸಿದರು. ಒಂದು

*(ಪುಟ 11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಅಬೂಬಕ್ರ್ ಮತ್ತು ಉಮರ್, ಪ್ರವಾದಿಗಳನ್ನು ಹೊರತುಪಡಿಸಿ ಆರಂಭ ಮತ್ತು ಕೊನೆಯ ಎಲ್ಲ ಹಿರಿ ವಯಸ್ಸಿನ ಜನರ ನೇತಾರರಾಗಿರುವರು.**

**ಹಝ್ರತ್ ಪೈಗಂಬರ್(ಸ) ಹೇಳಿದರು: ಉಮರ್ ಬಿನ್ ಖ಼ತ್ತಾಬ್ ಸ್ವರ್ಗವಾಸಿಗಳ ದೀಪವಾಗಿರುವರು**

**ನಿಮಗಿಂತ ಹಿಂದಿನ ಸಮುದಾಯಗಳಲ್ಲಿ ಮುಹದ್ದಸ್ ಇರುತ್ತಿದ್ದರು. ನನ್ನ ಉಮ್ಮತಿನಲ್ಲಿ ಹಾಗೆ ಯಾರಾದರೂ ಇರುವುದಾದರೆ, ಅವರು ಉಮರ್ ಬಿನ್ ಖ಼ತ್ತಾಬ್ ಆಗಿರುವರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಫಾರೂಖೇ ಆಝಮ್ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಓರ್ವ ದಿವಂಗತರಾದ ಸನ್ಮಾನ್ಯ ಡಾಕ್ಟರ್ ತಾಸೀರ ಮುಜ್‌ತಬಿ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29–10–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಅಬೂಮೂಸಾ(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್‌ರೊಂದಿಗೆ(ಸ) ಮದೀನದ ಒಂದು ತೋಟದಲ್ಲಿದ್ದೆ. ಅಲ್ಲಿಗೆ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಬಂದರು. ನಾನು ಅವರಿಗೆ ಹಝ್ರತ್ ಪೈಗಂಬರರ(ಸ) ನಿರ್ದೇಶನದ ಪ್ರಕಾರ ಸ್ವರ್ಗದ ಸುವಾರ್ತೆಯನ್ನು ನೀಡಿದೆನು. ಆಗ ಅವರು ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಆದರೆ ಹಝ್ರತ್ ಉಸ್ಮಾನ್(ರ) ಬಂದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರಿಗೆ ಒಂದು ವಿಪತ್ತು ಬಂದೆರಗುವುದಾದರೂ ಅವರಿಗೂ ಸ್ವರ್ಗದ ಸುವಾರ್ತೆಯನ್ನು ನೀಡು. ಹಝ್ರತ್ ಉಸ್ಮಾನ್(ರ) ಅಲ್‌ಹಮ್ದುಲಿಲ್ಲಾಹ್ ಎಂದು ಹೇಳಿದರು. ಅನಂತರ ಹೀಗೆ ಹೇಳಿದರು: ವಿಪತ್ತಿನಿಂದ ರಕ್ಷಣೆ ಪಡೆಯಲು ಅಲ್ಲಾಹನಿಂದಲೇ ನಾನು ಸಹಾಯವನ್ನು ಬೇಡುತ್ತೇನೆ. (ಸಹೀಹ್ ಬುಖಾರಿ ಕಿತಾಬ್ ಫಝಾ–ಎಲುಸ್ಸಹಾಬ, ಹದೀಸ್–3693)

ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಸ್ವರ್ಗದ ಸುವಾರ್ತೆಯನ್ನು ನೀಡಿದ್ದ ಹತ್ತು ವ್ಯಕ್ತಿಗಳಲ್ಲಿ ಹಝ್ರತ್ ಉಮರ್(ರ) ಅಲ್ಲದೇ ಹಝ್ರತ್ ಅಬೂಬಕ್ರ್, ಉಸ್ಮಾನ್, ಅಲಿ, ತಲ್‌ಹ, ಝುಬೇರ್, ಅಬ್ದುರ್ರಹ್ಮಾನ್ ಬಿನ್ ಔಫ್, ಸಅದ್ ಬಿನ್ ಅಬೀ ವಖಾಸ್, ಸಈದ್ ಬಿನ್ ಝೈದ್, ಅಬೂಉಬೈದ ಬಿನ್ ಜರಾಹ್ ಸೇರುತ್ತಾರೆ. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಅಧ್ಯಾಯ ಮನಾಖಿಬ್ ಅಬ್ದುರ್ರಹ್ಮಾನ್ ಬಿನ್ ಔಫ್ ಹದೀಸ್–3747)

ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಒಂದು ಬಾರಿ ನಾನು ನಿದ್ದೆ ಹೋಗಿದ್ದಾಗ ಕನಸಿನಲ್ಲಿ ನಾನು ನನ್ನನ್ನು ಸ್ವತಃ ಸ್ವರ್ಗದಲ್ಲಿ ಒಂದು ಅರಮನೆಯ ಸಮೀಪ ಕಂಡೆನು. ಅದು ಉಮರ್ ಬಿನ್ ಖ಼ತ್ತಾಬ್‌ರದ್ದಾಗಿದೆ ಎಂದು ಕೇಳಿದಾಗ ಗೊತ್ತಾಯಿತು. ಉಮರರ ಅಭಿಮಾನಕ್ಕೆ ಕುಂದುಂಟಾಗದಿರಲಿ ಎಂಬ ಚಿಂತೆಯಿಂದ ನಾನು ಮರಳಿಬಂದೆ. ಇದನ್ನು ಕನಸನ್ನು ಕೇಳಿ ಅಲ್ಲಿ ಕುಳಿತಿದ್ದ ಹಝ್ರತ್ ಉಮರ್(ರ) ಅತ್ತುಬಿಟ್ಟು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನಿಮ್ಮಿಂದ ನನ್ನ ಅಭಿಮಾನಕ್ಕೆ ಕುಂದುಂಟಾಗುವುದೇ? ನೀವು ಏಕೆ ಮರಳಿ ಹೋಗಿದ್ದೀರಿ? ನೀವು ಅನುಗ್ರಹಿಸಬೇಕಾಗಿತ್ತು.

ಹಝ್ರತ್ ಅಬೂಸಈದ್ ಖ಼ುದ್‌ರಿ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಅತ್ಯಂತ ಮೇಲಿನ ಪದವಿಯ ಸ್ವರ್ಗವಾಸಿಗಳಲ್ಲಿ ಯಾರಾದರೊಬ್ಬರು ಸಾಮಾನ್ಯ ಸ್ವರ್ಗವಾಸಿಗಳು ಇರುವ ಸ್ಥಳವನ್ನು ಇಣುಕಿ ನೋಡಿದರೆ, ಅವರ ಮುಖದ ಕಾರಣದಿಂದ ಸ್ವರ್ಗದ ಆ ಪ್ರದೇಶವು ಹೊಳೆಯುವುದು. ಹಝ್ರತ್ ಅಬೂಬಕರ್ ಮತ್ತು ಹಝ್ರತ್ ಉಮರ್ ಸಹ ಅವರಲ್ಲಿ ಸೇರಿದವರಾಗಿರುವರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3694)

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅಬೂಬಕ್ರ್ ಮತ್ತು ಉಮರ್, ಪ್ರವಾದಿಗಳನ್ನು ಹೊರತುಪಡಿಸಿ ಆರಂಭ ಮತ್ತು ಕೊನೆಯ ಎಲ್ಲ ಹಿರಿ ವಯಸ್ಸಿನ ಜನರ ನೇತಾರರಾಗಿರುವರು. (ಸುನನ್ ಅತ್ತಿರ್‌ಮಿಝಿ ಕಿತಾಬುಲ್ ಮನಾಖಿಬ್, ಹದೀಸ್–3664)

ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ಉಮರ್ ಬಿನ್ ಖ಼ತ್ತಾಬ್ ಸ್ವರ್ಗವಾಸಿಗಳ ದೀಪವಾಗಿರುವರು. (ಹುಲ್ಯತುಲ್ ಔಲಿಯಾ, ಇಮಾಮ್ ಅಸ್‌ಫಿಯಾ, ಸಂಪುಟ–6, ಪುಟ–309, ವರದಿ–8950, ಮಕ್ತಬತುಲ್ ಈಮಾನ್ ಅಲ್‌ಮನ್ಸೂರ 2007)

ಹಝ್ರತ್ ಉಖ್‌ಬ ಬಿನ್ ಆಮಿರ್ ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೇಳಿದರು: ನನ್ನ ನಂತರ ಯಾರಾದರೂ ನಬಿಯಾಗಿರುತ್ತಿದ್ದರೆ ಉಮರ್ ಬಿನ್ ಖ಼ತ್ತಾಬ್ ಆಗುತ್ತಿದ್ದರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3686), (ಸಹೀಹ್ ಮುಸ್ಲಿಮ್ ಕಿತಾಬುಲ್ ಫಿತನ್, ಹದೀಸ್–7373)

ಹಝ್ರತ್ ಅಬೂ ಹುರೈರ(ರ) ಮತ್ತು ಹಝ್ರತ್ ಆಇಶ(ರ) ವರದಿ ಮಾಡುತ್ತಾರೆ: ನನ್ನ ಉಮ್ಮತಿನಲ್ಲಿ ಯಾರಾದರೂ ಮುಹದ್ದಸ್ ಇರುವುದಾದರೆ, ಅವರು ಉಮರ್ ಬಿನ್ ಖ಼ತ್ತಾಬ್ ಆಗಿರುವರು. (ಸುನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3693)

ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ: ನಿಮಗಿಂತ ಹಿಂದಿನ ಸಮುದಾಯಗಳಲ್ಲಿ ಮುಹದ್ದಸ್ ಇರುತ್ತಿದ್ದರು. ನನ್ನ ಉಮ್ಮತಿನಲ್ಲಿ ಹಾಗೆ ಯಾರಾದರೂ ಇರುವುದಾದರೆ, ಅವರು ಉಮರ್ ಬಿನ್ ಖ಼ತ್ತಾಬ್ ಆಗಿರುವರು. ಬಹಳ ಹೆಚ್ಚಾಗಿ ದಿವ್ಯವಾಣಿಗಳು ಮತ್ತು ದಿವ್ಯದರ್ಶನಗಳು ಲಭಿಸುವ ವ್ಯಕ್ತಿಯನ್ನು ಮುಹದ್ದಸ್ ಎಂದು ಹೇಳಲಾಗುತ್ತದೆ. ಮತ್ತೊಮ್ಮೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮಗಿಂತ ಮುಂಚೆ ದಾಟಿ ಹೋದ ಬನೀ ಇಸ್ರಾಈಲ್ ಸಮುದಾಯದಲ್ಲಿ ಅಲ್ಲಾಹನೊಡನೆ ಸಂಭಾಷಣೆ ನಡೆಸುತ್ತಿದ್ದ ಜನರು ಇದ್ದರು. ಅವರು ಪ್ರವಾದಿಗಳಾಗಿರಲಿಲ್ಲ. (ಎಂದರೆ ಪ್ರವಾದಿಗಳಲ್ಲದ ವ್ಯಕ್ತಿಗಳೊಡನೆ ಸಹ ಅಲ್ಲಾಹನು ಮಾತುಕತೆ ನಡೆಸುತ್ತಿದ್ದನು.) ನನ್ನ ಸಮುದಾಯದಲ್ಲಿ ಅಂತಹ ವ್ಯಕ್ತಿ ಉಮರ್ ಆಗಿರುವರು. (ಸಹೀಹ್ ಅಲ್‌ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–3689)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಯಾವಾಗಲೂ ಉಪಮೆಗಳನ್ನು ನೀಡುತ್ತಾನೆ. ಸ್ವಭಾವ, ವೈಶಿಷ್ಟ್ಯ, ಗುಣ ಮತ್ತು ಯೋಗ್ಯತೆಯ ದೃಷ್ಟಿಯಲ್ಲಿ ಒಬ್ಬರ ಹೆಸರನ್ನು ಇನ್ನೊಬ್ಬರಿಗೆ ನೀಡುತ್ತಾನೆ. ಇಬ್ರಾಹೀಮರ ಹೃದಯಕ್ಕೆ ಸಮಾನವಾದ ಹೃದಯವನ್ನು ಹೊಂದಿದವನು ಅಲ್ಲಾಹನ ದೃಷ್ಟಿಯಲ್ಲಿ ಇಬ್ರಾಹೀಂ ಆಗಿರುತ್ತಾನೆ. ಉಮರ್ ಫಾರೂಖ್‌ರ ಹೃದಯದಂತಹ ಹೃದಯವನ್ನು ಹೊಂದಿರುವವನು ಉಮರ್ ಆಗಿರುತ್ತಾನೆ.

ಅಲ್ಲಾಹನ ಸಂಭಾಷಣೆ ಉಮರಿನ ನಂತರ ಕೊನೆಗೊಂಡಿದೆ ಎಂದಾಗಿದೆಯೇ ಈ ಹದೀಸಿನ ಅರ್ಥ. ಖಂಡಿತವಾಗಿಯೂ ಅಲ್ಲ. ಬದಲಾಗಿ ಈ ಹದೀಸಿನ ಅರ್ಥವೇನೆಂದರೆ, ಯಾರ ಆಧ್ಯಾತ್ಮಿಕ ಸ್ಥಿತಿಯು ಉಮರರ ಆಧ್ಯಾತ್ಮಿಕ ಸ್ಥಿತಿಗೆ ಸಮಾನವಾಗಿರುವುದೋ ಅವನು ಆವಶ್ಯಕವಾದ ಸಮಯದಲ್ಲಿ ಮುಹದ್ದಸ್ ಆಗಿರುವನು. **"ಫೀಕ ಮಾದತುನ್ ಫಾರೂಖಿಯ"** ಎಂದು ನನಗೂ ಒಂದು ಬಾರಿ ಈ ಕುರಿತು ದಿವ್ಯವಾಣಿ ಲಭಿಸಿತ್ತು. (ಫ಼ತಹ್ ಇಸ್ಲಾಮ್, ರೂಹಾನಿ ಖಝಾಈನ್, ಸಂಪುಟ–3, ಪುಟ–11 ಅಡಿಟಿಪ್ಪಣಿ)

ಅದರ ಪೂರ್ಣ ರೂಪ ಹೀಗಿದೆ: **“ಅಂತ ಮುಹದ್ದಸುಲ್ಲಾಹ್ ಫೀಕ ಮಾದತುನ್ ಫಾರೂಖಿಯ”** ಎಂದರೆ, ನೀನು ಅಲ್ಲಾಹನಿಂದ ದಿವ್ಯವಾಣಿ ಪಡೆಯುವವನಾಗಿರುವಿ. ನಿನ್ನಲ್ಲಿ ಉಮರ್ ಫಾರೂಖರ ಗುಣವಿದೆ.
(ತಧ್ಕರ, ಪುಟ–82, ಆವೃತ್ತಿ–4)

ಹಝ್ರತ್ ಉಮರ್(ರ) ಪವಿತ್ರ ಖುರ್‌ಆನಿನ ಸಂರಕ್ಷಣೆ ಮತ್ತು ಸಂಕಲನ ಮಾಡುವುದರ ಕುರಿತು ಸಲಹೆ ನೀಡಿದ್ದರು ಎಂದು ಸ್ವಲ್ಪ ಹಿಂದಿನ ಕೆಲವು ಖುತ್ಬಗಳಲ್ಲಿ ನಾನು ಹೇಳಿದ್ದೆ. ಈ ಕುರಿತು ಇಲ್ಲೂ ಪ್ರಸ್ತಾಪಿಸುವೆನು. ಹಝ್ರತ್ ಅಬೂಬಕರ್‌ರ(ರ) ಕಾಲದಲ್ಲಿ ಯಮಾಮ ಯುದ್ಧದಲ್ಲಿ ಎಪ್ಪತ್ತು ಪವಿತ್ರ ಖುರ್‌ಆನ್ ಹಾಫಿಝ್‌ಗಳು ಶಹೀದಾಗಿದ್ದರು. ಈ ಕುರಿತು ಹಝ್ರತ್ ಝೈದ್ ಬಿನ್ ಸಾಬಿತ್ ಅನ್ಸಾರಿ ವರದಿ ಮಾಡುತ್ತಾರೆ: ಯಮಾಮದ ಜನರು ಶಹೀದ್ ಆದಾಗ, ಹಝ್ರತ್ ಅಬೂಬಕ್ರ್(ರ) ನನ್ನನ್ನು ಕರೆದರು. ಆಗ ಅವರ ಸಮೀಪದಲ್ಲಿ ಹಝ್ರತ್ ಉಮರ್(ರ) ಇದ್ದರು. ಹಝ್ರತ್ ಅಬೂಬಕ್ರ್(ರ) ಹೇಳಿದರು: ಉಮರ್ ನನ್ನ ಬಳಿ ಬಂದಿರುವರು. ಹಝ್ರತ್ ಉಮರ್(ರ) ಹೇಳಿದರು: ಯಮಾಮದ ಯುದ್ಧದಲ್ಲಿ ಬಹಳಷ್ಟು ಜನರು ಹುತಾತ್ಮರಾಗಿರುವರು, ಬೇರೆ ಯುದ್ಧಗಳಲ್ಲೂ ಇನ್ನಷ್ಟು ಹಾಫಿಝ್‌ಗಳು ಕೊಲ್ಲಲ್ಪಡುವರೋ ಎಂದು ನನಗೆ ಭಯವಿದೆ. ಹೀಗಾದರೆ ಪವಿತ್ರ ಖುರ್‌ಆನಿನ ಬಹಳಷ್ಟು ಭಾಗಗಳು ನಷ್ಟವಾಗುವುದು. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಪವಿತ್ರ ಖುರ್‌ಆನನನ್ನು ಒಂದೆಡೆ ಒಟ್ಟುಗೂಡಿಸಿಡಬೇಕು. ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಮಾಡಿರದ ಸಂಗತಿಯನ್ನು ನಾನು ಹೇಗೆ ಮಾಡಲಿ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನಾಣೆ, ನಿಮ್ಮ ಈ ಕೆಲಸ ಉತ್ತಮವಾಗಿರುವುದು. ಹಝ್ರತ್ ಅಬೂಬಕರ್(ರ) ಹೇಳಿದರು: ಉಮರ್ ಪದೇ ಪದೇ ಇದನ್ನೇ ಹೇಳುತ್ತಿದ್ದಾರೆ. ಕೊನೆಗೆ ಅಲ್ಲಾಹನು ನನ್ನ ಹೃದಯವನ್ನು ಸಹ ಇದಕ್ಕಾಗಿ ತೆರೆದನು. ಉಮರ್‌ರಿಗೆ ಅನಿಸಿದ್ದು ಈಗ ನನಗೂ ಸರಿಯೆಂದು ತೋರುತ್ತಿದೆ. ಎಂದರೆ ಪವಿತ್ರ ಖುರ್‌ಆನನ್ನು ಸಂಕಲಿಸಬೇಕು. ಅನಂತರ ಝೈದ್ ಬಿನ್ ಸಾಬಿತ್(ರ) ಪವಿತ್ರ ಖುರ್‌ಆನಿನ ಸಂಕಲನದ ಕೆಲಸವನ್ನು ಶುರುಮಾಡಿದರು. (ಸ ಹೀ ಹ್ ಬುಖಾರಿ ಕಿತಾಬುತ್ತಫ್ಸೀರ್, ಹದೀಸ್–4679)

ಇದರ ವಿಶದವಿವರಣೆ ನಾನು ಹೇಳಿದಂತೆ ಮೊದಲು ಪ್ರಸ್ತಾಪಿಸಿದ್ದೇನೆ.

ಹಝ್ರತ್ ಉಮರರ(ರ) ಪವಿತ್ರ ಖುರ್‌ಆನಿನ ಸಂರಕ್ಷಣೆ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಬುಉಬೈದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರ(ರ) ಮುಹಾಜಿರ್ ಸಹಾಬರಲ್ಲಿ ಈ ಕೆಳಗಿನವರು ಪವಿತ್ರ ಖುರ್‌ಆನ್ ಹಾಫಿಝ್‌ಗಳಾಗಿರುವರು ಎಂದು ಸಾಬೀತಾಗುತ್ತದೆ: ಅಬೂಬಕ್ರ್, ಉಮರ್, ಉಸ್ಮಾನ್, ಅಲಿ, ತಲ್‌ಹ, ಸಅದ್, ಇಬ್ನು ಮಸ್‌ಊದ್, ಹುಧೈಫ, ಸಾಲಿಂ, ಅಬೂಹುರೈರ, ಅಬ್ದುಲ್ಲಾಹ್ ಬಿನ್ ಸಾಇಬ್, ಅಬ್ದುಲ್ಲಾಹ್ ಬಿನ್ ಉಮರ್ ಮತ್ತು ಅಬ್ದುಲ್ಲಾಹ್ ಬಿನ್ ಅಬ್ಬಾಸ್. (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–429)

ಕೆಲವು ದಿವ್ಯವಾಣಿಗಳು ಹಝ್ರತ್ ಉಮರರ(ರ) ಅಭಿಪ್ರಾಯಕ್ಕೆ ಅನುಗುಣವಾಗಿ ಸಹ ಅವತೀರ್ಣವಾಗಿದ್ದುವು ಎಂದೂ ಹೇಳಲಾಗುತ್ತದೆ. ಸಿಹಾಹ್ ಸಿತ್ತ ಹದೀಸುಗಳಿಂದ (ಎಂದರೆ, ಪ್ರಬಲವಾದ ಆರು ಹದೀಸ್ ಗ್ರಂಥಗಳು) ಇಂತಹ ಮೂರು ಸಂದರ್ಭಗಳ ಬಗ್ಗೆ ಪ್ರಸ್ತಾಪಗಳು ಬಂದಿವೆ. ಸಿಹಾಹ್ ಸಿತ್ತ ಹದೀಸುಗಳ ವರದಿಗಳನ್ನು ಒಟ್ಟಾಗಿ ನೋಡುವುದಾದರೆ, ಅದರ ಸಂಖ್ಯೆ ಏಳು ಆಗಿವೆ. ಸಹೀಹ್ ಬುಖಾರಿಯಲ್ಲಿ ಹಝ್ರತ್ ಉಮರ್‌ರಿಂದ(ರ) ಹೀಗೆ ವರದಿಯಾಗಿದೆ; ಮೂರು ಸಂಗತಿಗಳಲ್ಲಿ ನನ್ನ ಅಭಿಪ್ರಾಯವು ನನ್ನ ಪ್ರಭುವಿನ ಇಷ್ಟ ಪ್ರಕಾರವಾಗಿದ್ದುವು. ನಾನು ಒಂದು ಸಲ ಹೇಳಿದೆ: ಯಾ ರಸೂಲಲ್ಲಾಹ್, ನಾವು ಮಖಾಮೆ ಇಬ್ರಾಹೀಮನ್ನು ನಮಾಝಿನ ಜಾಗವನ್ನಾಗಿ ಮಾಡೋಣ. ಆಗ **ವತ್ತಖಿದೂ ಮಖಾಮ ಇಬ್ರಾಹೀಮ ಮುಸಲ್ಲ** ಎಂಬ ವಚನ ಅವತೀರ್ಣವಾಯಿತು. ಪರದೆಯ ಬಗ್ಗೆ ಆಜ್ಞಾಪಿಸಲು ನಾನು ಅಭಿಪ್ರಾಯಪಟ್ಟೆನು. ಆಗ ಪರ್ದಾದ ಆದೇಶ ಅವತೀರ್ಣವಾಯಿತು. ನಾನು ಹೀಗೆ ಹೇಳಿದ್ದೆ: ಯಾ ರಸೂಲಲ್ಲಾಹ್, ನೀವು ನಿಮ್ಮ ಪತ್ನಿಯರೊಡನೆ ಪರ್ದಾ ಧರಿಸಲು ಆಜ್ಞಾಪಿಸಿರಿ. ಏಕೆಂದರೆ, ಅವರೊಡನೆ ಒಳ್ಳೆಯವರೂ ಕೆಟ್ಟವರೂ ಮಾತನಾಡುತ್ತಿರುತ್ತಾರೆ. ಅದರಂತೆಯೇ ಪರದಾಧಾರಣೆಯ ಆಜ್ಞೆ ಅವತೀರ್ಣವಾಯಿತು. ಒಂದು ಬಾರಿ ಹಝ್ರತ್ ಪೈಗಂಬರರ(ಸ) ಪತ್ನಿಯಂದಿರು ಅಭಿಮಾನದಿಂದ ಹಝ್ರತ್ ಪೈಗಂಬರರ(ಸ) ಕುರಿತು ಒಟ್ಟುಗೂಡಿದರು. ಅವರಲ್ಲಿ ಹಝ್ರತ್ ಉಮರರ(ರ) ಪುತ್ರಿ ಕೂಡ ಇದ್ದರು. ನಾನು ಅವರ ಪತ್ನಿಯಂದಿಯರೊಡನೆ ಹೇಳಿದೆ: ಹಝ್ರತ್ ಪೈಗಂಬರ್(ಸ) ನಿಮಗೆ ತಲಾಖ್ ನೀಡಿದರೆ, ಅವರ ಪ್ರಭು ಅವರಿಗೆ ನಿಮಗಿಂತ ಉತ್ತಮ ಪತ್ನಿಯರನ್ನು ಅವರಿಗೆ ನಿಮ್ಮ ಬದಲಾಗಿ ನೀಡುವನು ಎಂದು ನನಗೆ ಭರವಸೆಯಿದೆ. ಆಗ ಈ ವಚನ ಅವತೀರ್ಣವಾಯಿತು: **ಅಸಾ ರಬ್ಬುಹೂ ಅನ್‌ಯುಬದ್ದಿಲುಹೂ ಅಝ್‌ವಾಜನ್ ಖೈರನ್ ಮಿಂಕುಂ**. ಎಂದರೆ, ಹಝ್ರತ್ ಪೈಗಂಬರ್(ಸ) ನಿಮಗೆ ತಲಾಖ್ ನೀಡಿದರೆ, ಅವರ ಪ್ರಭು ಅವರಿಗೆ ನಿಮಗಿಂತ ಉತ್ತಮ ಪತ್ನಿಯರನ್ನು ನೀಡುವನು. (ಸಹೀಹ್ ಬುಖಾರಿ, ಕಿತಾಬುಸ್ಸಲಾತ್, ಹದೀಸ್–402)

ಸಹೀಹ್ ಮುಸ್ಲಿಮಿನಲ್ಲಿ ಒಂದು ವರದಿಯಿದೆ. ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ – ಹಝ್ರತ್ ಉಮರ್(ರ) ಹೇಳಿದರು: ಮೂರು ಸಂದರ್ಭಗಳಲ್ಲಿ ನನ್ನ ಅಭಿಪ್ರಾಯಗಳ ಪ್ರಕಾರ ನನ್ನ ಪ್ರಭುವಿನ ವಚನಗಳು ಅವತೀರ್ಣವಾದುವು. ಮಖಾಮೆ ಇಬ್ರಾಹೀಮರ ಕುರಿತು, ಪರ್ದಾ ಧಾರಣೆಯ ಬಗ್ಗೆ, ಮತ್ತು ಬದ್ರ್ ಯುದ್ಧದ ಕೈದಿಗಳ ಬಗ್ಗೆ.
(ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–6206)

ಆದರೆ ಬದರಿನ ಕೈದಿಗಳ ಬಗ್ಗೆ ಇರುವ ವರದಿ ಸರಿಯಲ್ಲ. ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಸಹ ಬಹಳ ಚರ್ಚೆ ನಡೆಸಿರುವರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಸಹ ಇದರ ಕುರಿತು ಬರೆದಿರುವರು. ಕೆಲವು ಪುರಾವೆಗಳೊಂದಿಗೆ ಹಿಂದಿನ ಪಂಡಿತರು ಮತ್ತು ವ್ಯಾಖ್ಯಾನಗಾರರು ಸಹ ಇದರ ಕುರಿತು ಬರೆದಿರುವರು. ಬದ್ರ್ ಯುದ್ಧದ ಕೈದಿಗಳಿಗೆ ಶಿಕ್ಷೆ ನೀಡುವುದರ ಕುರಿತು ಇರುವ ವರದಿ ಸರಿಯಲ್ಲವೆಂದು ಅವರು ಸಾಬೀತುಗೊಳಿಸಿರುವರು. ಇದರ ವಿವರಣೆ ನಾನು ಹಿಂದಿನ ಒಂದು ಖುತ್ಬದಲ್ಲಿ ಪ್ರಸ್ತಾಪಿಸಿದ್ದೆ.

ಮುನಾಫಿಕರ ಜನಾಝ ನಿರ್ವಹಿಸದಿರಲು ಹಝ್ರತ್ ಉಮರ್(ರ) ಹೇಳಿರುವುದಕ್ಕೆ ಸರಿಸಮಾನವಾಗಿ ಪವಿತ್ರ ಖುರ್‌ಆನ್ ವಚನ ಅವತೀರ್ಣವಾಗಿರುವುದರ ಬಗ್ಗೆ ಸಹೀಹ್ ಮುಸ್ಲಿಮಿನಲ್ಲಿ ಪ್ರಸ್ತಾಪ ಸಿಗುತ್ತದೆ. ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಅಬ್ದುಲ್ಲಾಹ್ ಬಿನ್ ಅಬೀ ಬಿನ್ ಸುಲೂಲ್ ಮೃತಪಟ್ಟಾಗ ಅವರ ಮಗನಾದ ಅಬ್ದುಲ್ಲಾಹ್ ಬಿನ್ ಅಬ್ದುಲ್ಲಾಹ್ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು ಮತ್ತು ಕಫನ್ ಹೊದಿಸಲಿಕ್ಕಾಗಿ ಅವರೊಡನೆ ಅವರ ನಿಲುವಂಗಿಯನ್ನು ಕೊಡಲು ವಿನಂತಿಸಿದರು. ಆಗ ಹಝ್ರತ್ ಪೈಗಂಬರ್(ಸ) ಅವರಿಗೆ ತನ್ನ ನಿಲುವಂಗಿಯನ್ನು ನೀಡಿದರು. ಇಬ್ನು ಸುಲೂಲಿನ ಜನಾಝ ನಮಾಝನ್ನು ನಿರ್ವಹಿಸಲು ಮಗನಾದ ಅಬ್ದುಲ್ಲಾಹ್ ಹಝ್ರತ್ ಪೈಗಂಬರ್‌ರೊಡನೆ(ಸ) ವಿನಂತಿಸಿದರು. ಅವರ ಜನಾಝ ನಮಾಝ್ ನಿರ್ವಹಿಸಲು ಹಝ್ರತ್ ಪೈಗಂಬರ್(ಸ) ಹೋದರು. ಆಗ ಹಝ್ರತ್ ಉಮರ್(ರ) ಎದ್ದುನಿಂತು ಹಝ್ರತ್ ಪೈಗಂಬರರ(ಸ) ಬಟ್ಟೆಯನ್ನು ಹಿಡಿದು ಹೀಗೆ ಹೇಳಿದರು: ನೀವು ಇವರ ಜನಾಝ ನಮಾಝನ್ನು ನಿರ್ವಹಿಸಲು ಹೋಗುತ್ತಿರುವಿರಿಯೇನು? ಆದರೆ ಅವನಿಗಾಗಿ ಜನಾಝ ನಮಾಝ್ ನಿರ್ವಹಿಸುವುದನ್ನು ಅಲ್ಲಾಹನು ತಡೆದಿದ್ದಾನೆ ಅಲ್ಲವೇ? ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನನಗೆ ಆಯ್ಕೆ ಮಾಡುವ ಅಧಿಕಾರವನ್ನು ನೀಡಿರುವನು. ನೀನು ಅವರಿಗಾಗಿ ಕ್ಷಮೆಯಾಚನೆ ಮಾಡು ಅಥವಾ ಮಾಡದಿರು ಎಂದು ಅಲ್ಲಾಹನು ನನ್ನೊಡನೆ ಹೇಳಿದ್ದಾನೆ. ಅವನು ಕಪಟವಿಶ್ವಾಸಿಯಾಗಿದ್ದನು ಎಂದು ಹಝ್ರತ್ ಉಮರ್(ರ) ಹೇಳಿದರು. ಆದರೆ ಪೈಗಂಬರ್(ಸ) ಅವನ ಜನಾಝ ನಮಾಝ್ ನಿರ್ವಹಿಸಿದರು. ಆಗ ಅಲ್ಲಾಹನು ಈ ವಚನವನ್ನು ಅವತೀರ್ಣಗೊಳಿಸಿದನು. **ವಲಾ ತುಸಲ್ಲಿ ಅಲಾ ಅಹದುನ್ ಮಿನ್‌ಹುಂ ಮಾತ ಅಬದಾ**. ಎಂದರೆ, ನೀನು ಕಪಟವಿಶ್ವಾಸಿಗಳಲ್ಲಿ ಯಾರಾದರೂ ಮೃತಪಟ್ಟರೆ ಅವರ ಜನಾಝ ನಮಾಝನ್ನು ಅನುಷ್ಠಿಸಬೇಡ ಮತ್ತು ಎಂದಿಗೂ ಅವರ ಖಬರಿನ ಮುಂದೆ ಅವರಿಗಾಗಿ ದುಆ ಮಾಡಲು ನಿಲ್ಲಬೇಡ. (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–6207)

ಮದ್ಯಪಾನ ನಿಷೇಧಿಸಲಾದ ಬಗ್ಗೆ ಹಝ್ರತ್ ಉಮರರ(ರ) ಇಚ್ಛೆಗೆ ಅನುರೂಪವಾಗಿ ಪವಿತ್ರ ಖುರ್‌ಆನಿನ ವಚನ ಅವತೀರ್ಣಗೊಂಡದ್ದರ ಬಗ್ಗೆಗಿನ ಪ್ರಸ್ತಾಪ ಸುನನ್ ತಿರ್ಮಿಧಿಯಲ್ಲಿ ಬರುತ್ತದೆ. ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ಮದ್ಯಪಾನ ಕುರಿತು ನಮಗೆ ಸಮಾಧಾನಕರವಾದ ಒಂದು ಆಜ್ಞೆಯನ್ನು ನೀಡು. ಆಗ **ಯಸ್‌ಅಲೂನಕ ಅನಿಲ್ ಖಮ್‌ರಿ ವಲ್‌ಮೈಸರ್** ಎಂಬ ವಚನ ಅವತೀರ್ಣವಾಯಿತು. ಎಂದರೆ, ಅವರು ನಿನ್ನೊಡನೆ ಮದ್ಯ ಮತ್ತು ಜೂಜಾಟದ ಬಗ್ಗೆ ಕೇಳುತ್ತಾರೆ. ಹೇಳು: ‘ಅವೆರಡರಲ್ಲೂ ದೊಡ್ಡ ಪಾಪ (ದೋಷ)ವೂ ಜನರಿಗೆ (ಕೆಲವು) ಪ್ರಯೋಜನಗಳೂ ಇವೆ. ಆದರೆ ಅವುಗಳ ದೋಷವು ಗುಣಕ್ಕಿಂತ ಬಲು ಹೆಚ್ಚು.’ ಈ ವಚನ ಅವತೀರ್ಣಗೊಂಡಾಗ ಹಝ್ರತ್ ಉಮರ್‌ರಿಗೆ(ರ) ಈ ವಚನವನ್ನು ಓದಿ ಹೇಳಲಾಯಿತು. ಈ ವಚನವನ್ನು ಆಲಿಸಿ ಹಝ್ರತ್ ಉಮರ್(ರ) ಹೇಳಿದರು: ಹೇ ಅಲ್ಲಾಹ್, ನಮಗಾಗಿ ಮದ್ಯಪಾನ ಕುರಿತು ಸ್ಪಷ್ಟವಾದ ವಚನವನ್ನು ಅವತೀರ್ಣಗೊಳಿಸು. ಆಗ ಸೂರಃ ನಿಸಾದ ವಚನವಾದ **ಲಾ ತಖ್‌ರಬುಸ್ಸಲಾತ ವ ಅನ್‌ತುಂ ಸುಕಾರ**. ಅವತೀರ್ಣಗೊಂಡಿತು. ಎಂದರೆ, ಎಲೈ ಸತ್ಯವಿಶ್ವಾಸಿಗಳೇ, ನಿಮ್ಮ ಪ್ರಜ್ಞೆ ಸ್ಥಿಮಿತದಲ್ಲಿಲ್ಲದ ಎಂದರೆ, ಸ್ವತಃ ನಿಯಂತ್ರಣದಲ್ಲಿರದ ಸಂದರ್ಭದಲ್ಲಿ ನೀವು ನಮಾಝನ್ನು ಸಮೀಪಿಸಬೇಡಿರಿ. – ನೀವು ಹೇಳುವುದೇನೆಂದು ನಿಮಗೆ ತಿಳಿಯುವ ವರೆಗೆ. ಹಝ್ರತ್ ಉಮರ್(ರ) ಬಂದಾಗ ಈ ಆಯತನ್ನು ಅವರಿಗೆ ಓದಿ ಹೇಳಲಾಯಿತು. ಆಗ ಅವರು ಪುನಃ ಹೇಳಿದರು: ಹೇ ಅಲ್ಲಾಹ್, ನಮಗಾಗಿ ಶರಾಬಿನ ಬಗ್ಗೆ

ಸ್ಪಷ್ಟವಾದೊಂದು ವಚನವನ್ನು ಅವತೀರ್ಣಗೊಳಿಸು. ಆಗ ಸೂರಃ ಮಾಇದಃದ ಆಯತಾದ **ಇನ್ನಮಾ ಯುರೀದುಶ್ಶೈತಾನ ಅನ್‌ಯೂಖಿಅ ಬೈನಕುಮುಲ್ ಅದಾವತ ವಲ್‌ಬಗ್ಝ್‌ಆಉ ಫಿಲ್ ಖ಼ಮ್‌ರಿ ವಲ್‌ಮೈಸರ್ ವ ಯಸುದ್ದುಕುಮ್ ಅನ್‌ಧಿಕ್‌ರಿಲ್ಲಾಹ ವ ಅನಿಸ್ಸಲಾತ ಫಹಲ್ ಅನ್‌ತುಂ ಮುನ್‌ತಹೂನ್**. ಎಂದರೆ, ಮದ್ಯಪಾನ ಮತ್ತು ಜೂಜು ಮೂಲಕ ನಿಮ್ಮೊಳಗೆ ವೈರತ್ವವೂ ದ್ವೇಷ ಭಾವನೆಯೂ ಉಂಟಾಗಬೇಕೆಂದೂ ಅಲ್ಲಾಹನ ಸ್ಮರಣೆ ಮತ್ತು ನಮಾಝ್‌ನಿಂದ ನಿಮ್ಮನ್ನು ತಡೆಯಬೇಕೆಂದೂ ಶೈತಾನನು ಖಂಡಿತವಾಗಿಯೂ ಬಯಸುತ್ತಾನೆ. ಹಾಗಿರುವಾಗ ನೀವು ಪರಾಙ್ಮುಖರಾಗುವುದಿಲ್ಲವೇನು? ಉಮರ್(ರ) ಬಂದಾಗ ಈ ವಚನವನ್ನು ಅವರಿಗೆ ಓದಿಹೇಳಲಾಯಿತು. ಆಗ ಅವರು ಹೀಗೆ ಹೇಳಿದರು: ನಾವು ಅದರಿಂದ ಮುಖ ತಿರುಗಿಸುತ್ತೇವೆ, ನಾವು ಅದರಿಂದ ಬಿಟ್ಟು ನಿಲ್ಲುತ್ತೇವೆ. (ಸುನನ್ ಅತ್ತಿರ್‌ಮಿಝಿ, ಕಿತಾಬ್ ತಫ್ಸೀರುಲ್ ಖುರ್‌ಆನ್, ಹದೀಸ್–3049)

ಹಝ್ರತ್ ಉಮರ್‌ರ(ರ) ಅಭಿಪ್ರಾಯಗಳು ಮತ್ತು ಪವಿತ್ರ ಖುರ್‌ಆನಿನ ವಚನಗಳ ನಡುವೆ ಇರುವ ಅನುರೂಪತೆಗಳ ಬಗ್ಗೆ ಸಿಹಾಹ್ ಸಿತ್ತದಲ್ಲಿ ಇರುವ ಈ ಮೇಲಿನ ಪ್ರಸ್ತಾಪಗಳಲ್ಲದೆಯೂ ಚರಿತ್ರೆಗಾರರು ಪವಿತ್ರ ಖುರ್‌ಆನ್ ವಚನಗಳು ಮತ್ತು ಹಝ್ರತ್ ಉಮರರ ಅನಿಸಿಕೆಗಳ ನಡುವೆ ಇರುವ ಅನೇಕ ಸರಿಸಮಾನತೆಗಳ ಬಗ್ಗೆ ಪ್ರಸ್ತಾಪಿಸಿರುವರು. ಅಲ್ಲಾಮ ಸುಯೂತಿ ಇಪ್ಪತ್ತರಷ್ಟು ಸರಿಸಮಾನತೆಗಳ ಬಗ್ಗೆ ಪ್ರಸ್ತಾಪಿಸಿರುವರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಸಹಾಬರ ಎಡೆಯಲ್ಲಿ ಹಝ್ರತ್ ಉಮರರ(ರ) ಸ್ಥಾನ ಎಷ್ಟು ಉನ್ನತವಾಗಿತ್ತು ಎಂದು ಗೊತ್ತಿದೆಯೇ? ಎಷ್ಟರ ವರೆಗೆ ಎಂದರೆ, ಕೆಲವೊಮ್ಮೆ ಅವರ ಅಭಿಪ್ರಾಯಗಳಿಗೆ ಸಮಾನತೆಯುಳ್ಳ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣಗೊಳ್ಳುತ್ತಿದ್ದುವು. ಶೈತಾನನು ಹಝ್ರತ್ ಉಮರರ(ರ) ನೆರಳಿಗೆ ಕೂಡ ಹೆದರಿ ಪರಾರಿಯಾಗುತ್ತಾನೆ ಎಂದು ಅವರ ಬಗ್ಗೆ ಹದೀಸ್ ಇದೆ. ಅದೇ ರೀತಿಯಲ್ಲಿ ನನ್ನ ನಂತರ ಯಾರಾದರೂ ನಬಿಯಿರುತ್ತಿದ್ದರೆ, ಉಮರ್ ಆಗುತ್ತಿದ್ದರು ಎಂದೂ ಹದೀಸಿದೆ. ಮೂರನೆಯದಾಗಿ, ಹಿಂದಿನ ಸಮುದಾಯಗಳಲ್ಲಿ ಮುಹದ್ದಸ್ ಇರುತ್ತಿದ್ದರು. ನನ್ನ ಸಮುದಾಯದಲ್ಲಿ ಯಾರಾದರೂ ಮುಹದ್ದಸ್ ಇದ್ದರೆ, ಉಮರ್ ಆಗಿರುವವರು ಎಂದೂ ಹದೀಸಿದೆ." (ಇಝಾಲ ಔಹಾವ್, ಭಾಗ–1, ರೂಹಾನಿ ಖಝಾಇನ್ ಸಂಪುಟ–3, ಪುಟ–219)

ಯುದ್ಧಗಳಲ್ಲಿ ಹಝ್ರತ್ ಉಮರ್(ರ) ನೀಡುತ್ತಿದ್ದ ಸಲಹೆಗಳನ್ನು ಹಝ್ರತ್ ಪೈಗಂಬರ್(ಸ) ಅಂಗೀಕರಿಸುತ್ತಿದ್ದ ಬಗ್ಗೆ ವರದಿಗಳಿವೆ. ಹಝ್ರತ್ ಅಬೂಹುರ್ರೈರ(ರ) ಅಥವಾ ಹಝ್ರತ್ ಅಬೂಸಈದ್(ರ) ಹೇಳುತ್ತಾರೆ. ವರದಿಗಾರನಾದ ಆಮಿಶಿಗೆ ಅವರಿಬ್ಬರಲ್ಲಿ ಯಾರೆಂಬುವುದರಲ್ಲಿ ಸಂಶಯವಿತ್ತು. ಹೇಗಿದ್ದರೂ ಅವರು ಹೇಳುತ್ತಾರೆ: ತಬೂಕ್ ಯುದ್ಧದ ಒಂದು ದಿನ ಜನರಿಗೆ ತುಂಬ ಹಸಿವಾಯಿತು. ಜನರು ಹೇಳಿದರು: ಯಾ ರಸೂಲಲ್ಲಾಹ್, ನೀವು ನಮಗೆ ಅನುಮತಿ ಕೊಡುವುದಾದರೆ, ನಮಗೆ ನೀರು ತರುವ ಒಂಟೆಯನ್ನು ನಾವು ಕೊಯ್ಯುವೆವು ಮತ್ತು ಅದನ್ನು ತಿಂದು ಅದರ ಚರ್ಬಿಯನ್ನು, ಎಣ್ಣೆಯನ್ನು ನಾವು ಉಪಯೋಗಿಸುವೆವು. ಹಝ್ರತ್ ಪೈಗಂಬರ್(ಸ) ಹೇಳಿದರು: ಕೊಯ್ಯಿರಿ. ಆಗ ಹಝ್ರತ್ ಉಮರ್(ರ) ಬಂದು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ಹಾಗೆ ಮಾಡಿದರೆ, ಸವಾರಿಗಳು ಕಡಿಮೆಯಾಗುವುವು. ಆದ್ದರಿಂದ ಜನರೊಡನೆ ಅವರ ಬಳಿಯಲ್ಲಿ ಉಳಿದಿರುವ ಆಹಾರಗಳನ್ನು ಕೊಂಡುಬರಲು ಹೇಳಿರಿ. ಅನಂತರ ಅವರಿಗಾಗಿ ಬರ್ಕತಿಗಾಗಿ ದುಆ ಮಾಡಿರಿ. ಅಲ್ಲಾಹನು ಅವುಗಳಲ್ಲಿ ಅನುಗ್ರಹ ಸುರಿಸದೇ ಇರಲಿಕ್ಕಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಇದು ಸರಿ. ವರದಿಗಾರ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಚರ್ಮದ ಒಂದು ಮೇಜುಬಟ್ಟೆಯನ್ನು ತರಿಸಿ ಅದನ್ನು ಹರಡಿದರು. ಅನಂತರ ಜನರ ಬಳಿಯಿದ್ದ ಉಳಿದ ಆಹಾರಗಳನ್ನು ತರಿಸಿದರು. ವರದಿಗಾರ ಹೇಳುತ್ತಾರೆ: ಕೆಲವರು ಮುಷ್ಟಿ ತುಂಬ ಜೋಳವನ್ನು ತಂದರು, ಕೆಲವರು ಕೈತುಂಬ ಖರ್ಜೂರಗಳನ್ನು ತಂದರು, ಕೆಲವರು ರೊಟ್ಟಿಯ ತುಣುಕುಗಳನ್ನು ತಂದರು. ಹೀಗೆ ಸ್ವಲ್ಪ ಆಹಾರ ಆ ಬಟ್ಟೆಯಲ್ಲಿ ಒಟ್ಟುಸೇರಿತ್ತು. ಹಝ್ರತ್ ಪೈಗಂಬರ್(ಸ) ಅದರ ಮೇಲೆ ಅನುಗ್ರಹ ವರ್ಷಿಸಲು ದುಆ ಮಾಡಿದರು. ಅನಂತರ ತಮ್ಮ ತಮ್ಮ ಪಾತ್ರೆಗಳಲ್ಲಿ ಆಹಾರವನ್ನು ಕೊಂಡುಹೋಗಲು ಹೇಳಿದರು. ಜನರು ಪಾತ್ರೆಗಳಲ್ಲಿ ಆಹಾರವನ್ನು ತೆಗೆದರು. ಸೈನ್ಯದಲ್ಲಿ ಇದ್ದ ಎಲ್ಲ ಪಾತ್ರೆಗಳನ್ನು ಆಹಾರಗಳಿಂದ ತುಂಬಿಸಿದರು. ಅನಂತರ ಎಲ್ಲರೂ ಹೊಟ್ಟೆ ತುಂಬ ತಿಂದರು. ಆಹಾರ ಇನ್ನು ಬಾಕಿಯಾಯಿತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಲ್ಲದೆ ಆರಾಧ್ಯನಿಲ್ಲ ಮತ್ತು ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಎಂದು ಸಾಕ್ಷ್ಯವಹಿಸುತ್ತೇನೆ. ಯಾರೂ ಈ ಎರಡೂ ಸಾಕ್ಷ್ಯಗಳೊಂದಿಗೆ ಅಲ್ಲಾಹನನ್ನು ಭೇಟಿಯಾಗುವನೋ ಅವನನ್ನು ಸ್ವರ್ಗದಿಂದ ತಡೆಯಲಾಗುವುದಿಲ್ಲ. ಇದು ಮುಸ್ಲಿಮಿನ ವರದಿಯಾಗಿದೆ. (ಸಹೀಹ್ ಮುಸ್ಲಿಮ್ ಕಿತಾಬುಲ್ ಈಮಾನ್, ಹದೀಸ್–139)

ಬುಖಾರಿಯಲ್ಲಿ ಈ ವರದಿ ಹೀಗೆ ನಮೂದಿಸಲಾಗಿದೆ: ಯಝೀದ್ ಬಿನ್ ಅಬೂ ಉಬೈದ ಹಝ್ರತ್ ಸಲ್ಮಾ ಬಿನ್ ಅಕೂಅ್‌ರಿಂದ ವರದಿ ಮಾಡುತ್ತಾರೆ: ಒಂದು ಯಾತ್ರೆಯಲ್ಲಿ ಜನರ ಬಳಿಯಿದ್ದ ಸಾಮಾನುಗಳು ಕಡಿಮೆಯಾದವು. ಅವರ ಬಳಿ ಏನೂ ಇರಲಿಲ್ಲ. ಅವರು ಒಂಟೆಯನ್ನು ಕೊಯ್ಯಲು ಅನುಮತಿ ಕೇಳಲು ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು. ಅವರು ಅನುಮತಿ ಕೊಟ್ಟರು. ಅನಂತರ ಹಝ್ರತ್ ಉಮರ್(ರ) ಅವರನ್ನು ಭೇಟಿಯಾದರು. ಜನರು ಇದನ್ನು ಹಝ್ರತ್ ಉಮರ್‌ರೊಡನೆ(ರ) ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ಒಂಟೆಗಳು ಇಲ್ಲವಾದರೆ, ಒಂಟೆಗಳಿಂದ ಈಗ ಮಾಡಲಾಗುತ್ತಿರುವ ಕೆಲಸಗಳನ್ನು ಹೇಗೆ ಮಾಡುವುದು. ಹೀಗೆ ಹೇಳಿ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ಜನರ ಒಂಟೆಗಳು ಕೊಯ್ಯಲ್ಪಟ್ಟರೆ, ಇತರ ಆವಶ್ಯಕತೆಗಳು ಹೇಗೆ ನಡೆಸಲು ಸಾಧ್ಯ? ಹಝ್ರತ್ ಪೈಗಂಬರ್(ಸ) ಹೇಳಿದರು: ಎಲ್ಲರೂ ತಮ್ಮ ಬಳಿಯಲ್ಲಿ ಉಳಿದಿರುವ ಸಾಮಾನುಗಳನ್ನು ತರಲು ಘೋಷಿಸಿರಿ. ಅನಂತರ ಹಝ್ರತ್ ಪೈಗಂಬರ್(ಸ) ದುಆ ಮಾಡಿದರು. ಉಳಿದ ಸಾಮಾನುಗಳಿಗೆ ಬರ್ಕತಿನ ದುಆ ಮಾಡಿದರು. ಅನಂತರ ಜನರಿಂದ ಪಾತ್ರೆಗಳನ್ನು ಕೇಳಿದರು. ಜನರು ಪಾತ್ರೆಯನ್ನು ತುಂಬಿಸಲು ಶುರುಮಾಡಿದರು. ಎಲ್ಲರೂ ತುಂಬಿಸಿದ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಲ್ಲದೆ ಆರಾಧ್ಯನಿಲ್ಲ ಮತ್ತು ನಾನು ಅಲ್ಲಾಹನ ಪ್ರವಾದಿಯಾಗಿರುವೆನು ಎಂದು ನಾನು ಸಾಕ್ಷ್ಯವಹಿಸುತ್ತೇನೆ. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–2982)

ಅಧ಼ಾನಿನ ಆರಂಭದ ಕುರಿತು ಸಹ ಹಝ್ರತ್ ಉಮರ್(ರ) ಕನಸನ್ನು ಕಂಡಿದ್ದರು. ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಅಲ್ಲಾಹನ ದಿವ್ಯವಾಣಿಗಳು ಸಹಾಬರ ಮೇಲೆ ಅವತೀರ್ಣವಾಗುತ್ತಿದ್ದುವು. ಹಝ್ರತ್ ಪೈಗಂಬರರ(ಸ) ಕಾಲದಲ್ಲಿ ಅಬ್ದುಲ್ಲಾಹ್ ಬಿನ್ ಝೈದ್ ಒಬ್ಬ ಸಹಾಬಿಯಾಗಿದ್ದರು. ಅಲ್ಲಾಹನು ಅವರಿಗೆ ದಿವ್ಯವಾಣಿ ಮೂಲಕ ಅಧ಼ಾನ್ ಕಲಿಸಿದನು. ಹಝ್ರತ್ ಪೈಗಂಬರ್(ಸ) ಅವರ ದಿವ್ಯವಾಣಿಯ ಆಧಾರದಲ್ಲಿ ಮುಸ್ಲಿಮರ ನಡುವೆ ಅಧ಼ಾನಿನ ಸಂಪ್ರದಾಯವನ್ನು ತಂದಿದ್ದರು. ಅನಂತರ ಪವಿತ್ರ ಖುರ್‌ಆನಿನ ವಹ್ಯ್ ಸಹ ಅದನ್ನು ರುಜುವಾತು ಮಾಡಿತು. ಹಝ್ರತ್ ಉಮರ್(ರ) ಹೇಳುತ್ತಾರೆ: ನನಗೂ ಅಲ್ಲಾಹನು ಇದೇ ಅಧ಼ಾನನ್ನು ಕಲಿಸಿದ್ದನು. ಆದರೆ ಬೇರೊಬ್ಬ ವ್ಯಕ್ತಿ ಈ ಸಂಗತಿಯನ್ನು ಹೇಳಿರುವರು ಎಂಬ ಕಾರಣದಿಂದ ಇಪ್ಪತ್ತು ದಿವಸಗಳಷ್ಟು ಕಾಲ ನಾನು ಸುಮ್ಮನಿದ್ದೆ. ಒಂದು ವರದಿಯಲ್ಲಿ ಹೀಗೂ ಬಂದಿದೆ. ಹಝ್ರತ್ ಉಮರ್(ರ) ಹೇಳಿದರು: ಒಬ್ಬ ದೇವದೂತ ಬಂದು ನನಗೆ ಅಧ಼ಾನ್ ಕಲಿಸಿದರು. ಆಗ ನಾನು ಪೂರ್ಣವಾಗಿ ನಿದ್ದೆ ಹೋಗಿರಲಿಲ್ಲ. ಸ್ವಲ್ಪ ಸ್ವಲ್ಪ ಎಚ್ಚರವಾಗಿದ್ದೆನು. (ಮಸ್‌ಅಲ ಮಹೀ ವ ನಬುವ್ವತ್ ಕೇ ಮುತಲ್ಲಖ್ ಇಸ್ಲಾಮಿ ನಝರಿಯ, ಅನ್ವಾರುಲ್ ಉಲೂಮ್, ಸಂಪುಟ–23, ಪುಟ–282)

ಸುನನ್ ತಿರ್ಮಿಧಿಯ ಒಂದು ವರದಿಯಿದೆ. ಇದನ್ನು ನಾನು ಮೊದಲು ಪ್ರಸ್ತಾಪಿಸಿದ್ದೆ. ಆದರೂ ಇಲ್ಲೂ ಪ್ರಸ್ತಾಪಿಸುತ್ತೇನೆ. ಹಝ್ರತ್ ಉಮರ್(ರ) ಕಂಡ ಕನಸಿಗೆ ಹಝ್ರತ್ ಪೈಗಂಬರರ(ಸ) ಬಳಿ ಎಷ್ಟು ಪ್ರಾಧಾನ್ಯವಿತ್ತು ಎಂಬುದನ್ನು ಅದರ ಕೊನೆಯ ಪದಗಳಿಂದ ತಿಳಿದುಬರುತ್ತದೆ. ಮುಹಮ್ಮದ್ ಬಿನ್ ಅಬ್ದುಲ್ಲಾಹ್ ಬಿನ್ ಝೈದ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ನಾನು ಬೆಳಿಗ್ಗಿನ ಸಮಯದಲ್ಲಿ ಹಝ್ರತ್ ಪೈಗಂಬರರ(ಸ) ಬಳಿಗೆ ಹೋದೆನು. ನಾನು ಅವರಿಗೆ ನಾನು ಕಂಡ ಕನಸನ್ನು ಹೇಳಿಕೊಟ್ಟೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಖಂಡಿತವಾಗಿಯೂ ಈ ಕನಸು ಸತ್ಯವಾದುದಾಗಿದೆ. ನೀವು ಬಿಲಾಲಿನ ಜೊತೆಗೆ ಹೋಗಿರಿ. ಖಂಡಿತವಾಗಿಯೂ ಅವರು ನಿನಗಿಂತ ಉಚ್ಚ ಮತ್ತು ದೀರ್ಘ ಸ್ವರವುಳ್ಳ ವ್ಯಕ್ತಿಯಾಗಿರುವರು. ನಿನಗೆ ಹೇಳಲ್ಪಟ್ಟದ್ದನ್ನು ಅವರಿಗೆ ಹೇಳುತ್ತಾ ಹೋಗು. ಅವರು ಅದನ್ನು ಉಚ್ಚ ಶಬ್ದದಲ್ಲಿ ಘೋಷಿಸಲಿ. ಅಬ್ದುಲ್ಲಾಹ್ ಬಿನ್ ಝೈದ್ ಹೇಳುತ್ತಾರೆ: ನಮಾಝಿಗಾಗಿ ಕರೆ ನೀಡುವ ಬಿಲಾಲಿನ ಅಧ಼ಾನನ್ನು ಹಝ್ರತ್ ಉಮರ್ ಬಿನ್ ಖ಼ತ್ತಾಬ್(ರ) ಆಲಿಸಿದಾಗ ಅವರು ಹಝ್ರತ್ ಪೈಗಂಬರರ(ಸ) ಬಳಿಗೆ ತನ್ನ ಹೊದಿಕೆಯನ್ನು ಎಳೆಯುತ್ತಾ ಬಂದರು. ಅವರು ಹೀಗೆ ಹೇಳುತ್ತಿದ್ದರು: ಯಾ ರಸೂಲಲ್ಲಾಹ್, ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ. ಈ ಅಧ಼ಾನಿನಲ್ಲಿ ಹೇಳಿದಂತೆಯೇ ನಾನು ಸಹ ಕನಸಿನಲ್ಲಿ ಕಂಡಿದ್ದೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು; ಎಲ್ಲ ಸ್ತುತಿಗಳು ಅಲ್ಲಾಹನಿಗೆ. ಈಗ ಈ ಸಂಗತಿ ಹೆಚ್ಚು ಪ್ರಬಲಗೊಂಡಿದೆ. ಎಂದರೆ ಈಗ ಇದು ಹೆಚ್ಚು ದೃಢೀಕರಿಸಲ್ಪಟ್ಟಿದೆ.

ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರನ್ನು(ಸ) ಎಷ್ಟು ಗೌರವಾದರದಿಂದ ಕಾಣುತ್ತಿದ್ದರು ಎಂಬುದರ ಕುರಿತು ಹಝ್ರತ್ ಇಬ್ನು ಉಮರ್‌ರಿಂದ ಹೀಗೆ ವರದಿಯಾಗಿದೆ: ನಾನು ಹಝ್ರತ್ ಪೈಗಂಬರ್‌ರೊಂದಿಗೆ(ಸ) ಯಾತ್ರೆಯಲ್ಲಿದ್ದೆ. ನಾನು ಒಂದು ಒಂಟೆಯ ಮೇಲೆ ಸವಾರನಾಗಿದ್ದೆ. ಅದು ವೇಗವಾಗಿ ಹೋಗುತ್ತಿತ್ತು. ಅದು ಹಝ್ರತ್ ಪೈಗಂಬರರ(ಸ) ಒಂಟೆಗಿಂತ ಮುಂದೆ ಸಾಗುತ್ತಿತ್ತು. ನನ್ನ ತಂದೆಯಾದ ಉಮರ್(ರ) ನನ್ನೊಡನೆ ಹೀಗೆ ಹೇಳುತ್ತಿದ್ದರು: ಅಬ್ದುಲ್ಲಾಹ್, ಹಝ್ರತ್ ಪೈಗಂಬರ್‌ಗಿಂತ(ಸ) ಮುಂದಾಗಿ ಯಾರೂ ಹೋಗಬಾರದು. ನಿನ್ನ ಸವಾರಿಯು ಹಝ್ರತ್ ಪೈಗಂಬರರ(ಸ) ಸವಾರಿಗಿಂತ ಮುಂದೆ ಹೋಗಬಾರದು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್‌ರೊಡನೆ(ರ) ಹೇಳಿದರು: ಇದನ್ನು ನನಗೆ ಮಾರಾಟ ಮಾಡು. ಹಝ್ರತ್ ಉಮರ್(ರ) ಹೇಳಿದರು:

ಇದು ನಿಮ್ಮದೇ. ಹಝ್ರತ್ ಪೈಗಂಬರ್(ಸ) ಅದನ್ನು ಖರೀದಿ ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬ್ದುಲ್ಲಾಹ್, ಇದು ಈಗ ನಿನ್ನದೇ. ಇದನ್ನು ನೀನು ನಿನಗೆ ಇಷ್ಟವಿರುವ ಕೆಲಸಕ್ಕಾಗಿ ಉಪಯೋಗಿಸು. ಹಝ್ರತ್ ಪೈಗಂಬರ್(ಸ) ಅದನ್ನು ಖರೀದಿ ಮಾಡಿ ಅವರಿಗೆಯೇ ಅದನ್ನು ಕೊಡುಗೆಯಾಗಿ ಕೊಟ್ಟರು. (ಸಹೀಹ್ ಬುಖಾರಿ ಕಿತಾಬುಲ್ ಹಿಬ, ಹದೀಸ್-2610)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಮಧ್ಯಾಹ್ನ ಸಮಯವಾದಾಗ ಹಝ್ರತ್ ಪೈಗಂಬರ್(ಸ) ಬಂದರು. ಝುಹರ್ ನಮಾಝ್ ನಿರ್ವಹಿಸಿದರು. ಅನಂತರ ಪ್ರವಚನ ಪೀಠದಲ್ಲಿ ನಿಂತರು ಮತ್ತು ವಾಗ್ದಾನ ಮಾಡಲ್ಪಟ್ಟ ಸಮಯದ ಬಗ್ಗೆ ಪ್ರಸ್ತಾಪಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಆ ಕಾಲದಲ್ಲಿ ದೊಡ್ಡ ದೊಡ್ಡ ಘಟನೆಗಳು ನಡೆಯುವವು. ಯಾರಿಗಾದರೂ ಏನಾದರೂ ಕೇಳಲಿದ್ದರೆ ಕೇಳಿರಿ. ನಾನು ಇಲ್ಲಿರುವ ತನಕ ನೀವು ನನ್ನೊಡನೆ ಕೇಳುವ ಎಲ್ಲದಕ್ಕೂ ನಾನು ಉತ್ತರ ನೀಡುವೆನು. ಜನರು ಅತ್ತುಬಿಟ್ಟರು. ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಜನರೊಡನೆ ಏನಾದರೂ ಪ್ರಶ್ನೆ ಕೇಳಲು ಹೇಳಿದರು. ಆಗ ಹಝ್ರತ್ ಅಬ್ದುಲ್ಲಾಹ್ ಬಿನ್ ಹುದ್ಹಾಫ ಸಹ್ಮಿ ಎದ್ದು ನಿಂತು ಹೀಗೆ ಕೇಳಿದರು: ನನ್ನ ತಂದೆ ಯಾರು? ಹುದ್ಹಾಫ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಏನಾದರೂ ಕೇಳಲು ಜನರೊಡನೆ ಹಝ್ರತ್ ಪೈಗಂಬರ್(ಸ) ಇನ್ನೂ ಅನೇಕ ಬಾರಿ ಹೇಳಿದರು. ಆಗ ಹಝ್ರತ್ ಉಮರ್(ರ) ಮೊಣಕಾಲೂರಿ ನಿಂತು ಹೇಳಿದರು: **ರಝೀನ ಬಿಲ್ಲಾಹಿ ರಬ್ಬನ್. ವಬಿಲ್ ಇಸ್ಲಾಮಿ ದೀನನ್. ವ ಮುಹಮ್ಮದುನ್ ನಬಿಯ್ಯನ್**. ಅಲ್ಲಾಹನು ನಮ್ಮ ಪ್ರಭು ಎಂಬುದರಲ್ಲೂ, ಇಸ್ಲಾಮ್ ನಮ್ಮ ಧರ್ಮ ಎಂಬುದರಲ್ಲೂ ಮುಹಮ್ಮದ್(ಸ) ನಮ್ಮ ಪ್ರವಾದಿ ಎಂಬುದರಲ್ಲೂ ನಾವು ಸಂತೃಪ್ತರಾಗಿರುವೆವು. ಹಝ್ರತ್ ಪೈಗಂಬರ್(ಸ) ಆಗ ಸುಮ್ಮನಾದರು. ಅನಂತರ ಹೀಗೆ ಹೇಳಿದರು: ಸ್ವರ್ಗ ಮತ್ತು ನರಕವನ್ನು ಈಗ ಈ ಗೋಡೆಯ ಗಾತ್ರದಲ್ಲಿ ನನ್ನ ಮುಂದೆ ತೋರಿಸಲಾಯಿತು. ನಾನು ಇಂತಹ ಒಳಿತು ಮತ್ತು ಕೆಡುಕನ್ನು ಎಂದೂ ನೋಡಿರಲಿಲ್ಲ. (ಸಹೀಹ್ ಬುಖಾರಿ ಕಿತಾಬ್ ಮವಾಖಿಯಾತುಸ್ಸಲಾತ್, ಹದೀಸ್-540)

ಬುಖಾರಿಯುದೇ ಮತ್ತೊಂದು ವರದಿಯಲ್ಲಿ ಹೀಗೆಯೂ ಪ್ರಸ್ತಾಪಿಸಲಾಗಿದೆ. ಹಝ್ರತ್ ಅಬೂ ಮೂಸಾ ವರದಿ ಮಾಡುತ್ತಾರೆ; ಹಝ್ರತ್ ಪೈಗಂಬರ್(ಸ) ಇಷ್ಟಪಡದ ಕೆಲವು ಸಂಗತಿಗಳ ಬಗ್ಗೆಯೂ ಅವರೊಡನೆ ಕೇಳಲಾಗಿತ್ತು. ಹಝ್ರತ್ ಪೈಗಂಬರರೊಡನೆ(ಸ) ಅನೇಕ ಅನಾವಶ್ಯಕ ಸವಾಲುಗಳನ್ನು ಕೇಳಿದಾಗ ಅವರಿಗೆ ಕೋಪಬಂತು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವುದರ ಕುರಿತು ಬೇಕಾದರೂ ನೀವು ನನ್ನೊಡನೆ ಪ್ರಶ್ನಿಸಿರಿ. ಆಗ ಒಬ್ಬ ವ್ಯಕ್ತಿಯು ಅವರ ತಂದೆ ಯಾರೆಂದು ಕೇಳಿದರು. ನಿಮ್ಮ ತಂದೆ ಹುದ್ಹಾಫ ಆಗಿರುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಇನ್ನೊಬ್ಬ ಎದ್ದು ಅವರ ತಂದೆ ಯಾರೆಂದು ಕೇಳಿದರು. ನಿಮ್ಮ ತಂದೆ ಶೈಬನು ಸ್ವತಂತ್ರಗೊಳಿಸಿದ ಗುಲಾಮನಾದ ಸಾಲಿಂ ಆಗಿರುವರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಪೈಗಂಬರರ(ಸ) ಮುಖದಲ್ಲಿದ್ದ ಬದಲಾವಣೆಯನ್ನು ನೋಡಿದ ಹಝ್ರತ್ ಉಮರ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾವು ಅತ್ಯುನ್ನತನಾದ ಅಲ್ಲಾಹನ ಮುಂದೆ ನಮ್ಮ ತಪ್ಪುಗಳಿಗೆ ಪಶ್ಚಾತ್ತಾಪ ಪಡುತ್ತೇವೆ. (ಸಹೀಹ್ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್-92)

ಬುಖಾರಿಯ ಮತ್ತೊಂದು ವರದಿಯಲ್ಲಿ ಹೀಗೆ ಬಂದಿದೆ. ಝುಹರಿ ವರದಿ ಮಾಡುತ್ತಾರೆ: ಹಝ್ರತ್ ಅನಸ್ ಬಿನ್ ಮಾಲಿಕ್ ನನ್ನೊಡನೆ ಹೇಳಿದರು: ಹಝ್ರತ್ ಪೈಗಂಬರ್(ಸ) ಹೊರಗೆ ಹೊರಟಾಗ ಹಝ್ರತ್ ಅಬ್ದುಲ್ಲಾಹ್ ಬಿನ್ ಹುದ್ಹಾಫ ಎದ್ದು ನಿಂತು ಕೇಳಿದರು: ನನ್ನ ತಂದೆ ಯಾರು? ನಿನ್ನ ತಂದೆ ಹುದ್ಹಾಫ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಅನಂತರ ಏನು ಬೇಕಾದರೂ ಕೇಳಿರಿ ಎಂದು ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಹೇಳಿದರು. ಹಝ್ರತ್ ಉಮರ್(ರ) ಮೊಣಕಾಲೂರಿ ಹೀಗೆ ಹೇಳಿದರು: ಅಲ್ಲಾಹನು ನಮ್ಮ ಪ್ರಭು ಎಂಬುದರಲ್ಲೂ, ಇಸ್ಲಾಂ ನಮ್ಮ ಧರ್ಮ ಎಂಬುದರಲ್ಲೂ ಮುಹಮ್ಮದ್(ಸ) ನಮ್ಮ ಪ್ರವಾದಿ ಎಂಬುದರಲ್ಲೂ ನಾವು ಸಂತುಷ್ಟಗೊಂಡಿದ್ದೇವೆ. ಆಗ ಹಝ್ರತ್ ಪೈಗಂಬರ್(ಸ) ಸುಮ್ಮನಾದರು. (ಸಹೀಹ್ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್-93)

ಹಝ್ರತ್ ಅಬೂಖತಾದ ಅನ್ಸಾರಿ(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರರೊಡನೆ(ಸ) ಉಪವಾಸದ ಕುರಿತು ಪ್ರಶ್ನಿಸಿದೆ. ಹಝ್ರತ್ ಪೈಗಂಬರ್‌ರಿಗೆ(ಸ) ಅದು ಇಷ್ಟವಾಗಲಿಲ್ಲ. ಆಗ ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನು ನಮ್ಮ ಪ್ರಭು ಎಂಬುದರಲ್ಲೂ, ಇಸ್ಲಾಂ ನಮ್ಮ ಧರ್ಮ ಎಂಬುದರಲ್ಲೂ ಮುಹಮ್ಮದ್(ಸ) ನಮ್ಮ ಪ್ರವಾದಿ ಎಂಬುದರಲ್ಲೂ, ನಮ್ಮ ಬೈಅತ್ ನೈಜ ಬೈಅತ್ ಆಗಿದೆ ಎಂಬುದರಲ್ಲೂ ನಾವು ಸಂತೃಪ್ತರಾಗಿದ್ದೇವೆ. (ಸಹೀಹ್ ಮುಸ್ಲಿಮ್ ಕಿತಾಬುಸ್ಸಿಯಾಮ್, ಹದೀಸ್-2747)

ಸಹೀಹ್ ಬುಖಾರಿಯಲ್ಲಿ ಇನ್ನೊಂದು ವರದಿಯಿದೆ. ಹಝ್ರತ್ ಉಮರ್(ರ) ಒಂದು ಬಾರಿ ಹಝ್ರತ್ ಪೈಗಂಬರರ(ಸ) ಬಳಿಗೆ ಹೋದರು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಮನೆಯ ಮೇಲಿನ ಅಂತಸ್ತಿನಲ್ಲಿ ತಂಗಿದ್ದರು. ಹಝ್ರತ್ ಉಮರ್(ರ) ಹೇಳುತ್ತಾರೆ: ನಾನು ಅವರಿಗೆ ಬಳಿಗೆ ಹೋದೆನು. ಅವರು ಒಂದು ಚಾಪೆಯಲ್ಲಿ ಮಲಗಿದ್ದರು. ಚಾಪೆಯ ಮೇಲೆ ಯಾವುದೇ ಹಾಸಿಗೆ ಹಾಸಿರಲಿಲ್ಲ. ಆದ್ದರಿಂದ ಅವರ ದೇಹದಲ್ಲಿ ಅದರ ಅಚ್ಚು ಆಗಿತ್ತು. ಅವರು ಚರ್ಮದ ಒಂದು ದಿಂಬಿಗೆಗೆ ಒರಗಿ ಮಲಗಿದ್ದರು. ದಿಂಬಿಗೆಯಲ್ಲಿ ಖರ್ಜೂರದ ತೊಗಟೆಯನ್ನು, ಎಂದರೆ ಖರ್ಜೂರದ ಮರದ ಸಿಪ್ಪೆಯನ್ನು ತುಂಬಿಸಲಾಗಿತ್ತು. ನಾನು ಹಝ್ರತ್ ಪೈಗಂಬರರ(ಸ) ಮನೆಯ ಸುತ್ತ ಕಣ್ಣೆತ್ತಿ ನೋಡಿದೆ. ಅಲ್ಲಾಹನಾಣೆ, ಅಲ್ಲಿ ಮೂರು ಹಸಿಯಾದ ಚರ್ಮಗಳ ಹೊರತು ಬೇರೇನೂ ಇರುವುದನ್ನು ನಾನು ಕಂಡಿಲ್ಲ. ನಾನು ಹಝ್ರತ್ ಪೈಗಂಬರ್‌ರೊಡನೆ(ಸ) ಹೀಗೆ ವಿನಂತಿಸಿದೆ: ನಿಮ್ಮ ಉಮ್ಮತಿಗೆ ಸೌಕರ್ಯಗಳನ್ನು ನೀಡಲು ಅಲ್ಲಾಹನಲ್ಲಿ ಪ್ರಾರ್ಥಿಸಿರಿ. ಏಕೆಂದರೆ, ಇರಾನ್ ಮತ್ತು ರೋಮ್ ನಿವಾಸಿಗಳು ಅಲ್ಲಾಹನ ಆರಾಧನೆ ಮಾಡುತ್ತಿಲ್ಲವಾದರೂ ಅವರಿಗೆ ತುಂಬ ಭೌತಿಕ ವಸ್ತುಗಳು ಲಭಿಸಿವೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಖತ್ತಾಬಿನ ಪುತ್ರಾ, ನೀನು ಈಗಲೂ ಸಂಶಯದಲ್ಲಿರುವಿಯೋ? ಅವರಿಗೆ ಲೌಕಿಕ ಜೀವಿತದಲ್ಲೇ ಬೇಗನೇ ಆನಂದಕರವಾದ ವಸ್ತುಗಳನ್ನು ನೀಡಲಾಗಿದೆ. ಆಗ ನಾನು ಹೇಳಿದೆ: ಯಾ ರಸೂಲಲ್ಲಾಹ್, ನನ್ನ ಮಗ್ಫಿರತಿಗಾಗಿ ದುಆ ಮಾಡಿರಿ, ಎಂದರೆ ನನ್ನನ್ನು ಕ್ಷಮಿಸಲು ದುಆ ಮಾಡಿರಿ. (ಸಹೀಹ್ ಬುಖಾರಿ, ಕಿತಾಬುಲ್ ಮಝಾಲಿಮ್, ಹದೀಸ್-2468)

ಹಝ್ರತ್ ಮಸೀಹ್ ಮೌಊದ್(ರ) ಹೇಳುತ್ತಾರೆ:

ಒಂದು ಬಾರಿ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರ(ಸ) ಮನೆಗೆ ಹೋದರು. ಮನೆಯಲ್ಲಿ ಯಾವುದೇ ಸಾಮಾನುಗಳು ಇರಲಿಲ್ಲ. ಹಝ್ರತ್ ಪೈಗಂಬರ್(ಸ) ಒಂದು ಚಾಪೆಯಲ್ಲಿ ಮಲಗಿದ್ದರು. ಚಾಪೆಯ ಗುರುತುಗಳು ಅವರ ಬೆನ್ನಲ್ಲಿ ಇದ್ದುವು. ಈ ಸ್ಥಿತಿಯನ್ನು ಕಂಡು ಹಝ್ರತ್ ಉಮರ್‌ರಿಗೆ(ರ) ಅಳು ಬಂತು. ಹಝ್ರತ್ ಪೈಗಂಬರ್(ಸ) ಕೇಳಿದರು: ಹೇ ಉಮರ್, ನೀನೇಕೆ ಅಳುತ್ತಿದ್ದೀಯ? ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ಕಷ್ಟತೆಯನ್ನು ನೋಡಿ ನನಗೆ ಅಳುಬಂದಿದೆ. ರೋಮ್ ಮತ್ತು ಇರಾನಿನ ಅರಸರು ಆರಾಮದಾಯಕ ಜೀವನವನ್ನು ಸಾಗಿಸುತ್ತಿದ್ದಾರೆ. ಆದರೆ ನೀವು ಈ ಕಷ್ಟತೆಗಳಿಂದ ಸಾಗುತ್ತಿದ್ದೀರಿ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಈ ಲೌಕಿಕವಾದ ವಸ್ತುಗಳಿಂದ ಏನು ಮಾಡಲಿ? ನನ್ನ ಉದಾಹರಣೆಯು ಒಬ್ಬ ಸವಾರನು ತನ್ನ ಒಂಟೆಯ ಮೇಲೆ ಸವಾರನಾಗಿ ಕಠಿಣವಾದ ಬೇಸಿಗೆ ಕಾಲದಲ್ಲಿ ಹೋಗುವವನಂತಾಗಿದೆ. ಮಧ್ಯಾಹ್ನದ ಕಠಿಣ ಬಿಸಿಲನ್ನು ಸಹಿಸಲು ಸಾಧ್ಯವಾಗದೇ ಬಂದಾಗ, ಅವನು ಅದೇ ಸವಾರಿಮೃಗದೊಂದಿಗೆ ಒಂದು ಮರದ ನೆರಳಿನ ಅಡಿಯಲ್ಲಿ ತಂಗುತ್ತಾನೆ. ಅನಂತರ ಕೆಲವು ನಿಮಿಷಗಳ ನಂತರ ಅದೇ ಬಿಸಿಲಲ್ಲಿ ಮುಂದಕ್ಕೆ ಸಾಗುತ್ತಾನೆ. ಇದಾಗಿದೆ ನನ್ನ ಉದಾಹರಣೆ. (ಚಶ್ಮ ಎ ಮಾರಿಫತ್, ರೂಹಾನಿ ಖಝಾಇನ್, ಸಂಪುಟ-23, ಪುಟ-299-300)

ಒಂದು ಬಾರಿ ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್‌ರೊಡನೆ(ರ) ದುಆ ಮಾಡಲು ಹೇಳಿದ್ದ ಒಂದು ಘಟನೆ ಇದೆ. ಹಝ್ರತ್ ಉಮರ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್‌ರೊಡನೆ(ಸ) ನಾನು ಉಮ್ರ ಮಾಡಲಿಕ್ಕಾಗಿ ಅನುಮತಿ ಕೇಳಿದೆ. ಹಝ್ರತ್ ಪೈಗಂಬರ್(ಸ) ನನಗೆ ಅನುಮತಿ ಕೊಟ್ಟರು ಮತ್ತು ಹೀಗೆ ಹೇಳಿದರು: **ಲಾ ತನ್‌ಸನಾ ಯಾ ಅಖಿ ಮಿನ್‌ದುಆಇಕ**. ಹೇ ನನ್ನ ಸಹೋದರ, ನಮ್ಮನ್ನು ನಿನ್ನ ದುಆಗಳಲ್ಲಿ ಮರೆಯಬೇಡ. (ಎಂದರೆ, ನೀವು ದುಆ ಮಾಡುವಾಗ ನಮಗಾಗಿ ದುಆ ಮಾಡಲು ಮರೆಯಬೇಡ.) ಹಝ್ರತ್ ಉಮರ್(ರ) ಹೇಳುತ್ತಾರೆ: ಇದು ಎಂತಹ ಮಾತಾಗಿದೆ ಎಂದರೆ, ಇದರ ಬದಲಾಗಿ ನನಗೆ ಲೋಕ ಪೂರ್ತಿ ಲಭಿಸಿದರೂ ನನಗೆ ಈ ಮಾತಿನಿಂದ ಲಭಿಸಿದಷ್ಟು ಸಂತೋಷ ಲಭಿಸಲಿಕ್ಕೆ ಸಾಧ್ಯವಿಲ್ಲ. ಮತ್ತೊಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದ ಮಾತು ಹೀಗೆ ವರದಿಯಾಗಿದೆ: **ಅಶ್‌ರಕ್‌ನಾ ಯಾ ಅಖೀ ಫೀ ದುಆಇಕ**. ಹೇ ನನ್ನ ಸಹೋದರ, ನಮ್ಮನ್ನು ನಿನ್ನ ದುಆಗಳಲ್ಲಿ ಸೇರಿಸು. (ಸುನನ್ ಅಬೂದಾವೂದ್, ಕಿತಾಬುಲ್ ವಿತರ್, ಹದೀಸ್-1498)

ಹಝ್ರತ್ ಉಮರ್‌ರಿಗೆ(ರ) ಹಝ್ರತ್ ಪೈಗಂಬರ್‌ರೊಡನೆ(ಸ) ಅತಿಯಾದ ಪ್ರೇಮದ ಸಂಬಂಧವಿತ್ತು. ಇದು ಒಂದು ಘಟನೆಯಿಂದ ಸ್ಪಷ್ಟವಾಗುತ್ತದೆ. ಇದನ್ನು ನಾನು ಒಂದು ಖುತ್ಬದಲ್ಲಿ ಹಿಂದೆಯೂ ಪ್ರಸ್ತಾಪಿಸಿದ್ದೆ. ಈ ಕುರಿತು ಹಝ್ರತ್ ಆಇಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನಿಧನರಾದಾಗ, ಈ ಸುದ್ದಿಯನ್ನು ಕೇಳಿ ಹಝ್ರತ್ ಉಮರ್(ರ) ಎದ್ದುನಿಂತು ಹೀಗೆ ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಮೃತಪಟ್ಟಿಲ್ಲ. ಕೆಲವು ಜನರ ಕೈಕಾಲುಗಳನ್ನು ಕಡಿದು ಹಾಕಲು ಅಲ್ಲಾಹನು ಅವರನ್ನು ಖಂಡಿತ ಎಬ್ಬಿಸುವನು. ಹೇಗಿದ್ದರೂ ಹಝ್ರತ್ ಅಬೂಬಕ್ರ್(ರ) ಬಂದಾಗ ಅವರು ಸೂರಃ ಆಲಿಇಮ್ರಾನಿನ 145ನೇ ವಚನವನ್ನು

ಓದಿ ಹೇಳಿದರು ಮತ್ತು ಸತ್ಯವನ್ನು ಮನವರಿಕೆ ಮಾಡಲು ಹಝ್ರತ್ ಉಮರ್‌ರೊಡನೆ(ರ) ಹೇಳಿದರು. ಹೀಗೆ ಆ ಸಂಗತಿ ಕೊನೆಗೊಂಡಿತು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಸ್ಸಹಾಬ(ಸ), ಹದೀಸ್–3667–3668)

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

ಹಝ್ರತ್ ಪೈಗಂಬರ್(ಸ) ನಿಧನರಾದಾಗ, ಎಲ್ಲ ಪ್ರವಾದಿಗಳು ಮೃತಪಟ್ಟಿರುವವರು ಎಂಬ ವಿಷಯದಲ್ಲಿ ಸಹಾಬರು ಒಮ್ಮತಾಭಿಪ್ರಾಯವನ್ನು ಹೊಂದಿದ್ದರು. ಅದಕ್ಕೆ ಕಾರಣವೇನೆಂದರೆ, ಹಝ್ರತ್ ಪೈಗಂಬರ್(ಸ) ಜೀವಂತವಾಗಿರುವವರು ಮತ್ತು ಅವರು ಮರಳಿ ಬರುವವರು ಎಂದು ಹಝ್ರತ್ ಉಮರ್‌ರಿಗೆ(ರ) ಅನಿಸುತ್ತಿತ್ತು. ಅವರಿಗೆ ತನ್ನ ಈ ವಿಶ್ವಾಸದ ಮೇಲೆ ಎಷ್ಟು ದೃಢತೆ ಇತ್ತು ಎಂದರೆ, ಅದಕ್ಕೆ ವಿರುದ್ಧವಾಗಿ ಹೇಳುವವನ ತಲೆಯನ್ನು ಕಡಿಯಲು ಅವರು ತಯಾರಾಗಿ ನಿಂತಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಬಂದಾಗ ಅವರು ಎಲ್ಲ ಸಹಾಬರ ಮುಂದೆ **"ವಮಾ ಮುಹಮ್ಮದುನ್ ಇಲ್ಲಾ ರಸೂಲ್ ಖ಼ದ್ ಖ಼ಲತ್ ಮಿನ್ ಖಬಲಿಹಿರ್ರುಸುಲ್"** ಎಂಬ ಪವಿತ್ರ ಖುರ್‌ಆನಿನ ವಚನವನ್ನು ಓದಿದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಇದನ್ನು ಆಲಿಸಿ ನನ್ನ ಕಾಲುಗಳು ನಡುಗಿದುವು, ನಾನು ದುಃಖದಿಂದ ನೆಲಕ್ಕೆ ಬಿದ್ದನು. ಸಹಾಬರು ಹೇಳುತ್ತಾರೆ: ಈ ಆಯತ್ ಇಂದೇ ಅವತೀರ್ಣವಾಯಿತು ಎಂದು ನಮಗೆ ಅನಿಸುತ್ತಿತ್ತು. ನಾವು ಅಂದು ಈ ವಚನವನ್ನು ಓದುತ್ತಾ ಮಾರುಕಟ್ಟೆಗಳಲ್ಲಿ ಸುತ್ತುತ್ತಿದ್ದೆವು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಪ್ರವಾದಿಗಳಲ್ಲಿ ಯಾರಾದರೂ ಆ ಸಮಯದಲ್ಲಿ ಜೀವಂತವಾಗಿ ಇರುತ್ತಿದ್ದರೆ, ಈ ಪುರಾವೆ ಸರಿಯಾಗುತ್ತಿರಲಿಲ್ಲ. ಎಲ್ಲ ಪ್ರವಾದಿ ಮೃತಪಟ್ಟಿರುವಾಗ ಹಝ್ರತ್ ಪೈಗಂಬರ್(ಸ) ಸಹ ಮೃತಪಡಬೇಕಾಗಿತ್ತು. ಹಝ್ರತ್ ಈಸಾ(ಅ) ಜೀವಂತವಾಗಿದ್ದರೆ ಹಝ್ರತ್ ಉಮರ್‌ರಿಗೆ(ರ) ಅಬೂಬಕ್‌ರ್‌ರೊಡನೆ ಹೀಗೆ ಹೇಳಬಹುದಾಗಿತ್ತು: ನೀವೇಕೆ ಮೋಸ ಮಾಡುತ್ತಿದ್ದೀರಿ. ಹಝ್ರತ್ ಈಸಾ ಮಸೀಹ್ ಕೂಡ ಜೀವಂತವಾಗಿ ಆಕಾಶದಲ್ಲಿ ಇರುವವರು. ಹೀಗಿರುವಾಗ ಹಝ್ರತ್ ಪೈಗಂಬರ್(ಸ) ಜೀವಂತವಾಗಿರಲು ಏಕೆ ಸಾಧ್ಯವಿಲ್ಲ? ಆದರೆ ಎಲ್ಲ ಸಹಾಬರು ಆಗ ಮೌನವಾಗಿ ಇದ್ದರು. ಹಝ್ರತ್ ಈಸಾ ಮಸೀಹರು ಮೃತಪಟ್ಟಿದ್ದಾರೆ ಎಂದಾಗಿತ್ತು ಸಹಾಬರ ವಿಶ್ವಾಸ ಎಂದು ಇದರಿಂದ ಸಾಬೀತಾಗುತ್ತದೆ. (ತೊಹ್‌ಫತುಲ್ ಮುಲ್ಕ್, ಅನ್ವಾರುಲ್ ಉಲೂಮ್, ಸಂಪುಟ–2, ಪುಟ–128)

ಈ ಕುರಿತು ಹಝ್ರತ್ ಮಸೀಹ್ ಮೌಊದ್(ಅ) ಸಹ ಹೇಳಿರುವರು. ಅದನ್ನು ವಿಶದವಾಗಿ ನಾನು ಹಿಂದಿನ ಒಂದು ಖುತ್ಬದಲ್ಲಿ ಪ್ರಸ್ತಾಪಿಸಿದ್ದೆ.

ಹಝ್ರತ್ ಉಮರ್(ರ) ಹೇಗೆ ಹಝ್ರತ್ ಪೈಗಂಬರ್‌ರನ್ನು ಅನುಸರಿಸುತ್ತಿದ್ದರು ಎಂಬುದರ ಬಗ್ಗೆ ಹಝ್ರತ್ ಇಬ್ನು ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಅಜರುಲ್ ಅಸ್ವದ್ ಕಡೆಗೆ ಮುಖ ಮಾಡಿದರು. ಅನಂತರ ತನ್ನ ತುಟಿಯನ್ನು ಅದಕ್ಕೆ ಮುಟ್ಟಿಸಿದರು. ಎಂದರೆ ಅದನ್ನು ಚುಂಬಿಸಿದರು ಮತ್ತು ಬಹಳ ಹೊತ್ತು ಅತ್ತರು. ತಿರುಗಿ ನೋಡಿದಾಗ ಹಝ್ರತ್ ಉಮರ್(ರ) ಸಹ ಅಳುತ್ತಿರುವುದನ್ನು ಹಝ್ರತ್ ಪೈಗಂಬರ್(ಸ) ಕಂಡರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್, ಇದು ಕಣ್ಣೀರು ಸುರಿಸಲಾಗುವ ಸ್ಥಳವಾಗಿದೆ. (ಸುನನ್ ಇಬ್ನೆ ಮಾಜ, ಕಿತಾಬುಲ್ ಮನಾಸಿಕ್, ಹದೀಸ್–2945)

ಆಬಿಸ್ ಹಝ್ರತ್ ಉಮರ್‌ರಿಂದ(ರ) ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹಜರುಲ್ ಅಸ್‌ವದಿನ ಸಮೀಪಕ್ಕೆ ಬಂದರು. ಅದನ್ನು ಚುಂಬಿಸಿದರು. ಅನಂತರ ಹೀಗೆ ಹೇಳಿದರು: ನೀನೊಂದು ಕಲ್ಲಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತು. ನಷ್ಟವನ್ನು ಉಂಟುಮಾಡಲು ಅಥವಾ ಲಾಭವನ್ನು ನೀಡಲು ನಿನಗೆ ಸಾಧ್ಯವಿಲ್ಲ. ಹಝ್ರತ್ ಪೈಗಂಬರ್(ಸ) ನಿನ್ನನ್ನು ಚುಂಬಿಸಿದ್ದಾಗಿ ನಾನು ನೋಡಿರದಿದ್ದರೆ, ನಿನ್ನನ್ನು ನಾನು ಖಂಡಿತ ಚುಂಬಿಸುತ್ತಿರಲಿಲ್ಲ. (ಸಹೀಹ್ ಬುಖಾರಿ, ಕಿತಾಬುಲ್ ಹಜ್ಜ್, ಹದೀಸ್–1597)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಒಂದು ಬಾರಿ ತವಾಫ್ ಮಾಡುತ್ತಿದ್ದರು. ಅವರು ಕಅ್‌ಬದಲ್ಲಿ ಇರುವ ಹಜರುಲ್ ಅಸ್ವದ್ ಎಂಬ ಕಪ್ಪು ಕಲ್ಲಿನ ಮುಂದಿನಿಂದ ದಾಟಿಹೋಗುತ್ತಿದ್ದರು. ಅವರು ಅದನ್ನು ತನ್ನ ಬಡಿಗೆಯಿಂದ ತಟ್ಟಿ ಹೇಳಿದರು: ನೀನೊಂದು ಕಲ್ಲಾಗಿದೆ ಎಂದು ನನಗೆ ಚೆನ್ನಾಗಿ ಗೊತ್ತು. ನಿನಗೆ ಯಾವುದೇ ಶಕ್ತಿಯಿಲ್ಲ. ಆದರೆ ಅಲ್ಲಾಹನ ಆಜ್ಞೆ ಅನುಸಾರ ನಾನು ನಿನ್ನನ್ನು ಚುಂಬಿಸುತ್ತೇನೆ. ಇದಾಗಿತ್ತು ಅವರಿಗೆ ಏಕದೇವದ ಕುರಿತು ಇದ್ದ ಆವೇಶ. ಇದೇ ಅವರನ್ನು ಲೋಕದ ಉನ್ನತ ಸ್ಥಾನಕ್ಕೆ ಏರಿಸಿತು. ಅವರು ಏಕದೇವನ ಪರಿಪೂರ್ಣ ಪ್ರೇಮಿಯಾಗಿದ್ದರು. ಅಲ್ಲಾಹನ ಶಕ್ತಿಯಲ್ಲಿ ಬೇರೆ ಯಾವುದನ್ನೂ ಸಹಭಾಗಿಯನ್ನಾಗಿ ಮಾಡುವುದು ಅವರಿಗೆ ಸಹಿಸಲು ಸಾಧ್ಯವಾಗಿರಲಿಲ್ಲ. ಅದಕ್ಕೆ ಗೌರವ ಕೊಡಲು ಅಲ್ಲಾಹನು ಹೇಳಿದ ಕಾರಣದಿಂದ ನಿಸ್ಸಂಶಯವಾಗಿಯೂ ಅವರು ಹಜರುಲ್ ಅಸ್ವದನ್ನು ಗೌರವಿಸುತ್ತಿದ್ದರು. ಹಜರುಲ್ ಅಸ್ವದಿನಲ್ಲಿ ಏನಾದರೂ ವಿಶೇಷ ಗುಣವಿತ್ತು ಎಂಬ ಕಾರಣದಿಂದಲ್ಲ. ಯಾವುದಾದರೂ ಕೀಳುಮಟ್ಟದ ವಸ್ತುವನ್ನು ಕೂಡ ಚುಂಬಿಸಲು ಅಲ್ಲಾಹನು ಆಜ್ಞಾಪಿಸಿದರೆ, ನಾವು ಅದನ್ನು ಚುಂಬಿಸಲು ತಯಾರಿದ್ದೇವೆ ಎಂಬ ಅರಿವು ಅವರಿಗೆ ಇತ್ತು. ಏಕೆಂದರೆ ನಾವು ಅಲ್ಲಾಹನ ದಾಸರಾಗಿದ್ದೇವೆ. ಯಾವುದಾದರೂ ಕಲ್ಲು ಅಥವಾ ಕಟ್ಟಡದ ದಾಸರಲ್ಲ. ಆದ್ದರಿಂದ ಅವರು ಗೌರವ ಸಹ ನೀಡುತ್ತಿದ್ದರು ಮತ್ತು ತೌಹೀದ್, ಎಂದರೆ ಏಕದೇವವಿಶ್ವಾಸವನ್ನು ಸಹ ಕಡೆಗಣಿಸುತ್ತಿರಲಿಲ್ಲ. ಇದೇ ಒಬ್ಬ ಸತ್ಯವಿಶ್ವಾಸಿಯ ಪದವಿಯಾಗಿದೆ. ಲೋಕದಲ್ಲಿ ಕಲ್ಲಿನಿಂದ ಕಟ್ಟಲಾದ ಸಾವಿರಾರು ಕಟ್ಟಡದಂತೆ ಒಬ್ಬ ಸತ್ಯವಿಶ್ವಾಸಿಯು ಅಲ್ಲಾಹನ ಭವನವಾದ ಕಅ್‌ಬ ಮಂದಿರವನ್ನು ಸಹ ಕಲ್ಲುಗಳಿಂದ ಕಟ್ಟಲಾದ ಕಟ್ಟಡವೆಂದೇ ತಿಳಿಯುತ್ತಾನೆ. ಲೋಕದಲ್ಲಿ ಇರುವ ಕೋಟಿಗಟ್ಟಲೆ ಕಲ್ಲುಗಳಂತೆ ಒಬ್ಬ ಸತ್ಯವಿಶ್ವಾಸಿಯು ಹಜರುಲ್ ಅಸ್ವದನ್ನು ಸಹ ಒಂದು ಕಲ್ಲೆಂದೇ ಭಾವಿಸುತ್ತಾನೆ. ಆದರೆ ಅಲ್ಲಾಹನ ಭವನವಾದ ಕಅ್‌ಬವನ್ನು ಸಹ ಸತ್ಯವಿಶ್ವಾಸಿ ಗೌರವಿಸುತ್ತಾನೆ ಮತ್ತು ಹಜರುಲ್ ಅಸ್ವದನ್ನು ಸಹ ಚುಂಬಿಸುತ್ತಾನೆ. ಏಕೆಂದರೆ ಇದನ್ನು ಗೌರವಿಸಲು ಅಲ್ಲಾಹನು ಅವನನ್ನು ಆಜ್ಞಾಪಿಸಿದ್ದಾನೆ ಎಂದು ಅವನಿಗೆ ಗೊತ್ತಿದೆ. ಒಬ್ಬ ಸತ್ಯವಿಶ್ವಾಸಿ ಈ ಭವನವನ್ನು ಗೌರವಿಸುತ್ತಾನೆ ಮತ್ತು ಹಜರುಲ್ ಅಸ್ವದನ್ನು ಚುಂಬಿಸುತ್ತಾನಾದರೂ ಅವನು ಅಲ್ಲಾಹನ ದಾಸನಾಗಿದ್ದಾನೆ ಮತ್ತು ಅವನು ಯಾವುದೇ ಕಲ್ಲಿನ ದಾಸನಲ್ಲವೆಂಬ ವಿಶ್ವಾಸದಲ್ಲಿ ಒಬ್ಬ ಸತ್ಯವಿಶ್ವಾಸಿಯು ದೃಢವಾಗಿ ನೆಲೆನಿಂತಿರುತ್ತಾನೆ. ಇದೇ ಸತ್ಯವನ್ನು ಹಝ್ರತ್ ಉಮರ್(ರ) ವ್ಯಕ್ತಿಪಡಿಸಿದರು. ಅವರು ಹಜರುಲ್ ಅಸ್ವದಿಗೆ ಬಡಿಗೆಯಿಂದ ಬಡಿದರು. ಹಝ್ರತ್ ಉಮರ್(ರ) ಹೇಳಿದರು: ನಿನಗೆ ಯಾವುದಾದರೂ ಬೆಲೆಯಿದೆ ಎಂದು ನಾನು ಭಾವಿಸುವುದಿಲ್ಲ. ನೀನು ಲೋಕದಲ್ಲಿ ಇರುವ ಕೋಟಿಗಟ್ಟಲೆ ಕಲ್ಲಿನಂತೆ ಇರುವ ಕಲ್ಲು ಮಾತ್ರವಾಗಿದೆ. ಆದರೆ ನಿನ್ನನ್ನು ಗೌರವಿಸಲು ಅಲ್ಲಾಹನು ಹೇಳಿದ್ದಾನೆ. ಆದ್ದರಿಂದ ನಾನು ಗೌರವಿಸುತ್ತಾನೆ. ಹೀಗೆ ಹೇಳಿ ಅವರು ಮುಂದಕ್ಕೆ ಹೋಗಿ ಆ ಕಲ್ಲನ್ನು ಚುಂಬಿಸಿದರು. (ತಫ್ಸೀರೆ ಕಬೀರ್, ಸಂಪುಟ–10, ಪುಟ–130)

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ತಾಇಫಿನಿಂದ ಮರಳಿ ಬಂದು ಜುಅ್‌ರಾನದಲ್ಲಿದ್ದಾಗ ಹಝ್ರತ್ ಉಮರ್ ಬಿನ್ ಖ಼ತ್ತಾಬ್ ಹಝ್ರತ್ ಪೈಗಂಬರ್‌ರೊಡನೆ(ಸ) ಕೇಳಿದರು: ಯಾ ರಸೂಲಲ್ಲಾಹ್, ನಾನು ಜಾಹಿಲಿಯ್ಯ ಕಾಲದಲ್ಲಿ ಮಸ್ಜಿದ್ ಹರಾಮಿನಲ್ಲಿ ಒಂದು ದಿನ ಇಅ್‌ತಿಕಾಫ್‌ಗಾಗಿ ಕುಳಿತುಕೊಳ್ಳುವುದಾಗಿ ಹರಕೆ ಮಾಡಿದ್ದೆ. ಇದರ ಬಗ್ಗೆ ನಿಮ್ಮ ಉಪದೇಶವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಹೋಗು, ಒಂದು ದಿನ ಅಲ್ಲಿ ಇಅ್‌ತಿಕಾಫ್ ಮಾಡಿರಿ. ಅನುಮತನೀಯವಾದ ಹರಕೆಯನ್ನು ಅದು ಯಾವುದೇ ಕಾಲದಲ್ಲಿ ಮಾಡಿರುವುದಾದರೂ ಈಡೇರಿಸಬೇಕೆಂಬ ಪಾಠವನ್ನು ಹಝ್ರತ್ ಪೈಗಂಬರ್(ಸ) ನೀಡಿದರು. ವರದಿಗಾರ ಹೇಳುತ್ತಾರೆ: ಒಂದು ಸಲ ಹಝ್ರತ್ ಪೈಗಂಬರ್(ಸ) ಯುದ್ಧದ ಐದನೆಯ ಒಂದು ಭಾಗವಾಗಿ ಸಿಕ್ಕಿದುದರಲ್ಲಿ ಬಂಧಿಯಾಗಿದ್ದ ಒಬ್ಬ ಹುಡುಗಿಯನ್ನು ಹಝ್ರತ್ ಉಮರ್‌ರಿಗೆ(ರ) ಕೊಟ್ಟಿದ್ದರು. ಅನಂತರ ಹಝ್ರತ್ ಪೈಗಂಬರ್(ಸ) ಜನರ ಕೈದಿಗಳನ್ನು ಸ್ವತಂತ್ರಗೊಳಿಸಿದರು. ಈ ಮಾಹಿತಿ ಹಝ್ರತ್ ಉಮರ್‌ರಿಗೆ(ರ) ಲಭಿಸಿದಾಗ, ಅವರು ತನ್ನ ಮಗನೊಡನೆ ಹೇಳಿದರು: ಹೇ ಅಬ್ದುಲ್ಲಾಹ್, ಹಝ್ರತ್ ಪೈಗಂಬರ್(ಸ) ನಮಗೆ ನೀಡಿದ್ದ ಆ ಹುಡುಗಿಯ ಹತ್ತಿರ ನೀನು ಹೋಗು ಮತ್ತು ಅವಳನ್ನು ಸ್ವತಂತ್ರಗೊಳಿಸು. (ಸಹೀಹ್ ಮುಸ್ಲಿಮ್ ಕಿತಾಬುಲ್ ಈಮಾನ್, ಹದೀಸ್–4294)

ಹಝ್ರತ್ ಹುಧೈಫ(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಒಂದು ಬಾರಿ ತನ್ನ ಸವಾರಿಯಿಂದ ಕೆಳಗೆ ಇಳಿದರು. ಆಗ ಅವರಿಗೆ ದಿವ್ಯವಾಣಿ ಅವತೀರ್ಣವಾಯಿತು. ಹಝ್ರತ್ ಪೈಗಂಬರರ(ಸ) ಸವಾರಿಮೃಗ ಕುಳಿತುಕೊಂಡಿತ್ತು. ಅದು ಒಂದೇ ಸವನೆ ನಿಂತುಬಿಟ್ಟಿತು. ನಾನು ಅದರ ಲಗಾಮನ್ನು ಹಿಡಿದು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ತಂದು ಅದನ್ನು ಕುಳ್ಳಿರಿಸಿದೆ. ಅನಂತರ ನಾನು ಹಝ್ರತ್ ಪೈಗಂಬರ್(ಸ) ನಿಲ್ಲುವ ತನಕ ಆ ಒಂಟೆಯ ಸಮೀಪ ಕುಳಿತುಕೊಂಡೆನು. ನಾನು ಆ ಒಂಟೆಯನ್ನು ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಕೊಂಡುಹೋದೆನು. ನೀನು ಯಾರೆಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹುಧೈಫ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನಿನಗೆ ಒಂದು ರಹಸ್ಯವನ್ನು ಹೇಳುತ್ತೇನೆ. ಅದನ್ನು ಯಾರೊಡನೆಯೂ ಹೇಳಬೇಡ. ಕೆಲವು ವ್ಯಕ್ತಿಗಳ ಜನಾಝ಼ ನಮಾಝ಼ನ್ನು ನಿರ್ವಹಿಸುವುದರಿಂದ ನನ್ನನ್ನು ಅಲ್ಲಾಹನು ತಡೆದಿದ್ದಾನೆ. ಹಝ್ರತ್ ಪೈಗಂಬರ್(ಸ) ಕಪಟವಿಶ್ವಾಸಿಗಳಲ್ಲಿ ಕೆಲವರ ಹೆಸರನ್ನು ಹೇಳಿದರು. ಹಝ್ರತ್ ಪೈಗಂಬರ್(ಸ) ನಿಧನರಾಗಿ ಹಝ್ರತ್ ಉಮರರ(ರ) ಖಿ಼ಲಾಫತ್ ಕಾಲಘಟ್ಟ ಬಂದಾಗ, ಕಪಟವಿಶ್ವಾಸಿಗಳ ಸಂಘದೊಂದಿಗೆ ಸಂಬಂಧವಿದೆ ಎಂದು ಹಝ್ರತ್ ಉಮರ್(ರ) ಭಾವಿಸುತ್ತಿದ್ದವರಲ್ಲಿ ಯಾರಾದರೂ ಮೃತಪಟ್ಟರೆ, ಹಝ್ರತ್ ಉಮರ್(ರ) ಹಝ್ರತ್ ಹುಧೈಫರ ಕೈಯನ್ನು ಹಿಡಿದು ಜನಾಝ಼ ನಿರ್ವಹಿಸಲು ಅವರನ್ನು ಜೊತೆಗೆ ಕೊಂಡುಹೋಗುತ್ತಿದ್ದರು. ಹಝ್ರತ್ ಹುಧೈಫ(ರ) ಅವರ ಜೊತೆಗೆ ಹೋದರೆ, ಹಝ್ರತ್ ಉಮರ್(ರ) ಆ ವ್ಯಕ್ತಿಯ ಜನಾಝ಼ ನಮಾಝ್ ನಿರ್ವಹಿಸುತ್ತಿದ್ದರು. ಹಝ್ರತ್ ಹುಧೈಫ

ತನ್ನ ಕೈಯನ್ನು ಹಝ್ರತ್ ಉಮರರ(ರ) ಕೈಯಿಂದ ಬಿಡಿಸಿದರೆ, ಹಝ್ರತ್ ಉಮರ್(ರ) ಸಹ ಅವರ ಜನಾಝ ನಮಾಝ್ ನಿರ್ವಹಿಸುತ್ತಿರಲಿಲ್ಲ.
(ಅಸ್ಸೀರತುಲ್ ಹಲಬೀಯ(ಅನವಾದ) ಸಂಪುಟ-3, ಮೊದಲ ಅರ್ಧ ಬಾಗ, ಪುಟ-440-441, ದಾರುಲ್ ಇಶಾಸತ್ ಕರಾಚಿ 2009)

ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಗಳನ್ನು ಬಾಹ್ಯವಾಗಿಯೂ ಹಝ್ರತ್ ಉಮರ್(ರ) ಈಡೇರಿಸುತ್ತಿದ್ದ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸತ್ಯಸಂಧತೆ ಮತ್ತು ನಿಷ್ಠೆಯಿಂದ ತುಂಬಿದ್ದ ಹಝ್ರತ್ ಉಮರ್(ರ) ಎರಡನೇ ಖಲೀಫರಾಗುವ ಸೌಭಾಗ್ಯ ಪಡೆದರು. ಒಟ್ಟಿನಲ್ಲಿ ಈ ರೀತಿಯಾಗಿ ಪ್ರತಿಯೊಬ್ಬ ಸಹಾಬಿಯರು ಪರಿಪೂರ್ಣ ಗೌರವವನ್ನು ಗಳಿಸಿದರು. ರೋಮ್ ಮತ್ತು ಇರಾನಿನ ಸಂಪತ್ತುಗಳು ಅವರಿಗೆ ಲಭಿಸಿದವು. ಒಬ್ಬ ಸಹಾಬಿ ಇರಾನಿನ ರಾಜನ ಅರಮನೆಗೆ ಹೋದರು. ಅರಸನನ ನೌಕರರು ಚಿನ್ನ ಮತ್ತು ಬೆಳ್ಳಿಯ ಕುರ್ಚಿಗಳನ್ನು ಅಲ್ಲಿರಿಸಿದ್ದರು ಮತ್ತು ತಮ್ಮ ವೈಭವ ಮತ್ತು ಪ್ರತಾಪವನ್ನು ತೋರಿಸುತ್ತಿದ್ದರು. ಸಹಾಬಿ ಹೇಳಿದರು: ನಾವು ಈ ಸಂಪತ್ತನ್ನು ನೋಡಿ ಮೋಹಿತರಾಗಲಿಲ್ಲ. ಇರಾನಿನ ರಾಜರ ಬಳೆಗಳು ನಮಗೆ ಲಭಿಸುವುದು ಎಂದು ನಮಗಂತು ಮೊದಲೇ ವಾಗ್ದಾನ ನೀಡಲಾಗಿತ್ತು. ಹೀಗೆ ಭವಿಷ್ಯವಾಣಿಯು ಬಾಹ್ಯವಾಗಿಯೂ ಈಡೇರುವಂತಾಗಲು ಹಝ್ರತ್ ಉಮರ್(ರ) ಆ ಬಳೆಗಳನ್ನು ಒಬ್ಬ ಸಹಾಬಿಯ ಕೈಗಳಿಗೆ ತೊಡಿಸಿದರು.
(ಮಲ್‌ಫೂಝಾತ್, ಸಂಪುಟ-2, ಪುಟ-46)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಚಿನ್ನದ ಆಭರಣವನ್ನು ಧರಿಸುವುದು ಪುರುಷರಿಗೆ ಅನುಮತನೀಯವಲ್ಲ. ಆದರೆ ಹಝ್ರತ್ ಉಮರ್(ರ) ಕಿಸ್ರಾ ಚಕ್ರವರ್ತಿಯ ಬಳೆಗಳನ್ನು ಒಬ್ಬ ಸಹಾಬಿಗೆ ತೊಡಿಸಿದರು. ಆ ಸಹಾಬಿ ಅದನ್ನು ಧರಿಸುವುದನ್ನು ನಿರಾಕರಿಸಿದಾಗ ಹಝ್ರತ್ ಉಮರ್(ರ) ಅವರನ್ನು ಗದರಿಸಿದರು ಮತ್ತು ಹೀಗೆ ಹೇಳಿದರು: ನಿನ್ನ ಕೈಗಳಲ್ಲಿ ನಾನು ಕಿಸ್ರಾ ಚಕ್ರವರ್ತಿಯ ಬಳೆಗಳನ್ನು ಕಾಣುತ್ತಿದ್ದೇನೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರಲಿಲ್ಲವೇ? ಅದೇ ರೀತಿಯಲ್ಲಿ ಕಿಸ್ರಾನ ಕಿರೀಟ ಮತ್ತು ಅವನ ರೇಶ್ಮೆ ಬಟ್ಟೆ ಯುದ್ಧ ಸಂಪತ್ತಿನಲ್ಲಿ ಬಂದಾಗ ಹಝ್ರತ್ ಉಮರ್(ರ) ಒಬ್ಬ ವ್ಯಕ್ತಿಯೊಡನೆ ಆ ವಸ್ತ್ರ ಮತ್ತು ಆ ಕಿರೀಟವನ್ನು ಧರಿಸಲು ಹೇಳಿದರು. ಆ ವ್ಯಕ್ತಿ ಅದನ್ನು ಧರಿಸಿದಾಗ ಹಝ್ರತ್ ಉಮರ್(ರ) ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಕೆಲವು ದಿನಗಳಿಗೆ ಮುಂಚೆ ಕಿಸ್ರಾ ಚಕ್ರವರ್ತಿ ಈ ವಸ್ತ್ರವನ್ನು ಧರಿಸಿ ಈ ಕಿರೀಟವನ್ನು ತಲೆಯಲ್ಲಿ ಇಟ್ಟು ಇರಾನ್ ದೇಶದಲ್ಲಿ ದೌರ್ಜನ್ಯಕರವಾದ ಆಡಳಿತವನ್ನು ನಡೆಸುತ್ತಿದ್ದನು. ಇಂದು ಅವನು ಕಾಡುಗಳಲ್ಲಿ ಓಡುತ್ತಾ ಇದ್ದಾನೆ. ಇದಾಗಿದೆ ಲೋಕದ ಸ್ಥಿತಿ. ರೇಶ್ಮೆ ಮತ್ತು ಚಿನ್ನವನ್ನು ಧರಿಸುವುದು ಪುರುಷರಿಗೆ ನಿಷಿದ್ಧವಾದ ಕಾರಣದಿಂದ ಹಝ್ರತ್ ಉಮರರ(ರ) ಈ ಕೃತ್ಯವು ಬಾಹ್ಯವನ್ನು ಮಾತ್ರ ನೋಡುವ ವ್ಯಕ್ತಿಗಳಿಗೆ ಸರಿಯೆಂದು ತೋರದೇ ಇರಬಹುದು. ಆದರೆ ಒಂದು ಉತ್ತಮ ಸಂಗತಿಯನ್ನು ಮನವರಿಕೆ ಮಾಡಿಸಲು ಮತ್ತು ಉಪದೇಶ ನೀಡುವ ಉದ್ದೇಶದಿಂದ ಹಝ್ರತ್ ಉಮರ್(ರ) ಒಬ್ಬ ವ್ಯಕ್ತಿಯೊಡನೆ ಕೆಲವು ನಿಮಿಷಗಳಷ್ಟು ಕಾಲ ಚಿನ್ನ ಮತ್ತು ರೇಶ್ಮೆಯನ್ನು ಧರಿಸಲು ಹೇಳಿದರು. ಒಟ್ಟಿನಲ್ಲಿ ಯಥಾರ್ಥ ಸಂಗತಿ ಅಲ್ಲಾಹನ ಭಯವಾಗಿದೆ. ಎಲ್ಲ ಆದೇಶಗಳನ್ನು ದೇವಭಯವನ್ನು ಉಂಟುಮಾಡಲು ನೀಡಲಾಗುತ್ತವೆ. ತಖ್ವ ಪ್ರಾಪ್ತಿಯಾಗಲಿಕ್ಕಾಗಿ, ಎಂದರೆ ಭಯಭಕ್ತಿ ಗಳಿಸಲಿಕ್ಕಾಗಿ ಬಾಹ್ಯವಾಗಿ ಆರಾಧನೆ ಎಂದು ತೋರುವ ಸಂಗತಿಯನ್ನು ಉಪೇಕ್ಷಿಸಬೇಕಾಗಿ ಬಂದರೆ ಅದೇ ಪುಣ್ಯಕರ್ಮವಾಗುವುದು. (ಏಕ್ ಸಾಹಿಬ್ ಕೇ ಪಾಂಚ್ ಸವಾಲೋಂ ಕೇ ಜವಾಬ್, ಅನ್ವಾರುಲ್ ಉಲೂಮ್, ಸಂಪುಟ-3, ಪುಟ-28)

ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಒಂದು ಕನಸನ್ನು ಕಂಡೆನು. ಅದರಲ್ಲಿ ನಾನು ಒಂದು ಬಾವಿಯ ಬಳಿ ನಿಂತುಕೊಂಡು ಗಿರಕಿಯಲ್ಲಿ ಇರಿಸಲಾದ ಕೊಡದಲ್ಲಿ ನೀರನ್ನು ಸೇದುತ್ತಿದ್ದೆ. ಅಷ್ಟರಲ್ಲಿ ಅಬೂಬಕರ್(ರ) ಅಲ್ಲಿಗೆ ಬಂದರು. ಅವರು ಬಲಹೀನರಾಗಿಕೊಂಡು ಒಂದೆರಡು ತೊಟ್ಟಿ ನೀರನ್ನು ಸೇದಿದರು. ಅವರು ಅದನ್ನು ಕ್ಷೀಣತೆಯಿಂದ ಎಳೆಯುತ್ತಿದ್ದರು. ಅಲ್ಲಾಹನು ಅವರ ದುರ್ಬಲತೆಯನ್ನು ಮರೆಸುವನು. ಅವರನ್ನು ಕ್ಷಮಿಸುವನು. ಅನಂತರ ಉಮರ್ ಬಿನ್ ಖತ್ತಾಬ್ ಬಂದರು. ಆ ಕೊಡವು ದೊಡ್ಡ ಕೊಡವಾಗಿ ಬದಲಾಯಿತು. ಹಝ್ರತ್ ಉಮರ್‌ರಂತೆ ಅದ್ಭುತಕರವಾಗಿ ಕೆಲಸ ಮಾಡಬಲ್ಲ ಬೇರೆ ಬಲಿಷ್ಠ ವ್ಯಕ್ತಿಯನ್ನು ನಾನು ಕಂಡಿಲ್ಲ. ಜನರಿಗೆ ಸಾಕಾಗುವಷ್ಟು ಅವರು ನೀರನ್ನು ಸೇದಿದರು. ಅವರು ತಮ್ಮ ತಮ್ಮ ಸ್ಥಳಗಳಲ್ಲಿ ಹೋಗಿ ಕುಳಿತುಕೊಂಡರು.
(ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ, ಹದೀಸ್-3682)

ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ನಾನು ಮಲಗಿದ್ದೆ. ಈ ನಡುವೆ ನನ್ನ ಬಳಿಗೆ ಹಾಲಿನ ಒಂದು ಪಾತ್ರೆಯನ್ನು ತರಲಾಯಿತು. ನನ್ನ ಬೆರಳುಗಳಿಂದ ಅದು ಹೊರಗೆ ಬರುವಂತೆ ನನಗೆ ಅನಿಸುವಷ್ಟು ನಾನು ಅದನ್ನು ಕುಡಿದೆನು. ಉಳಿದ ಹಾಲನ್ನು ನಾನು ಹಝ್ರತ್ ಉಮರ್ ಬಿನ್ ಖತ್ತಾಬ್‌ರಿಗೆ ಕೊಟ್ಟೆನು. ಸಹಾಬರು ಕೇಳಿದರು: ಯಾ ರಸೂಲಲ್ಲಾಹ್, ಈ ಕನಸಿನ ಅರ್ಥವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಲಿನ ಅರ್ಥ ಅರಿವು, ಜ್ಞಾನ ಎಂದಾಗಿದೆ. (ಸಹೀಹ್ ಬುಖಾರಿ, ಕಿತಾಬುಲ್ ಇಲ್ಮ್, ಹದೀಸ್-82)

ಹಝ್ರತ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಃ ಈ ಹದೀಸನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ: ಫಝ್‌ಲುಲ್ ಇಲ್ಮ್ ಎಂದರೆ ಇಲ್ಲಿ ಅರಿವಿನ ಶ್ರೇಷ್ಠತೆ ಎಂದಲ್ಲ ಅರ್ಥ. ಬದಲಾಗಿ ಬಾಕಿಯುಳಿದ ಅರಿವು ಎಂದಾಗಿದೆ. ಹಝ್ರತ್ ಉಮರರ(ರ) ಮೂಲಕ ಮುಸ್ಲಿಮರಿಗೆ ಲಭಿಸಿದ ಲೌಕಿಕ ವಿಜಯಗಳು ಮತ್ತು ಶ್ರೇಷ್ಠತೆಗಳು, ಹಝ್ರತ್ ಪೈಗಂಬರರ(ಸ) ಪ್ರವಾದಿತ್ವದ ಜ್ಞಾನದಿಂದ ಹಝ್ರತ್ ಉಮರ್‌ರಿಗೆ(ರ) ಬಾಕಿಯುಳಿದು ಲಭಿಸಿದ ಜ್ಞಾನದ ಭಾಗಗಳಾಗಿವೆ. (ಎಂದರೆ ಈ ವಿಜಯಗಳು ಹಝ್ರತ್ ಪೈಗಂಬರರ(ಸ) ಅಧ್ಯಾಪನೆಗಳ ಕಾರಣಗಳಿಂದಲೇ ಹಝ್ರತ್ ಉಮರ್‌ರ(ರ) ಮೂಲಕ ಮುಸ್ಲಿಮರಿಗೆ ಲಭಿಸಿತ್ತು.) ಹಝ್ರತ್ ಪೈಗಂಬರರ(ಸ) ಸಕಲ ಶ್ರೇಷ್ಠತೆಗಳ ಕಾರಣದಿಂದ ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಪೈಗಂಬರರನ್ನು(ಸ) **ಮಜ್‌ಮಉಲ್ ಬಹ್‌ರೈನ್** ಎಂದು ಕರೆಯಲಾಗಿದೆ. ಎಂದರೆ, ಲೌಕಿಕ ಮತ್ತು ಪಾರತ್ರಿಕ ಜ್ಞಾನಗಳ ಸಂಗ್ರಹ. ರಾಜಕೀಯ ಅರಿವನ್ನು ಇಮಾಮ್ ಬುಖಾರಿಯು ಜ್ಞಾನದಲ್ಲಿ ಸೇರಿಸಿರುವರು. ಹಝ್ರತ್ ಪೈಗಂಬರ್(ಸ) ಪರಿಪೂರ್ಣವಾದ ಸನ್ಮಾರ್ಗವನ್ನು ತಂದು ಅದನ್ನು ಮನುಷ್ಯನ ಇಹಪರಲೋಕದ ಒಳಿತುಗಳಿಗೆ ಕಾರಣವನ್ನಾಗಿಸಿರುವರು. ಈಸಾ ಮಸೀಹರು ಹಝ್ರತ್ ಪೈಗಂಬರರ(ಸ) ಕುರಿತು ಹೀಗೆ ಭವಿಷ್ಯ ನುಡಿದಿರುವರು: ಆ ಸತ್ಯಾತ್ಮ ಬರುವಾಗ, ಅವರು ಪರಿಪೂರ್ಣ ಸತ್ಯವನ್ನು ತರುವರು. (ಯೋಹನ್ನ 12-16) ಹಝ್ರತ್ ಉಮರರ(ರ) ಘಟನೆಗಳನ್ನು ಓದುವುದಾದರೆ, ಹಝ್ರತ್ ಪೈಗಂಬರರ(ಸ) ಅನುಗ್ರಹದಿಂದ ಹಝ್ರತ್ ಉಮರ್(ರ) ಕುಡಿದ ಬಾಕಿಯುಳಿದ ಹಾಲಿನ ಬಗ್ಗೆ ಇರುವ ಕನಸಿನ ಸತ್ಯತೆ ಗೊತ್ತಾಗುವುದು. (ಸಹೀಹ್ ಬುಖಾರಿ, ಸಯ್ಯದ್ ಝೀನುಲ್ ಆಬಿದೀನ್ ವಲೀ ಉಲ್ಲಾ ಶಾಹ್ ಸಾಹಿಬ್, ಸಂಪುಟ-1, ಪುಟ-156-157)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಾಲಿನ ಪಾತ್ರೆ ಲಭಿಸಿದ್ದಾಗಿ ಹಝ್ರತ್ ಉಮರ್(ರ) ಕಂಡ ಕನಸನ್ನು ಅವರು ಹಝ್ರತ್ ಪೈಗಂಬರರ(ಸ) ಮುಂದೆ ಪ್ರಸ್ತಾಪಿಸಿದರು. ಇದರ ತಾತ್ಪರ್ಯ ಅರಿವು ಎಂದಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.
(ಖುತ್‌ಬಾತೆ ಮಹ್ಮೂದ್, ಸಂಪುಟ-23, ಪುಟ-467)

ಹಝ್ರತ್ ಅಬೂಸಈದ್ ಖುದ್‌ರಿ ಹೇಳುತ್ತಾರೆ - ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಆಲಿಸಿದೆನು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನಿದ್ದೆ ಮಾಡುತ್ತಿದ್ದೆ. ಕೆಲವು ಜನರನ್ನು ನನ್ನ ಮುಂದೆ ತರಲಾಯಿತು. ಅವರು ನಿಲುವಂಗಿಯನ್ನು ಧರಿಸಿದ್ದರು. ಅವರಲ್ಲಿ ಕೆಲವರ ನಿಲುವಂಗಿ ಎದೆಗಳ ತನಕ ತಲುಪುತ್ತಿತ್ತು ಮತ್ತು ಕೆಲವರದ್ದು ಅದಕ್ಕಿಂತ ಕೆಳಗಿನ ತನಕ ತಲುಪುತ್ತಿತ್ತು. ನನ್ನ ಮುಂದೆ ಹಝ್ರತ್ ಉಮರ್‌ರನ್ನು ಸಹ ತರಲಾಯಿತು. ಅವರು ಸಹ ನಿಲುವಂಗಿಯನ್ನು ಧರಿಸಿದ್ದರು. ಅದನ್ನು ಅವರು ಎಳೆಯುತ್ತಿದ್ದರು. ಸಹಾಬರು ಕೇಳಿದರು: ಇದರ ಅರ್ಥವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಅದರ ಅರ್ಥ ದೀನ್ ಎಂದರೆ, ಹಝ್ರತ್ ಉಮರರ ಧಾರ್ಮಿಕತೆಯಾಗಿದೆ.
(ಸಹೀಹ್ ಬುಖಾರಿ, ಕಿತಾಬ್ ಫಝಾಎಲುಸ್ಸಹಾಬ(ಸ), ಹದೀಸ್-3691)

ಹಝ್ರತ್ ಪೈಗಂಬರ್(ಸ) ಒಂದು ಸಂದರ್ಭದಲ್ಲಿ ಅನೇಕ ಸಹಾಬರ ಗುಣವೈಶಿಷ್ಟ್ಯಗಳನ್ನು ಪ್ರಸ್ತಾಪಿಸುತ್ತಾ ಹಝ್ರತ್ ಉಮರರ(ರ) ಬಗ್ಗೆ ಹೀಗೆ ಹೇಳಿದರು: ನನ್ನ ಉಮ್ಮತಿನಲ್ಲಿ ಅಲ್ಲಾಹನ ದೀನಿನ ವಿಷಯದಲ್ಲಿ ಅತ್ಯಂತ ಬಲಿಷ್ಠ ಉಮರ್ ಆಗಿರುವರು. (ಸುನನ್ ಇಬ್ನೆ ಮಾಜ, ಕಿತಾಬುಸ್ಸನ ಬಾಬ್ ಖಬಾಬ್, ಹದೀಸ್-154)

ಹಝ್ರತ್ ಮಾಲಿಕ್ ಬಿನ್ ಅಗ್‌ವಾಲ್ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಹೇಳಿದರು: ನಿಮ್ಮ ಲೆಕ್ಕ ತೆಗೆಯಲ್ಪಡುವುದಕ್ಕೆ ಮುಂಚಿತವಾಗಿ ನಿಮ್ಮ ಪರಿಶೋಧನೆ ಸ್ವತಃ ಮಾಡಿರಿ. ಏಕೆಂದರೆ ಇದು ಹೆಚ್ಚು ಸುಲಭ ಅಥವಾ ನಿಮ್ಮ ಲೆಕ್ಕ ಮಾಡುವುದಕ್ಕೆ ಇದು ಹೆಚ್ಚು ಸುಲಭ. ನಿಮ್ಮನ್ನು ಅಲ್ಲಾಹನು ಪರಿಶೀಲಿಸುವುದಕ್ಕೆ ಮುಂಚಿತವಾಗಿ ನಿಮ್ಮ ಆತ್ಮವನ್ನು ತೂಕ ಮಾಡಿರಿ ಮತ್ತು ಪರಿಶೀಲಿಸಿರಿ. ಅಲ್ಲಾಹನ ಮುಂದೆ ಹಾಜರಾಗಲಿಕ್ಕಾಗಿ ಅತ್ಯಂತ ಹೆಚ್ಚಿನ ತಯಾರಿ ಮಾಡಿರಿ. **ಯೌಮಇಧಿನ್ ತುಅ್‌ರಜೂನ ಲಾ ತುಖ್ಫಿ ಮಿನ್‌ಕುಂ ಖಾಫಿಯಃ** ಎಂದರೆ, ಆ ದಿನದಂದು ನಿಮ್ಮನ್ನು ಹಾಜರುಪಡಿಸಲಾಗುವುದು. ಯಾವುದೇ ರಹಸ್ಯ ಅಂದು ನಿಮ್ಮಿಂದ ರಹಸ್ಯವಾಗಿರುವುದಿಲ್ಲ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-4, ಪುಟ-161, ದಆರುಲ್ ಕುತುಬ್ ಇಲ್‌ಮಿಯ ಬೈರೂತ್ 2003)

ಹಝ್ರತ್ ಉಮರರ(ರ) ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಹಸನ್ ಹೇಳುತ್ತಾರೆ: ಅಲ್ಲಾಹನಾಣೆ, ಇಸ್ಲಾಂ ಸ್ವೀಕರಿಸುವುದರಲ್ಲಿ ಅವರು ಮೊದಲಿಗರಾಗಿರಲಿಲ್ಲ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದರಲ್ಲೂ ಅವರು ಅತ್ಯಂತ ಶ್ರೇಷ್ಠರಾಗಿರಲಿಲ್ಲ. ಆದರೂ ಲೌಕಿಕತೆಯೊಂದಿಗೆ ವಿರಕ್ತಿಯಲ್ಲಿ ಅವರು ಎಲ್ಲರಿಗಿಂತ ಮುಂದಿದ್ದರು. ಎಂದರೆ, ಲೌಕಿಕತೆಯೊಂದಿಗೆ ಅವರಿಗೆ ಆಸಕ್ತಿ ಇರಲಿಲ್ಲ. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದರ ವಿಷಯದಲ್ಲೂ

ಅವರು ಅತ್ಯಂತ ಕಠಿಣರಾಗಿದ್ದರು. ಅಲ್ಲಾಹನ ವಿಷಯದಲ್ಲಿ ಯಾವನೇ ದೂರುವವನ ದೂರಿಗೆ ಅವರು ಹೆದರುತ್ತಿರಲಿಲ್ಲ. (ಮುಸನ್ನಫ್ ಬಿನ್ ಅಬೀ ಶಿಬ, ಕಿತಾಬುಲ್ ಫಝಾಇಲ್, ಸಂಪುಟ-11, ಪುಟ-120, ಹದೀಸ್-32546, 2004)

ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಇಸ್ಲಾಂ ಸ್ವೀಕರಿಸುವುದರಲ್ಲಿ ನಮಗಿಂತ ಮುಂಚಿನವರಾಗಿಲಿಲ್ಲ. ಆದರೆ ಅವರು ಯಾವ ಸಂಗತಿಯಲ್ಲಿ ನಮಗಿಂತ ಶ್ರೇಷ್ಠರು ಎಂದು ನನಗೆ ಗೊತ್ತಾಯಿತು. ಅವರು ದೇವಭಕ್ತಿ ಮತ್ತು ಲೌಕಿಕತೆಯೊಂದಿಗೆ ವಿರಕ್ತಿಯ ವಿಷಯದಲ್ಲಿ ಅತ್ಯಂತ ಶ್ರೇಷ್ಠರಾಗಿದ್ದರು. (ಮುಸನ್ನಫ್ ಬಿನ್ ಅಬೀ ಶಿಬ, ಕಿತಾಬುಲ್ ಫಝಾಇಲ್, ಸಂಪುಟ-11, ಪುಟ-120, ಹದೀಸ್-32548, 2004)

ಹಿಶಾಂ ಬಿನ್ ಉರ್‌ವ ತಮ್ಮ ತಾಯಿಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಮರ್(ರ) ಸಿರಿಯಗೆ ಹೋದಾಗ ಅವರ ನಿಲುವಂಗಿ ಹಿಂದಿನಿಂದ ಹರಿದುಹೋಯಿತು. ಅದು ಒಂದು ದಪ್ಪದ ಮತ್ತು ಉದ್ದದ ನಿಲುವಂಗಿಯಾಗಿತ್ತು. ಹೇಗಿದ್ದರೂ ಅವರು ಆ ನಿಲುವಂಗಿಯನ್ನು ಅಝ್ರಿಯಾತ್ ಅಥವಾ ಈಲ ನಿವಾಸಿಗಳಿಗೆ ಕಳುಹಿಸಿದರು. ಇದು ಸಿರಿಯದ ಕಡೆಯಿರುವ ಒಂದು ಪಟ್ಟಣವಾಗಿದೆ. ವರದಿಗಾರ ಹೇಳುತ್ತಾರೆ: ಅವರು ಈ ನಿಲುವಂಗಿಯನ್ನು ತೊಳೆದು ಅದಕ್ಕೆ ಹೊಲಿಗೆ ಹಾಕಿದರು. ಹಝ್ರತ್ ಉಮರ್‌ರಿಗಾಗಿ(ರ) ಖಿಬ್‌ತರಿ ಖಮೀಸನ್ನು ಸಹ ತಯಾರು ಮಾಡಲಾಯಿತು. ಖಿಬ್‌ತರಿ ದಾರದಿಂದ ತಯಾರಿಸಲಾಗುವ ಬಿಳಿ ತೆಲುವಾದ ಬಟ್ಟೆಯಾಗಿದೆ. ಅನಂತರ ಈ ಎರಡೂ ನಿಲುವಂಗಿಗಳನ್ನು ಹಝ್ರತ್ ಉಮರ್‌ರ(ರ) ಬಳಿಗೆ ತರಲಾಯಿತು. ಅವರ ಮುಂದೆ ಖಿಬ್‌ತರಿ ನಿಲುವಂಗಿಯನ್ನು ಇರಿಸಲಾಯಿತು. ಹಝ್ರತ್ ಉಮರ್(ರ) ಅದನ್ನು ಹಿಡಿದು ಅದನ್ನು ಸ್ಪರ್ಶಿಸಿದರು ಮತ್ತು ಹೀಗೆ ಹೇಳಿದರು: ಇದು ಹೆಚ್ಚು ಮೃದುವಾಗಿದೆ. ಅದನ್ನು ಅವರು ಅದೇ ವ್ಯಕ್ತಿಗೆ ಮರಳಿಸಿದರು. ಅನಂತರ ಹೇಳಿದರು: ನನಗೆ ನನ್ನ ನಿಲುವಂಗಿಯನ್ನೇ ಮರಳಿ ನೀಡಿರಿ. ಏಕೆಂದರೆ ಅದು ಬೆವರನ್ನು ಇತರ ನಿಲುವಂಗಿಗಿಂತ ಉತ್ತಮವಾಗಿ ಹೀರುತ್ತದೆ. ಹರಿದ ನಂತರ ಸರಿಪಡಿಸಿದ ಆ ನಿಲುವಂಗಿಯೇ ಉತ್ತಮ. (ಮುಸನ್ನಫ್ ಬಿನ್ ಅಬೀ ಶಿಬ, ಕಿತಾಬುಲ್ ಫಝಾಇಲ್, ಸಂಪುಟ-11, ಪುಟ-120, ಹದೀಸ್-34427, 2004)

ಹಝ್ರತ್ ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ: ಹಝ್ರತ್ ಉಮರ್ ಬಿನ್ ಖತ್ತಾಬ್‌ರನ್ನು(ರ) ನಾನು ಅವರು ಅಮೀರುಲ್ ಮೂಅ್‌ಮಿನೀನ್ ಆದಾಗ, ಎಂದರೆ ಖಲೀಫರಾಗಿದ್ದಾಗ ನೋಡಿದೆನು. ಅವರ ಎರಡು ತೋಳುಗಳ ನಡುವೆ ನಿಲುವಂಗಿಯಲ್ಲಿ ಮೂರು ಚರ್ಮದ ಹೊಲಿಕೆಗಳಿದ್ದುವು. ಮತ್ತೊಂದು ವರದಿಯಲ್ಲಿ ಹಝ್ರತ್ ಅನಸ್(ರ) ಹೇಳುತ್ತಾರೆ: ಹಝ್ರತ್ ಉಮರರ ನಿಲುವಂಗಿಯ ಎರಡು ತೋಳುಗಳ ಭಾಗದಲ್ಲಿ ಚರ್ಮದ ನಾಲ್ಕು ಹೊಲಿಗೆಗಳು ಇರುವುದನ್ನು ನಾನು ಕಂಡೆನು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-249, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಲೆಬನಾನ್ 1990)

ಹೇಗಿದ್ದರೂ ಹಝ್ರತ್ ಉಮರರ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. ಈಗ ನಾನು ದಿವಂಗತರೊಬ್ಬರ ಬಗ್ಗೆ ಪ್ರಸ್ತಾಪಿಸಲು ಬಯಸುತ್ತೇನೆ. ಜುಮಾ ನಮಾಝ್ ನಂತರ ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

ಅದು ಡಾಕ್ಟರ್ ತಾಸೀರ ಮುಜ್‌ತಬಿ ಸಾಹಿಬ್‌ರ ಪ್ರಸ್ತಾಪವಾಗಿದೆ. ಫಝ್ಲೇ ಉಮರ್ ಆಸ್ಪತ್ರೆಯ ಡಾಕ್ಟರ್ ಆಗಿದ್ದರು. ಎಪ್ಪತನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಅನೇಕ ರೋಗಗಳಿಂದ ಪೀಡಿತರಾಗಿದ್ದರು. ಆದರೆ ಈಗ ಅಚಾನಕ್ಕಾಗಿ ಆರೋಗ್ಯ ಕೆಡುತ್ತಾ ಹೋಗಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಡಾಕ್ಟರ್ ಸಾಹಿಬ್‌ರ ಕುಟುಂಬದಲ್ಲಿ, ಅವರ ತಂದೆಯ ಕಝಿನ್ ಆದ ಸಯ್ಯದ್ ಫಖ್‌ರುಲ್ ಇಸ್ಲಾಂ ಮೂಲಕ ಅಹ್ಮದಿಯ್ಯತ್ ಪ್ರವೇಶಿಸಿತು. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಆದರೆ ಡಾಕ್ಟರ್ ತಾಸೀರ್ ಮುಜ್ತಬಿ ಸಾಹಿಬ್‌ರ ತಂದೆಯಾದ ಗುಲಾಂ ಮುಜ್‌ತಬಿಯವರು ತನ್ನ ಕಲಿಕೆಯ ಕಾಲದಲ್ಲಿ, ಎಂದರೆ, 1938ರಲ್ಲಿ ಬೈಅತ್ ಮಾಡಿ ಅಹ್ಮದಿಯಾದರು. ಹಝ್ರತ್ ಖಲೀಫತುಲ್ ಸಾಲಿಸ್(ರಹ್) ನುಸ್ರತ್ ಜಹಾನ್ ಸ್ಕೀಮಿನಡಿಯಲ್ಲಿ ವಖ್ಫ್ ಮಾಡಲು ಮನವಿ ಮಾಡಿದಾಗ, ಡಾಕ್ಟರ್ ತಾಸೀರರ ತಂದೆಯಾದ ಗುಲಾಂ ಮುಜ್ತಬಿ ಸಾಹಿಬ್‌ರು ಕರಾಚಿಯಲ್ಲಿ ಸಿವಿಲ್ ಸರ್ಜನ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಅಲ್ಲಿಂದ ಪೆನ್ಶನ್ ಪಡೆದು ವಖ್ಫ್ ಮಾಡಿ 1970ರಲ್ಲಿ ಆಫ್ರಿಕಾಗೆ ಹೋದರು. 1999 ತನಕ ಅಲ್ಲಿ ಸೇವೆ ಸಲ್ಲಿಸಿದರು. ಘಾನಾದಲ್ಲಿ, ನೈಜೀರಿಯದಲ್ಲಿ, ಸಿರಲಿಯೋನಿನಲ್ಲಿ ಸೇವೆ ಸಲ್ಲಿಸಿದರು. ಡಾಕ್ಟರ್ ತಾಸೀರ್ ಮುಜ್ತಬಿ ಸಾಹಿಬ್‌ರು ಸಹ ತನ್ನ ಮೆಡಿಸಿನಿನ ಕಲಿಕೆ ಪೂರ್ಣಗೊಳಿಸಿದ ನಂತರ ಸೈನ್ಯದಲ್ಲಿ ಎರಡು ವರ್ಷಗಳಷ್ಟು ಕಾಲ ಕೆಲಸ ಮಾಡಿದರು. ಅನಂತರ ಸಿವಿಲ್ ಆಸ್ಪತ್ರೆ ಕರಾಚಿಯಲ್ಲಿ ಕೆಲಸ ಮಾಡಿದರು. ಅನಂತರ ಕರಾಚಿಯ ಜಿನಾಹ್ ಆಸ್ಪತ್ರೆಯಲ್ಲಿ ಕೆಲಸ ಮಾಡಿದರು. 1982ರಲ್ಲಿ ಅವರು ಮೂರು ವರ್ಷಗಳಿಗೆ ವಖ್ಫ್ ಮಾಡಿದರು. ಅವರನ್ನು ಘಾನಾಗೆ ಕಳುಹಿಸಲಾಯಿತು. ಅಲ್ಲಿ ಅವರು ಟೀಚಿಮಾನ್ ಎಂಬ ಆಸ್ಪತ್ರೆಯಲ್ಲಿ ಇದ್ದರು. ಅನಂತರ ಅವರಿಗೆ ಓಸೆಕೋರೆ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ಆ ಆಸ್ಪತ್ರೆಯನ್ನು ಅವರ ತಂದೆಯೇ ಶುರುಮಾಡಿದ್ದರು. ಅವರು ತನ್ನ ತಂದೆಯೊಂದಿಗೆ ಮೂರು ವರ್ಷಗಳ ಕಾಲ ಕೆಲಸ ಮಾಡಿದರು. ಅವರಿಂದಲೇ ಸರ್ಜರಿಯನ್ನೂ ಕಲಿತರು. ಅವರು ಬಹಳ ಉತ್ತಮ ಸರ್ಜನ್ ಆಗಿದ್ದರು. ಘಾನದಲ್ಲಿ ಡಾಕ್ಟರ್ ತಾಸೀರ್ ಸಾಹಿಬ್‌ರಿಗೆ ಸುಮಾರು 23 ವರ್ಷಗಳಷ್ಟು ಕಾಲ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ಅನಂತರ 17 ವರ್ಷಗಳ ಕಾಲ ರಬ್ವದ ಫಝ್ಲೇ ಉಮರ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಈ ರೀತಿಯಲ್ಲಿ ಸುಮಾರು 40 ವರ್ಷಗಳ ಕಾಲ ಅವರಿಗೆ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತು.

ಅವರ ವಿವಾಹವು ಸಾಹಿಬ್‌ಝಾದಿ ಅಮತುಲ್ ಹಕೀಂ ಸಾಹಿಬ ಮತ್ತು ಸಯ್ಯದ್ ದಾವೂದ್ ಮುಝಫ್ಫರ್ ಶಾಹ್ ಸಾಹಿಬ್‌ರ ಮಗಳಾದ ಅಮತುರ್ರೌಫ್ ಸಾಹಿಬರೊಡನೆ ನಡೆದಿತ್ತು. ಸಾಹಿಬ್‌ಝಾದ ಅಮತುಲ್ ಹಕೀಂ ಹಝ್ರತ್ ಮುಸ್ಲಿಹ್ ಮೌಊದ್‌ರ ಮಗಳಾಗಿದ್ದರು. ಡಾಕ್ಟರ್ ಸಾಹಿಬ್‌ರಿಗೆ ಒಬ್ಬ ಪುತ್ರ ಮತ್ತು ಒಬ್ಬಳು ಪುತ್ರಿಯಿದ್ದಾರೆ.

ಡಾಕ್ಟರ್ ಸಾಹಿಬ್‌ರ ಪತ್ನಿಯಾದ ಅಮತುರ್ರೌಫ್ ಸಾಹಿಬ ಹೇಳುತ್ತಾರೆ: ರೋಗಾವಸ್ಥೆಯ ಸಮಯದಲ್ಲಿ ನಾನು ಅವರನ್ನು ಭೇಟಿಯಾಗಲು ಹೋದಾಗ, ಹುಝೂರಿಗೆ ಸಲಾಂ ತಲುಪಿಸಲು ಅವರು ಹೇಳಿದರು. ಅದು ವಿದಾಯದ ಸಲಾಮಿನಂತಿತ್ತು. ಅವರು ಬರೆಯುತ್ತಾರೆ: ಘಾನದಲ್ಲಿ ಒಮ್ಮೆ ಅವರು ಕಠಿಣವಾಗಿ ರೋಗಿಯಾದರು. ಬಹಳ ಕಷ್ಟತೆಯಿಂದ ರಾತ್ರಿಯನ್ನು ಕಳೆದರು. ಬಹಳ ಅಪಾಯಕಾರಿ ಸ್ಥಿತಿಯಾಗಿತ್ತು. ಯಾರೋ ಸಲಾಂ ಹೇಳಿರುವರು, ಅವರು ಯಾರೆಂದು ನೋಡಿ ಬಾ ಎಂದು ಫಜ್ರಿನ ಸಮಯದಲ್ಲಿ ನನ್ನೊಡನೆ ಹೇಳಿದರು. ಬಾಗಿಲು ಮುಚ್ಚಿದೆ. ಯಾರೂ ಬರುವ ಸಾಧ್ಯತೆಯಿಲ್ಲವೆಂದು ನಾನು ಹೇಳಿದೆ. ಒಂದು ಗಂಟೆಯ ನಂತರ ಅವರು ಪುನಃ ನನ್ನೊಡನೆ ಹೇಳಿದರು. ನಾನು ಸಲಾಂ ಹೇಳುವ ಶಬ್ದವನ್ನು ಆಲಿಸಿದ್ದೇನೆ. ಯಾರೋ ಸಲಾಂ ಹೇಳಿರುವರು. ಅನಂತರ ಅಲ್ಲಾಹನ ಅನುಗ್ರಹದಿಂದ ಅವರ ಆರೋಗ್ಯ ಉತ್ತಮಗೊಳ್ಳಲು ಶುರುವಾಗಿ ಸರಿಯಾಯಿತು. ಅನಂತರ ನಾನು ಅವರಿಗಾಗಿ ದುಆ ಸಹ ಮಾಡಿದೆ. ಅವರಿಗೆ ದೀರ್ಘಾಯುಸ್ಸು ಇರುವುದು ಎಂದು ನನ್ನೊಡನೆ ಹೇಳಲಾಯಿತು. ಬಹಳ ವಿನಯವಂತ, ನಿಸ್ವಾರ್ಥ, ನಿರುಪದ್ರವಿ ವ್ಯಕ್ತಿಯಾಗಿದ್ದರು. ಎಂದಿಗೂ ಯಾರ ಬಗ್ಗೆ ಕೆಟ್ಟದಾಗಿ ಹೇಳುತ್ತಿರಲಿಲ್ಲ. ಯಾರಾದರೂ ಹೇಳಿದರೂ ಪೂರ್ಣವಾಗಿ ಸುಮ್ಮನಿರುತ್ತಿದ್ದರು.

ಡಾಕ್ಟರ್ ಸಾಹಿಬ್ ಅವರ ಸಹೋದರ ಬರೆಯುತ್ತಾರೆ: ರೋಗಿಗಳನ್ನು ಆಸ್ಪತ್ರೆ ಸಮಯದ ನಂತರವೂ ತಪಾಸನೆ ಮಾಡುತ್ತಿದ್ದರು. ಬಂದ ರೋಗಿಗಳು ಚಿಕಿತ್ಸೆ ಪಡೆಯದೇ ಹೋಗುವಂತಾಗದಿರಲು ಮತ್ತು ಇತರ ಡಾಕ್ಟರ್‌ಗಳ ಭಾರವನ್ನು ಕಡಿಮೆಗೊಳಿಸಲು ನಾನು ಅವರ ಚಿಕಿತ್ಸೆ ನಡೆಸುತ್ತೇನೆ ಎಂದು ಅವರು ಹೇಳುತ್ತಿದ್ದರು. ಬಹಳ ಸಭ್ಯ ಮತ್ತು ಮಿತಭಾಷಿಯಾದ ವ್ಯಕ್ತಿಯಾಗಿದ್ದರು. ಸದಾ ಮುಗುಳ್ನಗುತ್ತಾ ನಮ್ಮ ಬಳಿಯಿಂದ ದಾಟಿ ಹೋಗುತ್ತಿದ್ದರು ಎಂದು ಸೆಕ್ಯೂರಿಟಿಯ ಕಾರ್ಯಕರ್ತರು ಮತ್ತು ಆಸ್ಪತ್ರೆಯ ಸೇವಕರು ಕೂಡ ಹೇಳುತ್ತಾರೆ. ಸಾಮಾನ್ಯವಾಗಿ ರೋಗಿಗಳೊಂದಿಗೆ, ವಿಶೇಷವಾಗಿ ಅಹ್ಮದಿಯರೊಂದಿಗೆ ಅವರು ಬಹಳ ಉತ್ತಮವಾಗಿ ವರ್ತಿಸುತ್ತಿದ್ದರು. ಆಸ್ಪತ್ರೆಯ ಸಮಯದ ಹೊರತು ಕೂಡ ಯಾರಾದರೂ ಅವರ ಬಳಿಗೆ ಬಂದರೆ, ಸಾಮಾನ್ಯವಾಗಿ ಫೀಸ್ ಪಡೆಯದೇ ಚೆಕಪ್ ಮಾಡುತ್ತಿದ್ದರು. ರಬ್ವ ಜಾಮಿಅದ ಪ್ರಾಂಶುಪಾಲರಾದ ಮುಬಶ್ಶಿರ್ ಸಾಹಿಬ್‌ರು ಬರೆಯುತ್ತಾರೆ: ಕೆಲವು ಸಂದರ್ಭಗಳಲ್ಲಿ ಅವರೊಡನೆ ಕುಳಿತುಕೊಳ್ಳುವ ಸೌಭಾಗ್ಯ ನನಗೆ ಲಭಿಸಿತ್ತು. ಅವರು ಬಹಳ ಕಡಿಮೆ ಮಾತನಾಡುವ ವ್ಯಕ್ತಿಯಾಗಿದ್ದರು, ಸೌಮ್ಯವಾಗಿ, ಪ್ರೀತಿಯಿಂದ, ವಿನಯದಿಂದ ಮಾತನಾಡುತ್ತಿದ್ದರು. ಇಂತಹ ವಿನಯ ಮತ್ತು ಸರಳತೆಯನ್ನು ನಾನು ಬೇರೆ ಯಾರಲ್ಲೂ ಕಂಡಿಲ್ಲ. ಆಸ್ಪತ್ರೆಯಲ್ಲಿ ಜನರಿಂದಲೂ, ಬಡ ಜನರಿಂದಲೂ ಅವರ ಬಗ್ಗೆಗಿನ ಘಟನೆಗಳನ್ನು ಕೇಳಿದ್ದೇನೆ. ಆಸ್ಪತ್ರೆಯಲ್ಲಿ ಇಂತಹ ಡಾಕ್ಟರ್‌ಗಳು ಇವೆ ಎಂಬ ಕಾರಣದಿಂದ ಸಂತೋಷವು ಆಗುತ್ತಿತ್ತು. ಕೆಲವೊಮ್ಮೆ ಆಸ್ಪತ್ರೆಯ ಸಮಯ ಮುಗಿದಿರುತ್ತದೆ. ರೂಮಿನಿಂದ ಹೊರಗೆ ಹೋಗುತ್ತಿರುವಾಗ ಯಾರಾದರೂ ರೋಗಿ ಬಂದರೆ, ಆ ರೋಗಿಯನ್ನೇ ಕಾಯುತ್ತಿದ್ದರು ಎಂಬ ರೀತಿಯಲ್ಲಿ ರೋಗಿಯನ್ನು ಕ್ಲಿನಿಕ್ ರೂಮಿಗೆ ಕೊಂಡು ಹೋಗುತ್ತಿದ್ದರು. ಬಡವರ ಸೇವೆ ಬಹಳವಾಗಿ ಮಾಡುತ್ತಿದ್ದರು.

ನಾನು 2004ರಲ್ಲಿ ಆಫ್ರಿಕಾಗೆ ಹೋದಾಗ, ಘಾನ ಮತ್ತು ಇತರ ಸ್ಥಳಗಳಲ್ಲಿ ಡಾಕ್ಟರ್ ಸಾಹಿಬ್‌ರು ನನ್ನ ಜೊತೆಗಿದ್ದರು. ಬೆನಿನ್ ಸಹ ಹೋಗಿದ್ದೆವು. ಜರ್ಮನಿಯ ಹ್ಯೂಮಾನಿಟಿ ಫಸ್ಟಿನ ಚೇರ್‌ಮ್ಯಾನ್ ಆದ ಅತ್‌ಹರ್ ಝುಬೇರ್ ಸಾಹಿಬ್ ಹೇಳುತ್ತಾರೆ: ಅಸಮಾಧಾನದಿಂದ ಇದ್ದ ಒಬ್ಬ ಮಹಿಳೆಯನ್ನು ಡಾಕ್ಟರ್ ಸಾಹಿಬ್‌ರು ಕಂಡರು. ಕಳವಳಗೊಳ್ಳಲು ಕಾರಣವೇನೆಂದು ಮಹಿಳೆಯೊಡನೆ ಕೇಳಲು ನನ್ನೊಡನೆ ಡಾಕ್ಟರ್ ಸಾಹಿಬ್‌ರು ಹೇಳಿದರು. ಮಹಿಳೆ ಹೇಳಿದಳು: ನಾನು ಖಲೀಫತುಲ್ ಮಸೀಹರನ್ನು ಭೇಟಿಯಾಗಲು ಬಂದಿದ್ದೆ. ನನ್ನ ಬಳಿಯಿದ್ದ ಎಲ್ಲವನ್ನು ನಾನು ಖರ್ಚು ಮಾಡಿದೆ. ಮರಳಿ ಹೋಗಲು ನನ್ನ ಬಳಿ ಹಣವಿಲ್ಲ.

ಇದನ್ನು ಕೇಳಿ ಡಾಕ್ಟರ್ ಸಾಹಿಬ್‌ರು ಹೇಳಿದರು: ಹಾಗಾದರೆ, 30 ಸಾವಿರ ಫ್ರಾಂಕ್ ಸೀಫ ಅವರಿಗೆ ಕೊಡಿರಿ. ಆ ಕಾಲದಲ್ಲಿ ಅಷ್ಟು ಹಣ ಒಬ್ಬ ಸಾಮಾನ್ಯ ವ್ಯಕ್ತಿಯ ಸುಮಾರು ಒಂದು ತಿಂಗಳ ಸಂಬಳಕ್ಕೆ ಸಮಾನವಾಗಿತ್ತು. ಡಾಕ್ಟರ್ ಸಾಹಿಬ್‌ರು ಅಷ್ಟು ಹಣವನ್ನು ತಕ್ಷಣವೇ ಅವರಿಗೆ ಕೊಟ್ಟರು.

ಹನೀಫ್ ಮಹ್ಮೂದ್ ಸಾಹಿಬ್‌ರು ಬರೆಯುತ್ತಾರೆ: ಅತ್ಯಂತ ಸರಳ ಮತ್ತು ವಿನಯವಂತ ವ್ಯಕ್ತಿಯಾಗಿದ್ದರು. ವಖ್ಫೇ ಝಿಂದಗಿಯರೊಡನೆ ಬಹಳ ಪ್ರೀತಿಯಿಂದ ವರ್ತಿಸುತ್ತಿದ್ದರು. ಒಂದು ಸಲ ನನ್ನ ಪತ್ನಿ ರೋಗಿಯಾದಳು. ಆಗ ಅವರು ನನ್ನ ಪತ್ನಿಯ ಚಿಕಿತ್ಸೆ ನಡೆಸಿದರು. ನಾವು ಕೇವಲ ಅವರ ಸಲಹೆ ಪಡೆಯಲು ಹೋಗಿದ್ದೆವು. ಚಿಕಿತ್ಸೆ ನಡೆಸಲು ಹೋಗಿರಲಿಲ್ಲ. ಬಿಲ್ ಮಾಡಿಲ್ಲವೆಂದು ನಾವು ಹೇಳಿದಾಗ, ಅವರು ಬೇಗನೇ ತನ್ನ ಸಹಾಯಕರನ್ನು ಕರೆದು ತನ್ನ ಜೇಬಿನಿಂದ ನೂರು ರೂಪಾಯಿ ತೆಗೆದು ನಮಗಾಗಿ ಬಿಲ್ ಮಾಡಿಸಿದರು. ಒತ್ತಾಯ ಮಾಡಿದರೂ ನಮ್ಮಿಂದ ಹಣವನ್ನು ಪಡೆಯಲಿಲ್ಲ. ಅವರು ಮುಗ್ಧ ಮುಖವುಳ್ಳ ಮನುಷ್ಯ ರೂಪದ ದೇವದೂತರಾಗಿದ್ದರು. ಅವರು ಮೌನವಾಗಿರುತ್ತಿದ್ದರು. ಮಸೀದಿಗೆ ನಮಾಝ್ ನಿರ್ವಹಿಸಲು ಬಂದರೆ, ಬಹಳ ಮೌನವಾಗಿ ಬಂದು ದೀರ್ಘವಾಗಿ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು.

ಯು.ಕೆ.ಯ ಜಿಯಾಲೋಜಿಸ್ಟ್ ಆಗಿರುವ ಡಾಕ್ಟರ್ ಮುಝಫ್ಫರ್ ಚೌಧರಿ ಸಾಹಿಬ್ ಸಹ ವಖ್ಫೇ ಆರ್ಝಿಯಾಗಿ ಅಲ್ಲಿಗೆ ಹೋಗುತ್ತಿರುತ್ತಾರೆ. ಅವರು ಹೇಳುತ್ತಾರೆ; ಡಾಕ್ಟರ್ ಸಾಹಿಬ್‌ರು ಮೌನಶೀಲವುಳ್ಳ, ಅತ್ಯಂತ ಕರುಣಾಮಯಿ ಮತ್ತು ಸಹಾನುಭೂತಿಯುಳ್ಳ ವ್ಯಕ್ತಿಯಾಗಿದ್ದರು. ಜನರನ್ನು ಸಹಾಯ ಮಾಡುವ ಉದ್ದೇಶದಿಂದ ಹೊಸ ವಿಷಯಗಳನ್ನು ಕಲಿಯಲು ಅವರಿಗೆ ಬಹಳ ಆಸಕ್ತಿ ಇರುತ್ತಿತ್ತು. ನಾನು ವಖ್ಫೇ ಆರ್ಝಿಗಾಗಿ ಅಲ್ಲಿಗೆ ಹೋದಾಗ, ಅವರ ಆಫೀಸಿಗೂ ಹೋಗುತ್ತಿದ್ದೆ. ಅವರು ನನ್ನನ್ನು ಅವರ ಕುರ್ಸಿಯಲ್ಲಿ ಕುಳ್ಳಿರಿಸಿ, ಸ್ವತಃ ಬೇರೆಡೆ ಕುಳಿತುಕೊಳ್ಳುತ್ತಿದ್ದರು. ಎಷ್ಟು ಹೇಳಿದರೂ ಹಾಗೆಯೇ ಮಾಡುತ್ತಿದ್ದರು.

ರಬ್ವದ ತಹ್ರೀಕ್ ಜದೀದಿನ ವಕೀಲುಲ್ ಮಾಲ್ ಆದ ಲುಖ್‌ಮಾನ್ ಸಾಹಿಬ್‌ರು ಹೇಳುತ್ತಾರೆ: ಅನೇಕ ಸ್ವಭಾವ ವೈಶಿಷ್ಟ್ಯಗಳನ್ನು ಹೊಂದಿದ್ದರು. ಧನತ್ಯಾಗ ಮಾಡಲು ವಿಶೇಷ ಒಲವನ್ನು ಹೊಂದಿದ್ದರು. ಅವರು ಪಾಕಿಸ್ತಾನಕ್ಕೆ ಬಂದ ಮೇಲೆ, ತಹ್ರೀಕ್ ಜದೀದಿನ ಚಂದವನ್ನು ಪ್ರತಿ ವರ್ಷ ಅದರ ಘೋಷಣೆ ಆದ ಕೂಡಲೇ ಸ್ವತಃ ಆಫೀಸಿಗೆ ಬಂದು ಪಾವತಿಸುತ್ತಿದ್ದರು. ಡಾಕ್ಟರ್ ಎಂಬುದು ಅವರ ಕೆಲಸವಾಗಿತ್ತು. ಆದರೆ ಮನುಕುಲದ ಸೇವೆ ಮಾಡುವುದು ಸದಾ ಅವರ ಗುರಿಯಾಗಿತ್ತು ಎಂದು ಗೊತ್ತಾಗುತ್ತಿತ್ತು.

ಅಲೋಪತಿಯಲ್ಲದೇ, ಅವಶ್ಯ ಬಂದರೆ ಹೋಮಿಯೋಪತಿ ಚಿಕಿತ್ಸೆ ಸಹ ನಡೆಸುತ್ತಿದ್ದರು. ಬೇರೆ ಚಿಕಿತ್ಸಾ ಮಾರ್ಗ ಸ್ವೀಕಾರ್ಯವಲ್ಲವೆಂದು ಭಾವಿಸುತ್ತಿರಲಿಲ್ಲ. ಹೌಸಾಕೋರ ಆಸ್ಪತ್ರೆಯ ಈಗಿನ ಮಿಶನರಿ ಇಂಚಾರ್ಜ್ ಡಾಕ್ಟರ್ ಆಗಿರುವ ಡಾಕ್ಟರ್ ನಈಂ ಸಾಹಿಬ್ ಹೇಳುತ್ತಾರೆ: ಇಪ್ಪತ್ತು ವರ್ಷಗಳಿಂದ ಅವರು ಸೇವೆ ಮಾಡುತ್ತಿದ್ದರು. ಇಂದು ಅವರ ನಿಧನದ ವಾರ್ತೆಯನ್ನು ಕೇಳಿ ಇಲ್ಲಿಯ ಮತ್ತು ಬೇರೆ ಪ್ರದೇಶದ ಅನೇಕ ಜನರು ಇಲ್ಲಿಗೆ ಬಂದಿದ್ದರು. ಅವರೆಲ್ಲರಿಗೂ ಡಾಕ್ಟರ್ ಸಾಹಿಬ್‌ರೊಂದಿಗೆ ಸಂಬಂಧವಿತ್ತು. ಅವರೆಲ್ಲರೂ ದುಃಖಿತರಾಗಿದ್ದರು. ವಿಶೇಷವಾಗಿ ಸಂತಾಪ ಸೂಚಿಸುತ್ತಿದ್ದರು. ಡಾಕ್ಟರ್ ಸಾಹಿಬ್‌ರು ಬಹಳ ಸರಳ ಸ್ವಭಾವದ, ಮಿತಭಾಷಿಯಾದ, ತನ್ನ ಕೆಲಸದಲ್ಲಿ ಮಗ್ನರಾಗಿರುವ, ಬಡವರ ಸಹಾಯ ಮಾಡುವ ಮತ್ತು ಅತಿಯಾಗಿ ಅತಿಥಿ ಸತ್ಕಾರ ಮಾಡುವ ವ್ಯಕ್ತಿಯಾಗಿದ್ದರು. ಅದೇ ರೀತಿಯಲ್ಲಿ ಅವರಿಗೆ ಭೌತಿಕ ಅರಿವಿನೊಂದಿಗೆ ಜಮಾಅತಿನ ಪುಸ್ತಕಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್‌ರ ಗ್ರಂಥಗಳನ್ನು ಓದುವ ಬಹಳ ಆಸಕ್ತಿಯಿತ್ತು. ಹೌಸಾಕೋರದ ಅಹ್ಮದಿ ಆಸ್ಪತ್ರೆಯಲ್ಲಿ ನಿಸ್ಸಂಶಯವಾಗಿಯೂ ಡಾಕ್ಟರ್ ಸಾಹಿಬ್‌ರು ಸರ್ಜರಿಯ ಮೈದಾನದಲ್ಲಿ ಅತ್ಯಂತ ಉತ್ತಮ ಸೇವೆ ಮಾಡಿದ್ದರು. ಇದರ ಪರಿಣಾಮವಾಗಿ ಈ ಆಸ್ಪತ್ರೆಗೆ ಚಿಕಿತ್ಸೆಗಾಗಿ ಪಶ್ಚಿಮ ಆಫ್ರಿಕದ ಅನೇಕ ದೇಶಗಳಿಂದಲೂ ರೋಗಿಗಳು ಈಗಲೂ ಬರುತ್ತಾರೆ. ಅವರು ತಮ್ಮ ಗ್ರಾಮೀಣ ಆಫ್ರಿಕನ್ ಭಾಷೆಯಲ್ಲಿ ಮುಜ್ತಬ ಸಾಹಿಬ್‌ರನ್ನು ಕೇಳುತ್ತಾರೆ. ತಾಸೀರ್ ಮುಜ್ತಬ ಎಂದಾಗಿತ್ತು ಡಾಕ್ಟರ್ ಸಾಹಿಬ್‌ರ ಹೆಸರು. ಆದರೆ ಡಾಕ್ಟರ್ ಮುಜ್ತಬ ಎಂಬ ಹೆಸರಿನಿಂದ ಅರಿಯಲ್ಪಡುತ್ತಿದ್ದರು. ಅವರ ತಂದೆ ಕೂಡ ಇಲ್ಲಿ ಇದ್ದರು ಕೆಲವು ಕಾಲ. ಅವರ ಹೆಸರಿನಿಂದಲೇ ಮಗನೂ ಕರೆಯಲ್ಪಟ್ಟರು. ಡಾಕ್ಟರ್ ತಾಸೀರ್ ಮುಜ್ತಬ ಸಾಹಿಬ್‌ರು ಆಸ್ಪತ್ರೆಯ ಕಂಪೌಂಡಿನಲ್ಲಿ ಸುಂದರವಾದ ಒಂದು ಮಸೀದಿಯನ್ನು ಸಹ ನಿರ್ಮಿಸಿರುವರು.

ಹೇಗಿದ್ದರೂ ಡಾಕ್ಟರ್ ಸಾಹಿಬ್‌ರು ಒಬ್ಬ ನಿಸ್ವಾರ್ಥ, ಸೃಷ್ಟಿಗಳ ಸೇವೆ ಮಾಡುವ ವ್ಯಕ್ತಿಯಾಗಿದ್ದರು. ತನ್ನ ನೌಕರಿಯನ್ನು ಅವರು ಇದೇ ಕೆಲಸಕ್ಕಾಗಿ ಉಪಯೋಗಿಸಿದರು. ಅವರ ತಂದೆಯಲ್ಲೂ ಮತ್ತು ಅವರಲ್ಲೂ ವಿಶಿಷ್ಟ ಗುಣಗಳನ್ನು ನಾನು ಸಹ ಕಂಡಿದ್ದೇನೆ. ರೋಗಿಗಳ ಚಿಕಿತ್ಸೆ ನಡೆಸುವುದಲ್ಲದೆ, ಬಡರೋಗಿಗಳಿಗೆ ಉಚಿತವಾಗಿ ಮದ್ದಿನೊಂದಿಗೆ ಆಹಾರಕ್ಕಾಗಿ ಹಣವನು ಕೊಡುತ್ತಿದ್ದರು. ಮಾತ್ರವಲ್ಲ ಮೊಟ್ಟೆಗಳನ್ನು ಮತ್ತು ಹಾಲನ್ನು ಖರೀದಿ ಮಾಡಿಸಿಟ್ಟು ರೋಗಿಗಳಿಗೆ ಕೊಡುತ್ತಿದ್ದರು. ಬಲಹೀನತೆಯನ್ನು ದೂರಮಾಡಲು ಅವುಗಳನ್ನು ಸೇವಿಸಲು ರೋಗಿಗಳೊಡನೆ ಹೇಳುತ್ತಿದ್ದರು. ಆರೋಗ್ಯ ಸರಿಯಾಗಲು ಇವುಗಳನ್ನು ಉಪಯೋಗಿಸಿರಿ ಎಂದು ಹೇಳಿ ರೋಗಿಗಳಿಗೆ ಮದ್ದು ಮತ್ತು ಆಹಾರವನ್ನು ಉಚಿತವಾಗಿ ನೀಡುತ್ತಿದ್ದರು.

ಡಾಕ್ಟರ್ ಗುಲಾಂ ಮುಜ್ತಬ ಸಾಹಿಬ್‌ರು ಸಹ ಘಾನದಲ್ಲಿ ಬಹಳ ಸೇವೆ ಸಲ್ಲಿಸಿದ್ದರು. ಆದರೆ ಡಾಕ್ಟರ್ ತಾಸೀರ್ ಮುಜ್ತಬ ಸಾಹಿಬ್‌ರು ಈ ಸೇವೆಯನ್ನು ಇನ್ನೂ ಹೆಚ್ಚಿಸಿದರು. ನನಗೆ ಪರಿಚಯವಿರುವ ಘಾನದವರು ಸಹ ಅವರ ಬಗ್ಗೆ ಬಹಳ ಹೊಗಳಿ ಹೇಳುತ್ತಿದ್ದರು. ಹೇಗಿದ್ದರೂ ಅವರು ವಖ್ಫಿನ ನೈಜ ಸ್ಫೂರ್ತಿಯಿಂದ ಸೇವೆ ಮಾಡಿದರು. ವಿಶೇಷವಾಗಿ ವಖ್ಫೇ ಝಿಂದಗಿಗಳ ಕೂಡ ಚಿಕಿತ್ಸೆ ನಡೆಸುತ್ತಿದ್ದರು. ತನ್ನ ಮನೆಯಲ್ಲಿ ಅತಿಥಿಯಾಗಿ ಸಹ ಅವರನ್ನು ಇರಿಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಘಾನಗೆ ಹೋದಾಗ, ಅವರ ಮನೆಯಲ್ಲೂ ತಂಗಿದ್ದರು. ಅತಿಥಿ ಸತ್ಕಾರವು ಅವರ ವಿಶೇಷವಾದ ಒಂದು ಗುಣವಾಗಿತ್ತು.

ಹನೀಫ್ ಸಾಹಿಬ್ ಹೇಳುತ್ತಾರೆ: ಅವರೊಬ್ಬ ದೇವದೂತರಾಗಿದ್ದರು. ಖಂಡಿತವಾಗಿಯು ಅವರೊಬ್ಬ ನಡೆದಾಡುವ ಮಲಕ್ ಆಗಿದ್ದರು. ಅಲ್ಲಾಹನು ಅವರ ಮೇಲೆ ಕರುಣೆಯನ್ನು ವರ್ಷಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಈ ಸಂಬಂಧವಾಗಿ ನಾನೊಂದು ಸಂಗತಿಯನ್ನು ಹೇಳುತ್ತೇನೆ. ಮನೆಯ ಸ್ತ್ರೀ ಅತಿಥಿ ಸತ್ಕಾರ ಮಾಡಲು ತಯಾರಿದ್ದರೆ ಮಾತ್ರ ಪುರುಷನಿಗೆ ಅತಿಥಿ ಸತ್ಕಾರ ಮಾಡಲು ಸಾಧ್ಯ. ಡಾಕ್ಟರ್ ಸಾಹಿಬ್‌ರ ಪತ್ನಿ ಸಹ ಬಹಳ ಅತಿಥಿ ಸತ್ಕಾರ ಮಾಡುವ ಮತ್ತು ಸೇವೆ ಮಾಡುವ ಮಹಿಳೆಯಾಗಿರುವರು. ಅವರ ಆಯುಸ್ಸು ಮತ್ತು ಆರೋಗ್ಯಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರಿಗೆ ಆಯುರಾರೋಗ್ಯವನ್ನು ನೀಡಲಿ. ಅವರನ್ನು ಅನುಗ್ರಹಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಅವರು ಕೂಡ ತನ್ನ ತಾಯಿಯ ಸೇವೆಯ ಹಕ್ಕನ್ನು ಈಡೇರಿಸುವವರಾಗಲಿ.

*****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅವರನ್ನು ಗೌಪ್ಯ ರೀತಿಯಲ್ಲಿ (ಕೆಲವು ಹದೀಸುಗಳಿಂದ ತಿಳಿದುಬರುವುದೇನೆಂದರೆ ಅವರು ನಸೀಬೈನ್ ನಿವಾಸಿಗಳಾಗಿದ್ದರು ಎಂದು) ರಾತ್ರಿಯ ವೇಳೆ ರಸೂಲುಲ್ಲಾಹ್(ಸ) ರವರನ್ನು ಭೇಟಿಯಾಗಿದ್ದರು (ಬುಕಾರಿ). ಮರಳಿ ಹೋದ ನಂತರ ಯಾವ ಘಟನೆ ಅವರ ಮತ್ತು ಅವರ ಸಮುದಾಯದ ಮಧ್ಯೆ ಘಟಿಸಿದೆಯೇ, ಅಲ್ಲಾಹನು ಅದರ ವಿವರ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ನೀಡಿರುತ್ತಾನೆ. ಅವರು ಅರಬ್ ಜನರ ವಿರೋಧದ ಕಾರಣ ಗೌಪ್ಯವಾಗಿ ರಸೂಲುಲ್ಲಾಹ್(ಸ) ರವರನ್ನು ಸಂದರ್ಶಿಸಿದರು. ಮತ್ತು ಅವರಿಂದ ಖುರ್‌ಆನ್ ಆಲಿಸಿದರು. ಮರಳಿ ಹೋದ ನಂತರ ಅವರ ಹೃದಯಗಳು, ರಸೂಲುಲ್ಲಾಹ್(ಸ) ರವರ ಸತ್ಯಕ್ಕೆ ಸಾಕ್ಷಿ ನುಡಿದು ತನ್ನ ಸಮುದಾಯದಲ್ಲಿ ಪ್ರಚಾರ ಪ್ರಾರಂಭಿಸಿದರು.

ಇದು ಅವರು ಜಿನ್ನ್ ಮನುಷ್ಯರೇ ಆಗಿದ್ದರು ಎಂಬುದಕ್ಕೆ ಸಾಕ್ಷ್ಯವಾಗಿ ಕೆಳಗೆ ನಮೂದಿತವಾಗಿದೆ. ಪ್ರಥಮವಾಗಿ ಅವರು ಗೌಪ್ಯವಾಗಿ ಭೇಟಿ ಮಾಡಿದರು. ಅವರು ಜಿನ್ನ್ ಆಗಿದ್ದರೆ ರಾತ್ರಿಯ ವೇಳೆ ಭೇಟಿಯಾಗುವ ಕಾರಣವೇನಿತ್ತು? ಬಹಿರಂಗವಾಗಿ ಭೇಟಿಯಾಗುತ್ತಿದ್ದರೆ ಅವರನ್ನು ಯಾರಿಗಾಗದರು ಏನು ಮಾಡಲು ಸಾಧ್ಯವಿತ್ತು? ಜಿನ್ನುಗಳ ಬಗ್ಗೆ ಹೇಳಲಾಗುತ್ತದೆ. ಅವರನ್ನು ಯಾರು ನೋಡಲು ಸಾಧ್ಯವಿಲ್ಲ ಎಂದು.

ಎರಡನೆಯದಾಗಿ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ನುಡಿದನು. **"ಲಿತುಮಿನೂ ಬಿಲ್ಲಾಹಿ ವ ರಸೂಲಿಹ ವ ತುಅಝ್ಝಿರೂಹು ವ ತುವಖ್ಖಿರೂಹು"** (ಫತಹ) "ನೀವು ಅಲ್ಲಾಹನನ್ನು ಮತ್ತು ಅವನ ಸಂದೇಶವಾಹಕರನ್ನು ನಂಬಲಿಕ್ಕಾಗಿ ಹಾಗೂ ಆತನಿಗೆ ನೆರವಾಗಲಿಕ್ಕಾಗಿ ಮತ್ತು ಆತನನ್ನು ಗೌರವಿಸಲಿಕ್ಕಾಗಿ ಕಳುಹಿಸಿರುತ್ತೇನೆ. ಜಿನ್ನುಗಳು ವಿಶ್ವಾಸ ತಂದಿದ್ದರೆಂದರೆ ಅವರು ಯಾವ ರೀತಿ ರಸೂಲುಲ್ಲಾಹ್(ಸ) ರವರಿಗೆ ನೆರವಾಗುತ್ತಿದ್ದರು. ಜಿನ್ನುಗಳು ಯಾವ ಜನರ ಶರೀರದಲ್ಲಿ ಸೇರಿಕೊಳ್ಳುತ್ತಾರೋ ಅವರಿಗೆ ಹಲವು ತರಹದ ಫಲಗಳನ್ನು ತಂದುಕೊಡುತ್ತಾರೆ ಎಂದು ಹೇಳಲಾಗುತ್ತದೆ. ಆದರೆ ಅವರು ಯಾವ ರೀತಿಯ ಸತ್ಯವಿಶ್ವಾಸಿಯಾಗಿದ್ದರು. ಮುಹಮ್ಮದ್ ರಸೂಲುಲ್ಲಹ್(ಸ) ರವರ ಮೇಲೆ ಹಿಂಸೆ ಮಾಡಲಾಯಿತು, ಹಝ್ರತ್ ಸುಲೈಮಾನರಿಗೆ ಅವಿಶ್ವಾಸಿ ಜಿನ್ನುಗಳು ಕೋಟೆಗಳನ್ನು ನಿರ್ಮಿಸಿಕೊಟ್ಟರು ಮತ್ತು ಕೀಳು, ಅತಿ ಕೀಳು ಕೆಲಸವುಗಳು ಸಹ ಅವರಿಗಾಗಿ ಮಾಡಿದರು. ಈ ಸತ್ಯವಿಶ್ವಾಸಿಗಳು ಎಂತಹ ಕಣ್ಣುತಪ್ಪಿಸಿಕೊಳ್ಳುವವರಾಗಿದ್ದರು. ಅಬೂಬಕರ್ ಮುಂತಾದವರಲ್ಲಿ ಯಾರಿಗೂ ಸಹ ಅವರು ಶಿಕ್ಷೆ ನೀಡಲಿಲ್ಲ, ಮತ್ತೆ ಜಿನ್ನುಗಳ ಬಗ್ಗೆ ಖುತುವಿಲ್ಲದಿದ್ದರೂ ಫಲಗಳನ್ನು ತಂದು ಕೊಡುತ್ತಾರೆ ಎಂಬ ಭಾವನೆಯಿದೆ. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದರೂ ಖಂದಕ್ ಯುದ್ಧ ಸಮಯದಲ್ಲಿ ಅವರು ಮತ್ತು ಇತರ ಮುಸಲ್ಮಾನರು ಹಸಿವಿನಿಂದ ಬಳಲುತ್ತಿದ್ದರು. ಅವರುಗಳು ತಮ್ಮ ಹೊಟ್ಟೆಗಳ ಮೇಲೆ ಕಲ್ಲುಗಳನ್ನು ಕಟ್ಟಿಕೊಂಡು ತಿರುಗಾಡುತ್ತಿದ್ದರು. ಏತಕ್ಕಾಗಿ ಆ ಜಿನ್ನುಗಳು ಅವರಿಗಾಗಿ ಮತ್ತು ಸಹಾಬರಿಗಾಗಿ ರೊಟ್ಟಿಗಳನ್ನು ತಂದುಕೊಡಲಿಲ್ಲ. ಇದು ವಿಶ್ವಾಸ ಅಲ್ಲ. ಬದಲು ಪ್ರಥಮ ದರ್ಜೆಯ ವಿದ್ರೋಹದ ಸಂಕೇತವಾಗಿದೆ. ಆದರೆ ಪವಿತ್ರ ಖುರ್‌ಆನ್ ತಿಳಿಸುತ್ತದೆ. ಅವರು (ಜಿನ್ನುಗಳು) ನಿಷ್ಠಾವಂತ ಸತ್ಯವಿಶ್ವಾಸಿಯಾಗಿದ್ದರು ಎಂದು.

ಅಂದಹಾಗೆ ಸ್ಪಷ್ಟವಿದೆ. ಸೂರ: ಜಿನ್ನ್‌ನಲ್ಲಿ ಜಿನ್ನುಗಳ ಬಗ್ಗೆ ವಿವರವಿದ್ದು, ಅವರು ಯಾರೊಬ್ಬರ ಶರೀರದಲ್ಲಿ ಸೇರಿಕೊಂಡು ಅವರ ಮೇಲೆ ಹತೋಟಿ ಸಾಧಿಸಿದ್ದಾಗಿರಲಿಲ್ಲ ಅಥವಾ ಅವರಿಗೆ ಏನೇನೂ ತಂದು ಕೊಡುವ ಶಕ್ತಿಯಿರಲಿಲ್ಲ. ಇಂತಹ ಜಿನ್ನುಗಳು ಕೇವಲ ಮನುಷ್ಯ ಸೃಷ್ಟಿಯಾಗಿದೆ. ಪವಿತ್ರ ಖುರ್‌ಆನ್ ಇಂತಹ ಜಿನ್ನುಗಳನ್ನು ಒಪ್ಪುವುದಿಲ್ಲ. ಖುರ್‌ಆನ್ ಪ್ರಸ್ತುತಪಡಿಸಿದಂತಹ ಜಿನ್ನುಗಳು ನಾನು ವಿವರಿಸಿದಂತೆಯೇ ಇವೆ. ಆ ಜಿನ್ನುಗಳು ರಸೂಲುಲ್ಲಾಹ್(ಸ) ರವರ ಮೇಲೆ ವಿಶ್ವಾಸ ತಂದವರಾಗಿದ್ದರು. ಅವರು ಯಹೂದಿಗಳಾಗಿದ್ದರು. ಅವರು ಖುರ್‌ಆನ್ ಆಲಿಸಿದರು ಮತ್ತು ತಮ್ಮ ಮನೆಗಳಿಗೆ ಹೊರಟುಹೋದರು. ಅಂತಿಮವಾಗಿ ವಿಶ್ವಾಸ ಹೊಂದುವ ನಿರ್ಣಯ ಕೈಗೊಂಡರು. ಮತ್ತು ತಮ್ಮ ಸಮುದಾಯಕ್ಕೆ ಸಂದೇಶ ತಲುಪಿಸಿದರು. ಅವರು ಅರಬ್ ದೇಶದಿಂದ ಸಾವಿರಾರು ಮೈಲು ದೂರದ ನಿವಾಸಿಗಳಾಗಿದ್ದರು. ನಂತರ ಅವರಿಗೆ ರಸೂಲುಲ್ಲಾಹ್(ಸ) ರವರ ಬಗ್ಗೆ ಸುದ್ದಿ ತಲುಪಿದೆಯೋ ಇಲ್ಲವೋ ಹೇಳಲಿಕ್ಕಾಗದು, ಆದುದರಿಂದಲೇ ಅವರಿಗೆ ಯುದ್ಧಗಳಲ್ಲಿ ಭಾಗವಹಿಸಲು ಆಗಲಿಲ್ಲ.

ಮೂರನೆಯ ಸಾಕ್ಷ್ಯ ಆ ಜಿನ್ನುಗಳು ಮನುಷ್ಯರೇ ಆಗಿದ್ದರು ಎಂಬುದಕ್ಕೆ ಅಲ್ಲಾಹನು ತನ್ನ ಸಂದೇಶವಾಹಕರ ಬಗ್ಗೆ ಹೇಳುತ್ತಾನೆ ಅವರು **ಮಿನ್ ಅನ್‌ಫುಸಿ ಹಿಮ್** ಮತ್ತು **ಮಿನ್‌ಹುಮ್** ಆಗಿರುತ್ತಾರೆ. ಅಂದರೆ ಯಾರಲ್ಲಿ ಅವತರಿಸುತ್ತಾರೆ. ಅವರು ಅದೇ ಸಮುದಾಯದವರಾಗಿರುತ್ತಾರೆ. ಅಂದಹಾಗೆ ಹೇಳಿದನು: **"ವ ಯೌಮ ನಬ್‌ಅಸು ಫೀ ಕುಲ್ಲಿ ಉಮ್ಮತಿನ್ ಶಹೀದನ್ ಅಲೈಹಿಮ್ ಮಿನ್ ಅನ್‌ಫುಸಿಹಿಮ್ ವ ಜಿನಾ ಬಿಕ ಶಹೀದನ್ ಅಲಾ ಹಾಉಲಾಇ"** (ಅನ್ನಹಲ್ –12/18) ಆ ದಿನದಂದು ಪ್ರತಿಯೊಂದು ಸಮುದಾಯದಲ್ಲೂ ನಾವು ಅವರಿಗೆ ವಿರುದ್ಧವಾಗಿ ಅವರಿಂದಲೇ ಸಾಕ್ಷಿಯವನ್ನು ನಿಲ್ಲಿಸುವೆವು. ಹಾಗೂ (ಅದೇ ಪ್ರಾರ) ಈ ಜನರ ವಿರುದ್ಧವಾಗಿ ನಿನ್ನನ್ನು ಒಬ್ಬ ಸಾಕ್ಷಿಯಾಗಿ ತರುವೆವು.

ಅಂದರೆ ಪ್ರತಿಯೊಂದು ಸಮುದಾಯದಲ್ಲೂ ಅವರಿಂದಲೇ ಸಂದೇಶವಾಹಕರನ್ನು ಸಾಕ್ಷಿಯಾಗಿ ನಿಲ್ಲಿಸಲಾಗುವುದು. ಮುಹಮ್ಮದ್ ರಸೂಲುಲ್ಲಾಹ್(ಸ) ರವರನ್ನು ಅವರ ಸಮುದಾಯ ಮತ್ತು ಆ ಕಾಲಘಟ್ಟದ ಜನರಿಗಾಗಿ ಸಾಕ್ಷಿಯಾಗಿ ಕಳುಹಿಸಲಾಗುವುದು. ಜಿನ್ನ್ ಸಹ ಒಂದು ಸಮುದಾಯವಾಗಿದೆ. ಅವರು ವಿಶ್ವಾಸ ತಂದರೆ ಅವರಿಗಾಗಿ ಯಾರು ಸಾಕ್ಷಿ ನೀಡುವರು. ಮುಸಾ(ಅ) ರಂತೂ ಜಿನ್ನ್ ಆಗಿರಲಿಲ್ಲ. ಆ ಜಿನ್ನಗಳ ಬಗ್ಗೆ ವಿಶ್ವಾಸ ತಂದುದಕ್ಕೆ ಹೇಗೆ ಸಾಕ್ಷಿ ನೀಡಲು ಸಾಧ್ಯ? ಅದೇ ರೀತಿ ರಸೂಲುಲ್ಲಾಹ್(ಸ) ಮನುಷ್ಯರಾಗಿದ್ದರು. ಅವರು ಜಿನ್ನುಗಳೊಂದಿಗೆ ಮಿನ್ ಅಲ್‌ಫುಸಿಹಿಮ್‌ಗೆ ಸಂಬಂಧಿಸದವರಾಗುವುದಿಲ್ಲ. ಆದುದರಿಂದ ಅವರು ಜಿನ್ನುಗಳಿಗೆ ಸಾಕ್ಷಿಯಾಗಲು ಸಾಧ್ಯವಿಲ್ಲ. ಮಿನ್ ಅಲ್‌ಫುಸಿಹಿಮ್‌ನ ತಾತ್ಪರ್ಯ ಎಂದರೆ ಮೊದಲ ಪ್ರವಾದಿಗಳಿಗೆ ಸಂಬಂಧಿಸಿದ ಅವರ ಸಮುದಾಯಗಳಾಗಿವೆ ಮತ್ತು ರಸೂಲುಲ್ಲಾಹ್(ಸ) ರವರ ಸಂಬಂಧವಾಗಿ ಅವರ ಕಾಲದ ಜನರಾಗಿದ್ದಾರೆ. ಅಂದಹಾಗೆ ಜಿನ್ನುಗುಳ ಮನುಷ್ಯರ ರೀತಿ ಬೇರೆಯೇ ಪ್ರಾಕೃತಿಕ ಸೃಷ್ಟಿಯಾಗಿದ್ದರೆ ಅವರು ಲೆಕ್ಕಕ್ಕೆ ಇರುವುದಿಲ್ಲ. ಅವರಿಗೆ ಪುಣ್ಯವೂ ಸಿಗುವುದಿಲ್ಲ, ಶಿಕ್ಷೆಯೂ ಸಿಗುವುದಿಲ್ಲ.

ನಾಲ್ಕನೆಯ ಸಾಕ್ಷ್ಯವು ಈ ವಾದಕ್ಕೆ ಪುಷ್ಟಿ ನೀಡುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ ಹೀಗದೆ: "ಯಾ ಮಸಶರಲ್‌ಜಿನ್ನಿ (ಅಲ್‌ಆಮ್ 16/3 )" ಎಲೈ ಜಿನ್ನ್ ಮತ್ತು ಇನ್ಸ್ ಸಮೂಹವೇ, ನನ್ನ ದೃಷ್ಟಾಂತಗಳನ್ನು ನಿಮಗೆ ವಿವರಿಸಿಕೊಡುವ ಮತ್ತು ನೀವು ಭೇಟಿಯಾಗಲಿರುವ ಈ ದಿನದ ಬಗ್ಗೆ ನಿಮಗೆ ಮುನ್ನೆಚ್ಚರಿಕೆಯನ್ನೀಯುವ ನಿಮ್ಮ ಪೈಕಿಯ ಸಂದೇಶವಾಹಕರು ನಿಮ್ಮ ಬಳಿಗೆ ಬಂದಿರಲಿಲ್ಲವೇ?

ಈ ಮಾರ್ಗದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಜಿನ್ನ್‌ರ ಬಳಿಗೆ ಅವರ ಸಮುದಾಯದ ಸಂದೇಶವಾಹಕರು ಬಂದರು ಮತ್ತು ಮನುಷ್ಯರ ಬಳಿಗೆ ಮನುಷ್ಯರು ಸಂದೇಶವಾಹಕರಾಗಿ ಬಂದರು. ಇದೀಗ ಜಿನ್ನುಗಳೆಂಬುದು ಬೇರೆಯೇ ಸೃಷ್ಟಿಯಾಗುತ್ತಿದ್ದರೆ ಈ ವಚನದನ್ವಯ ಮೂಸರವರವರಿಗೆ ಸಂದೇಶವಾಹಕರಾಗಲು ಸಾಧ್ಯವಿರಲಿಲ್ಲ ಮತ್ತು ನಬಿ ಕರೀಂ(ಸ) ರವರು ಸಹ. ಏಕೆಂದರೆ ಜಿನ್ನುಗಳ ಬಳಿ ಈ ವಚನದನ್ವಯು ಜಿನ್ನುಗಳೇ ಸಂದೇಶವಾಹಕರಾಗಿ ಬಂದಿದ್ದರು. ಹೌದು ಜಿನ್ನುಗಳೆಂಬುದು ಮನುಷ್ಯರದ್ದೇ ಇನ್ನೊಂದು ಸಮೂಹ ಎಂದಾದರೆ ನಿಸ್ಸಂಶಯವಾಗಿ ಅವರು ಮೂಸಾ(ಅ) ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಸತ್ಯವಿಶ್ವಾಸಿಯಾಗಿರಲು ಸಾಧ್ಯವಿದೆ.

ಐದನೆಯ ಸಾಕ್ಷ್ಯ ಈ ಕುರಿತು ಜನಸಾಮಾನ್ಯರಲ್ಲಿ ಜಿನ್ನುಗಳ ಬಗ್ಗೆ ಯಾವ ಧಾರಣೆ ಇದೆಯೋ ಅದರ ಯಾವುದೆ ಅಸ್ತಿತ್ವವಿಲ್ಲ. ರಸೂಲುಲ್ಲಾಹ್(ಸ) ರವರ ಮೇಲೆ ಯಾವ ಜಿನ್ನಗಳು ವಿಶ್ವಾಸ ತಂದಿದ್ದರೋ ಅವರು ಮನುಷ್ಯರೇ ಆಗಿದ್ದರು. ಅಲ್ಲಾಹನು ನಗರಕದ ಬಗ್ಗೆ ಹೀಗೆ ನುಡಿಯುತ್ತಾನೆ. ಫತ್ತಖುನಾ ರಲ್ಲತೀ . . . (ಅಲ್–ಬಖರ 36 ) ನರಕದಲ್ಲಿ ಒಂದು ಮನುಷ್ಯರಿಹರು ಅಥವಾ ಕಲ್ಲಗಳು ಇತ್ಯಾದಿ, ಅವೇ ಬೆಂಕಿಯ ಇಂಧನಗಳಾಗುವರು. ಜಿನ್ನುಗಳು ಒಂದು ಪ್ರತ್ಯೇಕ ಸೃಷ್ಟಿಯಾಗುತ್ತಿದ್ದರೆ ಹೀಗೆ ಆಗಬೇಕಿತ್ತು. "ಏಬೂದುಹನ್ನಾಸು ವಲ್ ಜಿನ್ನ್ ವಲ್ ಹಿಂಜಾರತು." ಅಂದ ಹಾಗೆ ಪವಿತ್ರ ಖುರ್‌ಆನ್ ಯಾವ ಸಮುದಾಯಗಳನ್ನು ನರಕವಾಗು ಎಂದಿದೆ. ಅಲ್ಲಿಯೂ ಸಹ ಮನುಷ್ಯ ಜಿನ್ನ್ ಎಂದೇ ಪರಿಗಣಿಸಲಾಗಿದೆ ಹಿಝಾರತು ಬೇರೆ ಸೃಷ್ಟಿ ಎಂದಲ್ಲ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–66, ಮುದ್ರಣ ಖಾದಿಯಾನ್ 2010)**

---

*(ಪುಟ ಸಂಖ್ಯೆ* **02**ರ *ಉಳಿದ ಭಾಗ)*

ಸಂದರ್ಭದ ವಿವರವಿದೆ ಅವರು ಹಸಿವಿಇಂದ ಬಳಲುತ್ತ ಒಂದು ಅಂಜೀರಿನ ವೃಕ್ಷದ ಬಳಿ ಬಂದರು ಆದರೆ ಅದು ಅಂಜೀರಿನ ಫಲಗಳಿಮದ ಖಾಲಿಯಿತ್ತು. ಆದುದರಿಂದ ಅದರಿಂದ ವಂಚಿತರಾದರು. ಆದರೆ ತನಗಾಗಿ ಒಮದೆರಡು ಅಂಜಿರ್ ಸಹ ಉತ್ಪಾದಿಸಿಕೊಳ್ಳಲು ಆಗಲಿಲ್ಲ. ಹೀಗೆ ದೀರ್ಘ ಅವಧಿಯವರೆಗೆ ಇಂತಿಂತಹ ಅಶ್ಲೀಲತೆಯಿಂದ ಪಾರಾಗಿ, ದುಖಗಳನ್ನು ಎದುರಿಸಿ ಕೊನೆಗೆ ಕ್ರೈಸ್ತರ ಹೇಳಿಕೆಯಂತೆ ಸತ್ತು ಹೋದರು. ಈ ಲೋಕವನ್ನು ತ್ಯಜಿಸಿದರು. ಈಗ ನಾವು ಕೇಳುತ್ತೇವೆ, ಸರ್ವ ಸಾಮರ್ಥ್ಯ ದೇವನು ಇಂತಹ ದುರ್ಬಲ ಗುಣ ಹೊಮದಿರುತ್ತಾನೆಯೇ? ಪ್ರತಾಪವಂತನಾದ, ಪರಿಶುದ್ಧವಾದ ದೇವನು ಇಂತಹ ಅಪವಾದಗಳಿಂದ ಮತ್ತು ನಷ್ಟಗಳಿಂದ ತುಂಬಿರುವನಾಗಿದ್ದಾನೆಯೇ? (ಬರಾಹೀನೆ ಅಹ್ಮದಿಯಾ, ಭಾಗ–4, ರೂಹಾನಿ ಖಝಾಈನ್ ಸಂಪುಟ–1, ಪುಟ–441)

**ಒಂದು ಮಗು ದೇವನ ಪುತ್ರನಾದ, ಹಾಗೂ ದೇವನಾದನು. ಉಳಿದ ನಾಲ್ವರನ್ನು ದೇವತ್ವದಿಂದ ಏನೂ ನಂಬಿಸಲಿಲ್ಲ.**

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಒಂದೇ ಮಾತಿನಿಂದ ಅಂದರೆ ಮರಿಯಮನ ಉದರದಿಂದ ಐದು ಮಕ್ಕಳು ಜನನ ಹೊಂದಿದರು. ಅದರಲ್ಲಿ ಕೇವಲ ಒಂದು ಮಗು ದೇವನ ಪುತ್ರನಾದನು ಅಲ್ಲದೇ ದೇವನಾದನು. ಉಳಿದ ನಾಲ್ವರಿಗೆ ದೇವತ್ವದಿಂದ ಏನೂ ಲಭಿಸಲಿಲ್ಲ. ಇದು ಹೇಗೆ ಸಾಧ್ಯ! ಆಗಬೇಕಾಗಿದ್ದೇನೆಂದರೆ ಸ್ತ್ರೀಯ ಹೊಟ್ಟೆಯಿಂದ ದೇವನು ಹುಟ್ಟಿದರೆ ಆ ಹೊಟ್ಟೆಯಿಮದ ಇನ್ಯಾರು ಹುಟ್ಟಬಾರದಿತ್ತು. ಇಲ್ಲವೆ ಆ ಹೊಟ್ಟೆಯಿಂದ ಹುಟ್ಟಿದ ಎಲ್ಲ ಮಕ್ಕಳು ದೇವರಾಗಬೇಕಿತ್ತು!! ಅದರಿಂದ ಎಲ್ಲಾ ಸೃಷ್ಟಿ ಸಮಾನರಾಗುತ್ತಿದ್ದವು. ಹಾಗೆ ಹಝ್ರತ್ ಮಸೀಹರ ಸಹೋದರ ಮತ್ತು ಸಹೋದರಿಯರು ಸಹ ದೇವತ್ವದಿಂದ ಸ್ವಲ್ಪ ಮಟ್ಟಿಗಾದರು. ಪಾಲು ಕೊಡುತ್ತಿದ್ದರು ಈ ಐವರ ತಾಯಿ ಆದವರು ದೇವರಲ್ಲದೆ ದೇವರ ಪರಿಪಾಲಕ ಎನಿಸಿಕೊಳ್ಳುತ್ತಿದ್ದರು. (ಬರಾಹೀನ್ ಅಹ್ಮದಿಯಾ ಭಾಗ–4, ರೂಹಾನಿ ಖಝಾಈನ್, ಸಂಪುಟ–1, ಪುಟ–442, ಅಡಿಟಿಪ್ಪಣಿ 11)

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಬುದ್ಧರ ಬಗ್ಗೆ ಒಂದು ವಿಶ್ವಾಸವಿದೆ. ಅವನು ಬಾಯಿಯ ಮಾರ್ಗದಿಂದ ಹುಟ್ಟಿದನು. ಆದರೆ ಅಕಟಾಕಟ! ಕ್ರೈಸ್ತರು ಏನೆಲ್ಲ ಪಿತೂರಿ ನಡೆಸಿದರು. ಆದರೆ ಮಸೀಹನು ಸಹ ಬಾಯಿಯ ಮಾರ್ಗದಿಂದ ಹುಟ್ಟಿದನು ಎಂದು ಹೇಳಿ ತನ್ನ ದೇವನನ್ನು ಮೂತ್ರ ಮಾರ್ಗದಿಂದ ಹುಟ್ಟಿದ್ದ ಅಶ್ಲೀಲತೆಯಿಂದ ರಕ್ಷಿಸಿಕೊಳ್ಳಬಹುದಾಗಿತ್ತು. (ಬರಾಹೀನೆ ಅಹ್ಮದಿಯಾ, ಭಾಗ–4 ರೂಹಾನಿ ಖಝಾಈನ್, ಸಂಪುಟ–1, ಪುಟ–443, ಅಡಿಟಿಪ್ಪಣಿ ಸಂಖ್ಯೆ–11)

**ಮಸೀಹನ ಯಾವುದಾದರೂ ವಿಶಿಷ್ಟ ದೃಷ್ಟಾಂತ ತೋರಿಸಿದರೆ ನಾವು ಮಸೀಹನ ದೇವತ್ವವನ್ನು ಸ್ವೀಕರಿಸಲು ಸಿದ್ಧರಿದ್ದೇವೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಈ ಭೂಲೋಕದಲ್ಲಿ ಯಾರಾದರೂ ಮಸೀಹನ ಯಾವುದೇ ಒಂದು ವಿಶಿಷ್ಠ ದೃಷ್ಟಾಂತ ನಮಗೆ ತೋರಿಸಬಹುದಾದರೆ ನಾವು ಅವರ ಸ್ವರ ಕೇಳುವಂತೆ ಆಗುವಂತಾಗಬೇಕು. ಮತ್ತು ಅವರ ದೇವತ್ವದ ದೃಷ್ಟಾಂತಗಳನ್ನು ಕಾಣುವಂತಾಗಬೇಕು. ಏಕೆಂದರೆ ನಾವು ಎಷ್ಟೋ ಸಲ ಬರೆದದ್ದಾಗಿದೆ ಆ ನಿಜವಾದ ದೇವರ ಮೇಲೆ ಸಹ ಸಂಶಯದಿಂದ ವಿಶ್ವಾಸ ತರಲು ಸಾಧ್ಯವಿಲ್ಲ. ಅಂತಹ ವಿಶ್ವಾಸ ಪಾಪಗಳಿಂದ ಮುಕ್ತಿ ನೀಡಲು ಸಾಧ್ಯವಿಲ್ಲ. ಹೀಗಿರುವಾಗ ಕಪೋಲ ಕಲ್ಪಿತ ದೇವನನ್ನು "ಅವನು ಯಹೂದಿಯರ ಕೈಯಿಂದ ಹೊಡೆಯಿಸಿ ತಿಂದನು. ಅವನ ಮೇಲೆ ಸಂಶಯವಾಗಿಯೇ ಸರಿ ದೇವತ್ವವನ್ನು ನಂಬಿದರೆ ಮುಕ್ತಿ ದೊರೆಯುಬಹುದೇ.

ಮನುಷ್ಯನೊಬ್ಬನನ್ನು ದೇವನನ್ನಾಗಿ ಮಾಡುವುದು ಮತ್ತು ಅವನ ದೇವತ್ವದ ಬಗ್ಗೆ ಯಾವುದೇ ದೃಢವಾದ ಪುರಾವೆಗಳನ್ನು ಒದಗಿಸದಿರುವುದು ನಾಚಿಕೆಗೇಡುತನವಾಗಿದೆ. ವಾಸ್ತವದಲ್ಲಿ ಇಂತಹ ಜನರು ಸತ್ಯದ ಶತ್ರುಗಳಾಗಿದ್ದಾರೆ. ಆ ಜನರಿಗೆ ಈ ನಾಚಿಕೆಗೇಡು ಕಾರ್ಯವನ್ನು ಎಸಗಲು ಏಕಾದರೂ ಅವಶ್ಯಕತೆ ಬಿತ್ತು ನನಗೆ ತಿಳಿಯದು. ಆ ನಿಜವಾದ ದೇವರನ್ನು ನಂಬಲಿಕ್ಕೆ ಏನು ಕಷ್ಟವಿತ್ತು. ಏಕೆ ಈ ಕಪೋಲಕಲ್ಪಿತ ದೇವರನ್ನು ಸರಷ್ಟಿಸಲಾಯಿತು. (ಇಸ್ಮತೆಯೆ ಅಂಬಿಯಾ, ರೂಹಾನಿ ಖಝಾಈನ್, ಸಂಪುಟ–18, ಪುಟ–689)

**ಮಸೀಹನ ದೇವನೊಂದಿಗೆ ಯಾವ ರೀತಿಯ ವಿಶೇಷ ಸಮಬಂಧವಿತ್ತು. ಯಾರಾದರೂ ಹೇಳಬಹುದು.**

ಹಝ್ರತ್ ಮಸೀಹ್ ಮೌಊದ್(ಅ) ನುಡಿದರು.

ನಾವು ದೃಢವಾಗಿ ನಂಬುತ್ತೇವೆ. ಲೋಕದಲ್ಲಿ ಎಷ್ಟೆಲ್ಲ ಸುಳ್ಳು

*(ಪುಟ 12ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

Postal Reg. No: 3000039689/2020-22 Vol No.02, Thursday, 02 December 2021, Issue No. 48

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 47ರ ವರದಿಯ ಉಳಿದ ಭಾಗ)**

ಅನಂತರ ಹುಝೂರ್ ಅನ್ವರ್ ಈ ಕೆಳಗಿನ ನಿಕಾಹಗಳ ಘೋಷಣೆ ಮಾಡಿದರು.

1) ಅಝೀಝು ಶಾಹಿದಃ ಮಗ್‌ಫೂರ್ ಬಿನ್ತ್ ಮಾನ್ಯ ಮಗ್‌ಫೂರ್ ಅಹ್ಮದ್ ಸಾಹಿಬ್‌ರವರ ನಿಕಾಹ್ ಅಝೀಝುಮ್ ಸಫೀರುರ್ರ‍ಹ್ಮಾನ್ ನಾಸಿರ್(ಮುಬಲ್ಲಿಗ್ ಸಿಲ್‌ಸಿಲ) ಇಬ್ನ್ ಮಾನ್ಯ ಅಬ್ದುರ್ರ‍ಹ್ಮಾನ್ ನಾಸಿರ್ ಸಾಹಿಬ್ ಅವರೊಂದಿಗೆ ನಿಶ್ಚಯವಾಯಿತು.

2) ಅಝೀಝು ವಜೀಹ ಅನ್ವರ್(ವಾಖಿಫೆ ನೌ) ಬಿನ್ತ್ ಮಾನ್ಯ ರಫೀಖುರ್ರ‍ಹ್ಮಾನ್ ಅನ್ವರ್ ಸಾಹಿಬ್ ಅವರ ನಿಕಾಹ್ ಅಝೀಝುಮ್ ಆಸಿಮ್ ಬಿಲಾಲ್ ಆರಿಫ್(ವಖ್ಫೆ ನೌ) ಇಬ್ನೆ ಮಾನ್ಯ ನಸೀರ್ ಅಹ್ಮದ್ ಆರಿಫ್ ಸಾಹಿಬ್ ಅವರೊಂದಿಗೆ ನಿಶ್ಚಯವಾಯಿತು.

3) ಅಝೀಝು ನೂರೈನ್ ಫಾರೂಖ್ ಬಿನ್ತ್ ಮಾನ್ಯ ಆಸಿಫ್ ಫಾರೂಖ್ ಸಾಹಿಬ್ ಅವರ ನಿಕಾಹ್ ಮಾನ್ಯ ನುಮಾನ್ ಖಾಲಿದ್ ಸಆಹಿಬ್ ಇಬ್ನ್ ಖಾಲಿದ್ ಮಹ್ಮೂದ್ ಸಾಹಿಬ್ ಅವರೊಂದಿಗೆ ನಿಶ್ಚಯವಾಯಿತು.

4 ಅಝೀಝು ಸೌಬಾನ ನೀಮ್ ಬಿನ್ತ್ ಮಾನ್ಯ ನೀಮ್ ಅಹ್ಮದ್ ಬಾಜ್ವ ಸಾಹಿಬ್ ಅವರ ನಿಕಾಹ್ಗ ಅಝೀಝುಮ್ ಹಸೀಬ್ ಅಹ್ಮದ್ ಇಬ್ನ್ ಮಾನ್ಯ ಮುಬಾರಕ್ ಅಹ್ಮದ್ ಫಮುನ್ ಸಾಹಿಬ್ ಅವರೊಂದಿಗೆ ನಿಶ್ಚಯವಾಯಿತು.

5) ಅಝೀಝು ಅಮತುಲ್ ಹಾದಿ ಆಲಿಯ ನೂರ್ ಹಬ್ಶ್ ಬಿನ್ತ್ ಮಾನ್ಯ ಹಿದಾಯತುಲ್ಲಾಹ್ ಹಬ್ಶ್ ಸಾಹಿಬ್ ಅವರ ನಿಕಾಹ್ ಅಝೀಝುಮ್ ತಾಹಿರ್ ಅಹ್ಮದ್ ಚೌಧರಿ ಇಬ್ನ್ ಮಾನ್ಯ ನೂರುದ್ದೀನ್ ಚೌಧರಿ ಸಾಹಿಬ್ ಅವರೊಂದಿಗೆ ನಿಶ್ಚಯವಾಯಿತು.

6) ಅಝೀಝುಮ್ ದುರ್ರೆ ಅಜಮ್ ಲೋನ್ ಬಿನ್ತ್ ಮಾನ್ಯ ಸೀದ್ ಅಹ್ಮದ್ ಲೋನ್ ಸಾಹಿಬ್ ಅವರ ನಿಕಾಹ್ ಅಝೀಜಮ್ ಮುಹಮ್ಮದ್ ಝುರ್‌ತುಶ್ತ್ ಹಬ್ಶ್ ಇಬ್ನ್ ಹಿದಾಯತುಲ್ಲಾಹ್ ಹಬ್ಶ್ ಸಹಿಬ್ ಅವರೊಂದಿಗೆ ನಿಶ್ಚಯವಾಯಿತು.

7) ಅಝೀಝು ಸಾಯಿಮ ಅನ್‌ಅಮ್ ಬಾಜ್ವ ಬಿನ್ತ್ ಮಾನ್ಯ ತಾಹಿರ್ ಅಹ್ಮದ್ ಬಾಜ್ವ ಸಹಿಬ್ ಅವರ ನಿಕಾಹ್ ಅಝೀಝುಮ್ ಮುಹಮ್ಮದ್ ಅತ್‌ಹರ್ ಕಾಹ್ಲೋನ್ ಸಾಹಿಬ್ ಇಬ್ನ್ ಮಾನ್ಯ ಮುಹಮ್ಮದ್ ಅಸ್‌ಗರ್ ಕಾಹ್ಲೋನ್ ಸಾಹಿಬ್ ಅವರೊಂದಿಗೆ ನೊಇಶ್ಚಯವಾಯಿತು.

ಈ ನಿಕಾಹಗಳ ಘೋಷಣೆಯ ನಂತರ ಹುಝೂರ್[ಅತಬಿಅ] ದುಆ ಮಾಡಿಸಿದರು. ನಂತರ ಉಭಯೇತ್ರರಿಗೆ ಹಸ್ತಲಾಘವ ಮಾಡಿದರು.

ಅನಂತರ ಹುಝೂರ್[ಅತಬಿಅ] ತಮ್ಮ ವಸತಿನಿಲಯಕ್ಕೆ ತೆರಳಿದರು.

**ಬಲ್‌ಗಾರಿಯದ ತಂಡದೊಂದಿಗೆ ಭೇಟಿ**

* ಕಾರ್ಯಕ್ರಮದನ್ವಯ ಬಲ್ಗೇರಿಯಾ ತಂಡದವರೊಡನೆ ಬೇಟಿಗಾಗಿ ಹುಝೂರ್[ಅತಬಿಅ] 6 ಗಂಟೆಗೆ ಮಸ್ಜಿದ್ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಬಲ್ಗೇರಿಯಾ ದೇಶದಿಂದ ಬಂದ ತಂಡ ಆಗಮಿಸಿ ಭೇಟಿ ಮಾಡುವ ಭಾಗ್ಯ ಪಡೆದರು.

ಬಲ್ಗೇರಿಯಾದಿಂದ ಈ ವರ್ಷ 76 ಜನರ ಒಳಗೊಂಡ ತಂಡ ಜಲ್ಸ ಸಾಲಾನದಲ್ಲಿ ಭಾಗವಹಿಸಿತ್ತು. ಅದರಲ್ಲಿ 50 ಜನರು 30 ಗಂಟೆಯಷ್ಟು ದೀರ್ಘ ಪ್ರಯಾಣ ಬೆಳೆಸಿ ಬಂದವರಾಗಿದ್ದರು. ಈ ತಂಡದಲ್ಲಿ 43 ಜನರು ಕ್ರೈಸ್ತರು ಮತ್ತು ಅಹ್ಮದಿಯೇತರರಾಗಿದ್ದರು.

ಹುಝೂರ್[ಅತಬಿಅ] ತಂಡ ಸದಸ್ಯರ ಕುಶಲೋಪರಿ ವಿಚಾರಿಸಿದರು. ಮತ್ತು ನುಡಿದರು. ಜಲ್ಸ ಹೇಗಿತ್ತು. ನಿಮ್ಮ ಅಭಿಪ್ರಾಯಗಳೇನು?

* ತಂಡ ಸದಸ್ಯರೊಬ್ಬರು ಹೇಳಿದರು. ನಾನು ಈ ಹಿಂದೆಯೂ ಜಲ್ಸದಲ್ಲಿ ಭಾಗವಹಿಸಿದ್ದೇನೆ. ಈ ಸಲ ತುಂಬ ಹಿತವೆನಿಸಿತು. ಜಲ್ಸದ ಎಲ್ಲಾ ಏರ್ಪಾಡುಗಳು ಉತ್ತಮವಾಗಿದ್ದವು. ನಾವು ಭಾಷಣಗಳನ್ನು ತುಂಬ ಗಮನವಹಿಸಿ ಕೇಳಿದೆವು. ಹುಝೂರ್[ಅತಬಿಅ]ರ ಸಂಬೋಧನೆಗಳು ನಮ್ಮ ಮೇಲೆ ಆಳವಾದ ಪ್ರಭಾವ ಬೀರಿವೆ. ಅಹ್ಮದಿಯಾ ಜಮಾಅತ್ ಲೋಕವನ್ನು ಕೆಡಕುಗಳಿಂದ ತಡೆಯಲು ಮತ್ತು ಶಾಂತಿಯನ್ನು ಸ್ಥಾಪಿಸಲು ಒಂದು ಸಕಾರಾತ್ಮಕ ಪಾತ್ರ ನಿರ್ವಹಿಸುತ್ತಿದೆ.

* ಜಾಮಿಯ ಅಹ್ಮದಿಯಾ ಜರ್ಮನಿಯಲ್ಲಿ ಓರ್ವ ಬಲ್ಗೇರಿಯನ್ ವಿದ್ಯಾರ್ಥಿ ಅಝಿಝುಂ ಅಬ್ದುಲ್ಲ ಶಿಕ್ಷಣ ಪಡೆಯುತ್ತಿದ್ದಾರೆ. ಅವರ ಹೆತ್ತವರು ಪ್ರಶ್ನೆ ಕೇಳಿದರು. ಅಬ್ದುಲ್ಲ ಚೆನ್ನಾಗಿ ಕಲಿಯುತ್ತಿದ್ದಾನೆಯೇ, ಆಗ ಹುಝೂರ್[ಅತಬಿಅ] ಹೇಳಿದರು. ಅವನು ಕಲಿಯುತ್ತಿರುವ ಶಿಕ್ಷಣ ತುಂಬ ಉತ್ತಮವಾಗಿದೆ. ಎಷ್ಟು ಕಲಿತಿದ್ದಾನೆ ಎಂದು ನಾನು ಅರಿಯುವುದಿಲ್ಲ. ಅಂತೂ ಜಾಮಿಯಾ ಉತ್ತೀರ್ಣ ಆದ ನಂತರ ನಾವು ಅವರಿಗೆ ತರಬೇತಿ ಸಹ ನೀಡುತ್ತೇವೆ. ಬಲ್ಗೇರಿಯಾದ ಒಬ್ಬ ಉತ್ತಮ ಮುಬಲ್ಲಿಬನಾಗಿ ಹೊರಬರುವವರು ಎಂದು ನಾನು ಆಶಿಸಿರುತ್ತೇನೆ. ಅಲ್ಲಾಹನು ಆ ಭಾಗ್ಯ ದಯಪಾಲಿಸಲಿ. ನಮ್ರತೆಯಿಂದ ತನ್ನ ವಖ್ಫಿನ ಹಕ್ಕನ್ನು ಪಾಲಿಸುವವನಾಗಲಿ. ಅಬ್ದುಲ್ಲ ಅವರ ತಂದೆಯವರು ತನ್ನ ಮಗ ಮುಬಲ್ಲಿಗ್‌ನಾದ ಪ್ರಯುಕ್ತ ಒಂದು ದಿನ ಹೆಮ್ಮೆಪಡುವವರಾಗುವರು.

ಅಬ್ದುಲ್ಲ ತಾಯಿ ಹೇಳಿದರು. ನನ್ನ ಮಗನಿಗಾಗಿ ಜಮಾತಿಗೆ ಉಪಯುಕ್ತವಾಗುವಂತಹ ಒಂದು ವಿವಾಹ ಸಂಬಂಧ ಬೇಕಾಗಿದೆ. ಅದು ಪಾಕಿಸ್ತಾನಿ ಹುಡುಗಿಯಾಗಲಿ ಅಥವಾ ಇನ್ನಿತರ ಯಾವುದಾಗಲಿ ಜಮಾಅತಿನ ಹಿತಕ್ಕಾಗಿ ಒಂದು ಒಳ್ಳೆಯ ಸಂಬಂಧ ಸಿಕ್ಕಿದರೆ ಸಾಕು.

* ಮಹಿಳೆಯೋರ್ವಳು ಹೇಳಿದರು. ನಾನು ಯಮನ್ ದೇಶಕ್ಕೆ ಸಂಬಂಧಿಸಿದವಳಾಗಿದ್ದೇನೆ. ಬಲ್ಗೇರಿಯಾದಲ್ಲಿ (ಪಿ.ಹೆಚ್.ಡಿ) ಶಿಕ್ಷಣ ಪಡೆಯುತ್ತಿದ್ದೇನೆ. ಹುಝೂರ್[ಅತಬಿಅ] ನುಡಿದ ಮಾತು. "ಯಾರು ತನ್ನನ್ನು ಮುಸಲ್ಮಾನ ಎಂದು ಹೇಳಿಕೊಳ್ಳುತ್ತಾನೋ ಅವನು ಮುಸ್ಲಿಮನಾಗಿದ್ದಾನೆ." ಎಂಬ ಮಾತು ನನ್ನ ಮೇಲೆ ಆಳವಾದ ಪ್ರಭಾವ ಬೀರಿದೆ.

**(ಮುಂದುವರಿಯುವುದು)**

---

*(ಪುಟ ಸಂಖ್ಯೆ 11ರ ಉಳಿದ ಭಾಗ)*

ದೇವರುಗಳನ್ನು ಸೃಷ್ಟಿಸಲಾಗಿದೆ. ಉದಾಹರಣೆಗೆ ಮರಿಯಮನ ಪುತ್ರ ಏಸು ಮತ್ತು ರಾಮಚಂದ್ರ ಮತ್ತು ಕೃಷ್ಣ ಮತ್ತು ಬುದ್ಧ ಮುಂತಾದವು, ಇವುಗಳನ್ನು ಪುರಾವೆಗಳಿಲ್ಲದೇ ಸೃಷ್ಟಿಸಲಾಗಿದೆ. ಅದಕ್ಕೆ ಉದಾಹರಣೆಯಾಗಿ ಹೀಗೆ ಹೇಳಬಹುದು. ಒಂದು ಮೇಕೆಯನ್ನು ಮನುಷ್ಯನೆಂದು ಕೊಂಡಿದ್ದೇವೆ. ಅದಾಗಿಯೂ ಅದು ಮಾತನಾಡಲು ಸಾಧ್ಯವಿಲ್ಲ. 'ಮನುಷ್ಯರ ರೀತಿಯಲ್ಲಿ ನಡೆಯಲು ಸಾಧ್ಯವಿಲ್ಲ. ಮನುಷ್ಯರ ರೀತಿ ಅದರ ರೂಪವೂ ಇಲ್ಲ. ಮನುಷ್ಯರ ರೀತಿ ಬುದ್ಧಿಯೂ ಹೊಂದಿಲ್ಲ. ಅಂತೂ ಮನುಷ್ಯನಿಗಿದ್ದಂತಹ ಯಾವ ಗುಣಗಳು ಇಲ್ಲ. ಹೀಗಿರುವಾಗ ನೀವು ಮೇಕೆಯೊಂದನ್ನು ಮನುಷ್ಯನೆಂದು ಹೇಳಬಹುದೇ? ಹಾಗೆ ನೋಡಿದರೆ ಹಲವು ವಿಷಯಗಳಲ್ಲಿ ಮೇಕೆಗೆ ಮತ್ತು ಮನುಷ್ಯನಿಗೆ ಹೊಂದಾಣಿಕೆ ಇದೆ ಉದಾಹರಣೆಗೆ ಮೇಕೆ ತಿನ್ನುತ್ತದೆ. ಹಾಗೆಯೇ ಮನುಷ್ಯನು ತಿನ್ನುತ್ತಾನೆ. "ಮೇಕೆಯೂ ಮೂತ್ರ ಮತ್ತು ಹೆಕ್ಕಳೆ ಹಾಕುತ್ತದೆ ಮನುಷ್ಯನು ಹಾಗೆ ಮಾಡುತ್ತಾನೆ ಆದರೆ ಯಾರಾದರೂ ಹೇಳಬಹುದೇ (ಮಸೀಹ, ರಾಮಚಂದ್ರ ಮುಂತಾದವರಿಗೆ ದೇವನೊಂದಿಗೆ ಯಾವುದಾದರೊಂದು ವಿಶಿಷ್ಠ ಸಂಬಂಧವಿತ್ತೆಂದು ಸಾಬೀತುಪಡಿಸಬಹುದೇ. (ಇಸ್ಮತ್ ಆಂಬಿಯಾ, ರೂಹಾನಿ ಖಝಾಈನ್, ಸಂಪುಟ-18, ಪುಟ-689)

ಮುಂದಿನ ಸಂಚಿಕೆಯಲ್ಲಿ ಇಂನ್‌ಶಾಅಲ್ಲಾ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಂ ರವರ ಸ್ಥಾನಮಾನ ಮತ್ತು ಅವರ ಮಹೋನ್ನತ ಪವಾಡಗಳ, ದೃಷ್ಟಾಂತಗಳ ತುಲನೆ. ಹಝ್ರತ್ ಈಸ(ಅ) ರ ಸ್ಥಾನಮಾನ ಮತ್ತು ಅವರ ಪವಾಡಗಳ, ದೃಷ್ಟಾಂತಗಳೊಡನೆ ತೋರಿಸಲಾಗುವುದು.

**(ಮನ್‌ಸೂರ್ ಅಹ್ಮದ್ ಮಸರೂರ್)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.